REGISTERED NO. M. 1393.

ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಸಂಪುಟ ೧೪ VOL. XVIII

ಮಂಗಳೂರು, ೧೯೩೭ನೇ ಇಸವಿ ಜನವರಿ ತಾರೀಕು ೧೨ನೇ ಮಂಗಳವಾರ
MANGALORE, TUESDAY, JANUARY 12, 1937.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಕಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಶಸ್ತ್ರಸ್ತದ್ವದವಿಷು ಸಂಭವಹೃತಿಪ್ರಾಗಲ್ಭ್ಯಮಾತ್ತೋಽನ್ವಹಂ
ಕೀರ್ಯಾದ್ವಿಶ್ವಜನೀನವೃತ್ತಿಚತುರಶ್ರೀಕಂಠಕಂಠೀರವಃ ॥

ನರರ ಕುಲಗಳೊಳಾರ್ಯವಂಶವು, । ಧರೆಯ ನೆ
ವರಸುತನಗಳೊಳಾಂಗ್ಕರೊಡೆತನ, ನುಡಿಗ
ಶಿರುಳಗನ್ನಡವೊಂದಕೊಂದೊ । ಪ್ರಿರು
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿ

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೆ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ನೊಡಿನು ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS,
Madras Branch Secretaries.

1936
OUR VALUATION YEAR

Take a BOMBAY LIFE Policy now, and share in the profits



Branches at: P. B. 337 Mount Rd. Madras. | Visveswarapuram Circle Bangalore City. | Soumyalayam Puthiyara Calicut. | Car Street Mangalore. | Udipi S. India. | Char Bomb

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

—ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ
ವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ,
ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿ
ಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ,
ತೋರಿಬರುವುದು.

ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪ್ಪು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು

ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಸ್", ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ.

000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂ
ತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ತ್ತ ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷ
ಂಟಿಯಾದ ಜೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ
(3) ಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಆಶಕ್ತತೆಯ ರಿಯಾಯಿತಿ; (5) ವೈದ್ಯಪರೀ
ರಿನಲ್ಲಿ 50 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ
ಮ್ಮ ಪ್ರತಿನಿಧಿ ಭೇದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

ತಂಗಳಲ್ಲಿ 10 ಕ್ಕೂ ಹೆಚ್ಚು ಪಾಲಿಸಿಗಳನ್ನು ರಿಪ್ರೊಡಕ್ಟಿವ್ ಆಗಿ ಸಮರ್ಪಿಸಿರುವ ಸೂಪರ್‌ವೈಸರ್‌ಗಳು ಮೊದಲಾದವರೂ
ಳಗಾಗಿ ತಮ್ಮ ಹೆಸರನ್ನೂ ವಾರ್ಷಿಕ ಫೀ ರೂ. 1/—ನ್ನೂ ಕಳುಹಿಸಬೇಕಾಗಿ ಅರಿಕೆ ಮತ್ತು ಅವರು
ಕೇಟುಗಳನ್ನು ಜೀವವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ

ತಿರುಪತಿ ಬಲಿಜಾ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟರುಗಳು.

ನಕ್ಕು ನಗಿಸಿರಿ!
ಅಳಿಸಿ ನಗಿಸಿರಿ!

ಐದನೆಯ ವರ್ಷಾರಂಭ
ಜನವರಿ ೧೯೬೭

ನಗು-ನಂದ

ರಸಭರಿತ ಸಚಿತ್ರ ಮಾಸಪತ್ರಿಕೆ

ನಗೆಯ ನಿಲೆಯೇ ಆನಂದದ ಬೀಡು! ಇಂದು ನಕ್ಕ ನಗೆಯು ಮುಂದಿನ ರೋಗಕ್ಕೆ ಮದ್ದು ನಗೆಯ ತಿರುಳನ್ನರಿತವನು ಸರ್ವಜನಪ್ರಿಯನು. ಜನಮನರಂಜನೆಯ ಲೇಖನ, ಕಥೆ ಕವಿತೆ, ವ್ಯಂಗ್ಯ ಚಿತ್ರಗಳಿಂದ ರಂಜಿಸುವ 'ನಗುವ-ನಂದ'ನು ನಿಮ್ಮನ್ನು ಆನಂದಗೊಳಿಸುವುದಲ್ಲದೆ ನಿಮ್ಮ ಗೃಹದಲ್ಲಿ ನಗೆಯ ಲಹರಿಯನ್ನೇ ಹರಿಸುವನು.

ಷ್ಟೇ ಚಂದಾ:
ಕ್ಕೆ ರೂಪಾಯಿ.

ಷ್ಟ ಸ್ವತಃ:
ಳಿದಾ ಕೆ.

ಸೋಲ್ ಏಜೆಂಟರು:
ಸುಬೋಧ ಸಾಹಿತ್ಯ ಭಂಡಾರ, ಬೆಂಗಳೂರು ನಗರ.

ERN PRINTING AT MODERATE RATES!

CONSULT

The Saraswathi Printing Works, Limited,

CANTONMENT, MANGALORE.

ಪ್ರತಿ ಮಂಗಳವಾರವೂ ಶುಕ್ರವಾರವೂ ಪ್ರಕಟವಾಗುವ

'ಕಂಠೀರವ' ಪತ್ರಿಕೆಯನ್ನು ಓದಿರಿ.

ಒಂದಕ್ಕೆ ರೂ. ೦—೧—೦. ಶುಕ್ರವಾರ ಸಂಚಿಕೆ ಒಂದಕ್ಕೆ ರೂ. ೦—೦—೬.

OLD — FAMOU

EAST & WEST INSURANCE CO., LTD.

Bonus declared Rs. 15 per thousand per annum

Insurance in Force over Rs. 1,00,00,000

Prompt settlement of claims.

Annual premium incom over Rs. 5,00,000

Life Fund over Rs. 10,00,000

Low rates of premiums and various attractive plans.

Attractive and liberal agency contracts are offered to honest, influential gentlemen

Inquiries solicited at:—

PADUBIDRI BROS.,
Chief Agents.
Maharashtra & Karnataka & East & West Khandesh Dist., BOMBAY 8.

ಕೂದಲು ರಂಗು ಬಿಡಿ.

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವದು ನಿಲ್ಲುತ್ತದೆ. ಬೇರಿನಿಂದಲೇ, ಬಿಳಿ ಕೂದಲು ಕಪ್ಪಾಗಿ ಬೆಳೆದು, 60 ವರ್ಷದ ವರೆಗೂ ಹಾಗೇ ಉಳಿಯುತ್ತದೆ. ಹಾಗಾಗದಿದ್ದರೆ, ಎರಡಪ್ಪು ಬೆಲೆಯನ್ನು ಹಿಂದಿರುಗಿಸುವೆವೆಂದು ಗ್ಯಾರೆಂಟಿ. ಕೆಲವು ಬಿಳಿ ಕೂದಲುಗಳಿದ್ದರೆ, ರೂ. 3ರ ಬಾಟಲಿಗೂ, ಹೆಚ್ಚು ಬಿಳಿ ಕೂದಲಿದ್ದರೆ ರೂ. 5ರ ಬಾಟಲಿಗೂ ಅರ್ಧ ಭಾಗಕ್ಕೂ ಹೆಚ್ಚಾಗಿ ಅಥವಾ ಪೂರಾ ಭಾಗದಲ್ಲಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೂ ಆರ್ಡರ್ ಮಾಡಿ.

BAL KALA STORES,
12, 28-7. **P. O. Kansi Simri (Darbhanga.)**

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ,

ಮಂಗಳೂರು.

(ESTD. 1931.)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯ ಶಾಸ್ತ್ರೀಯವಾಗಿ ಕಲಿಯಬೇಕೆನ್ನುವವರಿಗೆ ಸುಸಂದರ್ಭ.

ಮಾಸ್ಟರ್ ಎಚ್. ನಾರಾಯಣ ರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್ ಮತ್ತು ಉಭಯಸಂಗೀತವಿದ್ಯಾವಿಶಾರದ.

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನ್‌ಗಳಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಪೈಕಿ ೧೪ ಆಣೆ, ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ. (S.M.C.)

ಬಾಲಾರ್ಕಮಧು

(ರಿಜಿಸ್ಟರ್ಡ್)

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ 0—12—0. ಟ. ಖ. 0—9—0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ—

ಯಂ. ವಿ. ಪ್ರಸಾದಿಕ ಔಷಧಾಲಯ,
ತಿವಮೊಗ್ಗಾ, (ಮೈಸೂರು ಸೀಮೆ).

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶರೀರಕ ಯೋಗ್ಯತೆಯ
ರಮ್ಯವಾದ ಅನುಭವವಾಗಿದೆ
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಿಂಗಳೂರು.
GOVT. SOAP FACTORY,
BANGALORE.

ಶಿಶುಸಂಬಂಧವಾದ

ಯಕೃತ್ತು ಮತ್ತು ಪ್ಲೀಹದೋಷಗಳಿಗೆ

ಶಿಶುಸಂಬಂಧವಾದ ಯಕೃತ್ತು ಮತ್ತು ಪ್ಲೀಹದೋಷಗಳು ದೇಹದಲ್ಲಿ ಅಪರೂಪವಾಗಿ ಬರುವ ಜ್ವರದಿಂದಲೂ ಆಗಾಗ್ಗೆ ಮಲಬದ್ಧತೆಯಿಂದಲೂ ಆರಂಭವಾಗಿ, ಇದು ಗಣನೆಗೆ ಬಾರದೆ ಕ್ರಮೇಣ ಜ್ವರ, ಹೊಟ್ಟೆ ಬೆಳೆಯುವಿಕೆ, ವಾಂತಿ, ಲಕ್ಷಿಸಕ್ಕ ಮಲಬದ್ಧತೆ ಅಥವಾ ಅನೇಕ ವೇಳೆ ಮಲವಿಸರ್ಜನೆಯುಂಟಾಗುತ್ತದೆ. ಶಿಶುವು ತನ್ನ ರುಚಿಯನ್ನೂ, ಉಲ್ಲಾಸವನ್ನೂ ಕಳಕೊಳ್ಳುತ್ತದೆ ಮತ್ತು ಕರ್ಕಶ ಸ್ವಭಾವಿಯೂ, ಕೃಶವೂ ಆಗುತ್ತಾ ಬರುತ್ತದೆ. ಪೋರೆಯು ಸಪ್ಪನಾಗಿ ಮೂತ್ರವು ಬಣ್ಣವನ್ನು ಹೊಂದಿ ಅದನ್ನು ಅಲ್ಲಿಯೇ ಆರಲು ಬಿಟ್ಟರೆ ಬಿಳಿ ಮಂಡಲವನ್ನು ಬಿಡುತ್ತದೆ. ಮಲವು ಬಹಳವಾಗಿಯೂ, ದೀರ್ಘವಾಗಿಯೂ, ಕೆಸರಿನಂತೆಯೂ ಆಗಿ ಪಚ್ಚೆಯಾ ಬಿಳಿ ವರ್ಣವುಳ್ಳದಾಗಿ ದುರ್ವಾಸನೆಯನ್ನು ಕೊಡುತ್ತದೆ.

ಯಕೃತ್ತು ಬಹಳ ನೋವನ್ನುಂಟುಮಾಡುತ್ತದೆ, ಜ್ವರವು ಏರುತ್ತದೆ ಮತ್ತು ಅರಸಿನ ಮುಂಡಿಗೆಯು ಆರಂಭವಾಗುವದು; ಅನಂತರ ವೃದ್ಧಿಯಾಗಿ, ಚರ್ಮ, ಕಣ್ಣುಗಳು ಮತ್ತು ಮೂತ್ರ ಕಡುಹಳದಿ ಬಣ್ಣವನ್ನು ಹೊಂದುತ್ತವೆ. ಕಾಲುಗಳು, ಕೈಗಳು ಮತ್ತು ಕೆಲವು ಸಲ ಮುಖ ಕೂಡ ಬಾತುಕೊಳ್ಳುತ್ತವೆ. ಹೊಟ್ಟೆಯ ಮೇಲಣ ನರಗಳು ಕಾಣುವಂತೆ ಹೊರಕ್ಕೆ ಬರುತ್ತವೆ. ರೋಗಿಯು ಸರಿಯಾದ ಔಷಧೋಪಚಾರವನ್ನು ಪಡೆಯದಿದ್ದಲ್ಲಿ ಮೂರ್ಛಾಸ್ಥಿತಿಯಲ್ಲಿ ಮರಣವನ್ನು ಹೊಂದಬಹುದು.

ಅನೇಕ ವೈದ್ಯಕೀಯ ಜನರು ಈ ರೋಗವನ್ನು ಯಾವ ಔಷಧವೂ ಅಂಕೆಗೆ ತರುವದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ರುಜುವಾತುಗಳು ಸಿದ್ಧಾಂತಿಸುವವೇನೆಂದರೆ ಈ ಭಯಂಕರ **ಯಕೃತ್ತು ಮತ್ತು ಪ್ಲೀಹದೋಷಗಳು** ಗುಣಕಾರಿಯಾಗುವ ಔಷಧೋಪಚಾರವೆಂದರೆ **ಜಮ್ಮಿ ವೆಂಕಟರಮಣಯ್ಯನವರ ಲಿವರ್ ಕ್ಯೂರ್.**

ಪತ್ರಕಗಳಿಗೂ ವಿಶೇಷ ಮಾಹಿತಿಗೂ ಬರೆಯಿರಿ:—

ಡಾಕ್ಟರ್ ಜಮ್ಮಿ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್
ಮೈಲಾಪುರ್, ಮದ್ರಾಸು

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಪ್ರಥಮ ಮೌಲ್ಯವೇತನದಲ್ಲಿಯೇ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗಿದೆ.

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ನಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

OVER ONE & A QUARTER MILLION

We commence the New Year with an increase of

OVER ONE & A QUARTER MILLION RUPEES

in our resources.

The Total Working Funds of the Syndicate have risen by more than Rs. 1,250,000/— in the year 1936.

• •

WE OFFER THANKS

Our Directors offer hearty thanks to the numerous clients and to the Public as well, for their ever increasing patronage and wish one and all

A VERY HAPPY
AND
PROSPEROUS NEW YEAR.

The Canara Industrial & Banking Syndicate, Ltd.

Head Office: UDIPI.

THE NEDUNGADI BANK, LIMITED.

ದಿ ನಡುಬೂಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸ್:—ಕಲ್ಲಿಕೋಟೆ. (ಸ್ಥಾಪನೆ 1899ರಲ್ಲಿ).

ಶಾಖೆಗಳು:—ಒಟ್ಟಪಾಲಂ, ಪಾಲ್ಘಾಟ್, ಬಡಗರ, ತಿರೂರ್, ಎರ್ನಾಕುಳಂ, ತ್ರಿಚೂರ್, ಅಲ್ಲಪ್ಪಿ, ಮಂಗಳೂರು, ತಲಚೇರಿ, ತ್ರಿವೇಂಡ್ರಮ್, ಮದ್ರಾಸ್, ಕೊಯಂಬುತ್ತೂರು, ಕೊಚ್ಚಿ, ಮುಂಜೇರಿ, ಕ್ಯೊಲಾಂಡಿ ಮತ್ತೂ ಕುಮಾರಮಂಲ್ಲೂರು.

ಇಂಡಿಯದ ಮತ್ತೂ ಬರ್ಮದ ಯಾವತ್ತು ಪ್ರಾಮುಖ್ಯ ಪಟ್ಟಣಗಳಲ್ಲಿಯೂ ಏಜನ್ಸಿಗಳು.

ಪ್ರತಿಯೊಂದು ಬಗೆಯ ಬ್ಯಾಂಕಿಂಗ್ ವಹಿವಾಟುಗಳು.

ಎಲ್ಲ ಶೇವಣಾತಿಗಳಿಗೂ ಆಕರ್ಷಕವಾದ ಬಡ್ಡೀ ದರಗಳು.

ಚೆಯರ್‌ಮ್ಯಾನರು:—ರಾವ್‌ಬಹದೂರ್ ಡಾಕ್ಟರ್ ಪಿ. ಕೆ. ವಾರಿಯರ್, ಮದ್ರಾಸಿನ ಸರ್ಜನ್ ಜನರಲರ (ನಿವೃತ್ತ) ಪರ್ಸನಲ್ ಅಸಿಸ್ಟಾಂಟರು.

ಯಾವತ್ತು ಪತ್ರವ್ಯವಹಾರವೂ ಸೆಕ್ರಟರಿಗಳೊಂದಿಗೆ.

ಈ ವಾರದ ಕಥೆ:—

ಸರಳೆಯ ಮಕ್ಕಳು.

(ಶ್ರೀಮತಿ ಎಸ್. ಆರ್. ಜಯಲಕ್ಷ್ಮೀ, ಮೈಸೂರು)

ಶಂಕರನು ಈ ಸಾರಿ ಬೇಸಿಗೆಯ ರಜೆಯಲ್ಲಿ ಎಲ್ಲಿಗೆ ಹೋಗುವುದೆಂದು ಆಲೋಚಿಸುತ್ತಿದ್ದನು. ಅವನಿಗೆ ಮದರಾಸಿನಲ್ಲಿ ಇದ್ದು ಇದ್ದು ಬಹು ಬೇಸರವಾಗಿಹೋಗಿತ್ತು. ಈ ಸಾರಿ ಗ್ರಾಮವಾಸಕ್ಕೆ ಹೋಗಬೇಕೆಂದು ಅವನ ಆಸೆ. ಅದೇ ರೀತಿ ಅವನ ಇಚ್ಛಾನುಸಾರವಾಗಿ ಅವನ ಸಹೋದರಿ ಸರಳೆಯು ಈ ಸಾರಿ ರಜೆಯಲ್ಲಿ ತಮ್ಮೂರಾದ ಕಾಂತಿಪುರಕ್ಕೆ ಬಂದು ಒಂದು ತಿಂಗಳಾದರೂ ಇದ್ದು ಹೋಗೆಂದು ಅವನಿಗೆ ಕಾಗದ ಹಾಕಿದಳು. ಅವನು ತನ್ನ ತೀರ್ಮಾನವನ್ನು ತನ್ನ ಸ್ನೇಹಿತನೊಬ್ಬನ ಸಂಗಡ ಹೇಳುತ್ತಿದ್ದಾಗಲೇ ಈ ಕಾಗದವೂ ಅವನ ಕೈಸೇರಿತು. ಆಗ ಅವನಿಗೆ ಎಷ್ಟೊಂದು ಸಂತೋಷವಾಗಿರಬಹುದೆಂಬುದನ್ನು ವಾಚಕರೇ ಊಹಿಸಿ ನೋಡಿರಿ.

ಶಂಕರನು ಬಹು ಕುತೂಹಲದೊಂದಿಗೆ ಮಾರನೇಯ ದಿವಸವೇ ಕಾಂತಿಪುರಕ್ಕೆ ಪ್ರಯಾಣ ಮಾಡಿದನು. ಆ ಊರನ್ನು ಗ್ರಾಮವೆಂದೇ ಹೇಳುತ್ತಾರೆ. ಆದರೆ ಅದು ಗ್ರಾಮಕ್ಕೆ ಸೇರಿದಂತೆ! ಅಷ್ಟೊಂದು ಚಿಕ್ಕದೇನೂ ಇಲ್ಲ. ಆ ಊರಿಗೆ ಒಂದು ಮುನಿಸೀಫ್ ಕೋರ್ಟು, ಮೇಜಿಸ್ಟ್ರೇಟ್ ಕೋರ್ಟೊಂದು, ಆಸ್ಪತ್ರೆ, ಸಬ್ ಡಿವಿಜನ್ ಆಫೀಸ್ ಇವೆಲ್ಲವೂ ಇವೆ. ಆಗಿಂದಾಗ್ಗೆ ಕಾಂತಿಪುರಕ್ಕೆ ನಾಟಕ ಮಂಡಲಿ, ಸರ್ಕಸ್‌ಗಳೂ ಕೂಡ ಬಂದು ಬಿಡಾರ ಹಾಕುತ್ತಿರುತ್ತವೆ. ಪುಟ್ಟ ಸಿನೀಮಾ ಥ್ಯೇಟರ್ ಒಂದು ಕೂಡ ಇದೆ. ಶಂಕರನನ್ನು ಇದಿರುಗೊಳ್ಳಲು ಅವನ ಪುಟ್ಟ ಸೋದರಳಿಯನಾದ ಮಾಧುವೂ, ಸೋದರ ಸೊಸೆಯಾದ ಜಾನಕಿಯೂ, ಭಾವಂದಿರೂ ಕಾಂತಿಪುರದ ರೈಲ್ವೇ ಸ್ಟೇಷನಿಗೆ ಬಂದಿದ್ದರು. ಶಂಕರನ ಭಾವನವರು ಆ ಊರಲ್ಲಿ ಪ್ರಮುಖ ವಕೀಲರಾಗಿರುವರು. ಶಂಕರನನ್ನು ಕಂಡೊಡನೆಯೇ ಮಾಧುವೂ, ಜಾನಕಿಯೂ 'ಮಾವ, ಮಾವ, ಪೆಪ್ಪರ್‌ಮೆಂಟ್ ಎಲ್ಲಿ? ಜಾಕೇಟ್ ಎಲ್ಲಿ?' ಎಂದು ಅವನನ್ನು ತಬ್ಬಿಕೊಂಡು ಕೇಳತೊಡಗಿದರು. ಆದರೆ ಶಂಕರನಾದರೋ ತಾನು ಕಾಂತಿಪುರಕ್ಕೆ ಹೊರಡುವ ಸಡೆಗರದಲ್ಲಿ ಮಕ್ಕಳಿಗೆ ಏನನ್ನು ತರುವುದಕ್ಕೂ ಮರೆತುಬಿಟ್ಟನು. ತನ್ನ ಮಾನವನ್ನು ಕಾಪಾಡಿಕೊಳ್ಳಲು, ಪೆಟ್ಟಿಗೆಯೊಳಗೆ ಇರುವುದಾಗಿಯೂ ಮನೆಗೆ ಹೋದಾನಂತರ ತೆಗೆದುಕೊಡುವುದಾಗಿಯೂ ಮಕ್ಕಳಿಗೆ ಹೇಳಬೇಕೆನ್ನುವಷ್ಟರಲ್ಲಿಯೇ, ಅವನ ಭಾವನವರಾದ ನಾರಾಯಣರಾಯರು 'ಶಂಕರಾ, ಇಗೋ ನನ್ನ ಸ್ನೇಹಿತರೊಬ್ಬರು ಕರೆಯುತ್ತಲಿರುವರು. ಅವರೊಡನೆ ಸ್ವಲ್ಪ ಹೊತ್ತು ಸಂಭಾಷಿಸಿಬಿಟ್ಟು, ಅನಂತರ ಮನೆಗೆ ಬರುವೆನು. ನೀನು ಸಾಮಾನುಗಳನ್ನು ಸೇವಕನ ಕೈಯಲ್ಲಿ ಒಪ್ಪಿಸಿ, ಮಕ್ಕಳೊಂದಿಗೆ ಮನೆಗೆ ಹೋಗು.' ಎಂದು ಹೇಳಿ ಹೊರಟುಹೋದರು. ಶಂಕರನಿಗೂ ಬಹಳ ಸಂತೋಷವಾಯಿತು. ಮಕ್ಕಳನ್ನು ಅಂಗಡಿಬೀದಿಯ ಮಾರ್ಗವಾಗಿ ಕರೆದುಕೊಂಡು ಹೋಗಿ ಅವರಿಗೆ ಸ್ವಲ್ಪ ತಿನ್ನಲು ಕೊಂಡು ಕೊಟ್ಟು, ಅನಂತರ ಮನೆಗೆ ಹೋಗೋಣವೆಂದು ಮಕ್ಕಳೊಡನೆ ಅಂಗಡೀಬೀದಿಗೆ ಹೊರಟನು. ದಾರಿಯಲ್ಲಿ ಇಬ್ಬರು ಮಕ್ಕಳು 'ನನ್ನನ್ನು ಎತ್ತಿಕೋ ಮಾವ' 'ಊಂ, ನನ್ನನ್ನೇ ಎತ್ತಿಕೊಳ್ಳಬೇಕು' ಎಂದು ಜಗಳವಾಡಿದರು. ಶಂಕರನಾದರೋ ಮಕ್ಕಳನ್ನು ಅಷ್ಟು ಎತ್ತಿಡವನೇ ಅಲ್ಲ ಪಾಪ. ಅವನ ಮಾತಾಪಿತೃಗಳಿಗೆ ಅವನೇ ಕಡೆಯವನು ಮುದ್ದು ಕಂದ. ಅವನ ಇಬ್ಬರು ಅಕ್ಕಂದಿರೂ ಗಂಡನ ಮನೆಗೆ ಹೊರಟುಹೋದರು. ಅಲ್ಲದೆ ಅವನು ಮದರಾಸಿನಲ್ಲಿ ಹೊಸ್ಟಲಿನಲ್ಲಿದ್ದುಕೊಂಡು ಲಾ ಕಾಲೇಜಿನಲ್ಲಿ ಓದುತ್ತಿದ್ದಾನೆ. ಇದೇ ಕಡೇ ವರ್ಷ. ಅವನು ಅಕ್ಕಂದಿರ ಮನೆಗೆ ವಿಶೇಷವಾಗಿ ಹೋಗುತ್ತಲಿರಲಿಲ್ಲ. ರಜಾ ಬಂದರೆ ಬೆಂಗಳೂರಲ್ಲಿ ಉದ್ಯೋಗದಿಂದ ವಿಶ್ರಾಂತಿ ಪಡೆದು, ವಾಸಿಸುತ್ತಲಿರುವ ತಾಯಿತಂದೆಯರ ಹತ್ತಿರ ಹೋಗಿ ಇದ್ದು ಬರುವದು ವಾಡಿಕೆ.

ಶಂಕರನು ಅಂಗಡಿಯಲ್ಲಿ ಒಂದೇ ಸಮನಾದ ಎರಡು ಬಿಸ್‌ಕತ್ ಪೊಟ್ಟಣಗಳನ್ನು ಕೊಂಡು, ಇಬ್ಬರಿಗೂ ಕೊಟ್ಟನು. ತಕ್ಷಣ ಮಾಧುವು 'ನನ್ನ ಪೊಟ್ಟಣ ಚಿಕ್ಕದು. ನನಗೆ ಅಕ್ಕನದು ಬೇಕು' ಎಂದು ಅಳತೊಡಗಿದನು. ಜಾನಕಿ ತನ್ನ ಪೊಟ್ಟಣವನ್ನು ಕೊಡುವುದಿಲ್ಲವೆಂದು ಹಠ ಹಿಡಿಯುವಳು. ಅನಂತರ ಅಂಗಡಿಯವನಿಂದ ಬೇರೊಂದು ಪೊಟ್ಟಣವನ್ನು ಬದಲಾಯಿಸಿ ಕೊಟ್ಟರೆ ಜಾನಕಿ 'ನನಗೂ ಅದೇ ಬೇಕು' ಎಂದು ಅತ್ತಳು. ಶಂಕರನು ಪಾಪ ಎಷ್ಟೆಷ್ಟೋ ಉಪಾಯ ಮಾಡಿ ಅವರನ್ನು ಸಮಾಧಾನ ಮಾಡಿದರೂ ಇಬ್ಬರೂ ಸಮಾಧಾನ ಹೊಂದಲಿಲ್ಲ; ಹಿಡಿದದ್ದೇ ಹಠ. ಅವರ ಹಠವನ್ನು ಹೋಗಲಾಡಿಸುವುದಕ್ಕಾಗಿ ತುಂಬಾ ಪೆಪ್ಪೆಮೆಂಟುಗಳನ್ನು ಕೊಂಡುಕೊಂಡು, ಎರಡು ಪೊಟ್ಟಣಗಳಾಗಿ ಕಟ್ಟಿ ಒಬ್ಬರಿಗೊಂದು ಹೊಟ್ಟನು. ಇಬ್ಬರೂ ಅವನ್ನು ಬಚ್ಚಿಟ್ಟುಕೊಂಡು 'ನನ್ನದರಲ್ಲಿ ಗೋಲಿ ಪೆಪ್ಪೆಮೆಂಟು ಇಲ್ಲವೇ ಇಲ್ಲ', 'ನನ್ನ ಪೊಟ್ಟಣದಲ್ಲಿ ಹಸುರು ಬಣ್ಣದ ಪೆಪ್ಪೆಮೆಂಟ್ ಬಹಳ ಕಡಿಮೆ ಇದೆ' ಎಂದು ಪುನಃ ರಗಳೆಗೆ ಪ್ರಾರಂಭಮಾಡಿದರು. ಗದರಿಸೋಣವೆಂದರೋ, ಮನೆಗೆ ಹೋದೊಡನೆಯೇ ಹುಡುಗರು ಅಕ್ಕನೊಂದಿಗೆ ಚಾಡಿ ಹೇಳಿದರೆ ಮನಸ್ತಾಪಕ್ಕೆ ಕಾರಣವಾಗುವುದು ಎಂದು ಭಯಪಟ್ಟು ಶಂಕರನು ಅವರಿಗೆ ಎಷ್ಟೆಷ್ಟೋ ತಮಾಷೆ ಮಾತುಗಳು ಹೇಳಿ, ಬಹಳ ಶ್ರಮಪಟ್ಟು ಮಕ್ಕಳನ್ನು ಮನೆಗೆ ಕರೆ[illegible] ಪ್ರಯತ್ನವಾಯಿತು.

ಆ ಮಕ್ಕಳೊಡನೆ ಆಟಪಾಟವಾಡುವುದರಲ್ಲಿಯೇ ಶಂಕರನಿಗೆ ಆ ದಿನವೆಲ್ಲಾ ಕಳೆದುಹೋಯಿತು. ಆ ಹುಡುಗರು ಅವನನ್ನು ನಡುಮಧ್ಯಾಹ್ನ ಸ್ವಲ್ಪ ಹೊತ್ತು ಮಲಗಲು ಸಹಾ ಬಿಡಲಿಲ್ಲ. ಸರಳೆ ಹತ್ತಿರ ಮಕ್ಕಳು ಬಂದರೂ ಸಹಾ ಅವಳು ತನಗೆ ತಂಟೆ ತಪ್ಪಲೆಂದು 'ಸೋದರ ಮಾವನ ಹತ್ತಿರ ಹೋಗಿ ಆಡಿರಪ್ಪಾ, ಅವನು ನಿಮಗೆ ಚೆನ್ನಾಗಿ ಆಟ ತೋರಿಸುವನು. ಬಹಳ ಜಾಣರಂತೆ ನೀವು. ಹೋಗಿ!' ಎಂದು ಉಪಾಯ ಮಾಡಿ ಶಂಕರನ ಹತ್ತಿರಕ್ಕೆ ಕಳುಹಿಸಿ ಬಿಡುವಳು. ಅಂದು ಶಂಕರನು 'ಹಿಂದೂ' ಪತ್ರಿಕೆ ಸಹಾ ನೋಡಲಾಗಲಿಲ್ಲ.

ಸಾಯಂಕಾಲ ಅವನ ಆ ಊರಿನ ಸ್ನೇಹಿತನಾದ ನರಸಿಂಹ ಮೂರ್ತಿಯು ಶಂಕರನು ಬಂದಿರುವ ವರ್ತಮಾನವನ್ನು ಕೇಳಿ ದೊಡನೆಯೇ ಅವನನ್ನು ನೋಡಲು ಬಂದುಬಿಟ್ಟನು. ಅವನು 'ಏನೋ ಶಂಕರ್, ಮನೆಯಲ್ಲಿ ಕುಳಿತುಕೊಂಡು ಏನೋ ಮಕ್ಕಳೊಂದಿಗೆ ಆಟ? ಸ್ವಲ್ಪ ತಿರುಗಾಡಿಕೊಂಡು ಬರೋಣ, ಬಾರೋ!' ಎಂದು ಶಂಕರನನ್ನು ಕರೆದನು. 'ಸ್ವಲ್ಪ ಹೊತ್ತು ಮಕ್ಕಳ ಗಲಾಟೆ ತಪ್ಪುವುದಲ್ಲಾ, ಬದುಕಿದೆನಪ್ಪಾ' ಎಂದು ಮನದೊಳಗೆ ಯೋಚಿಸಿದವನಾಗಿ ಸ್ನೇಹಿತನೊಡನೆ ವಾಯುಸೇವನೆಗೆ ಹೊರಟನು. ಅಷ್ಟರಲ್ಲಿಯೇ ಪಕ್ಕದ ಕೊಠಡಿಯಿಂದ ಸರಳೆಯು 'ಹಾಗೆಯೇ ಸ್ವಲ್ಪ ಹೊತ್ತು ಮಕ್ಕಳನ್ನೂ ಸಂಗಡ ಕರೆದುಕೊಂಡು ಹೋಗು ಶಂಕ್ರೂ, ಅವರು ಮನೆಯಲ್ಲಿದ್ದರೆ ನನ್ನ ಜೀವವನ್ನು ಹಿಂಡಿಬಿಡುತ್ತಾರೆ. ಮಾವ ಅಪರೂಪವಾಗಿ ಬಂದಿರುವೆಯಲ್ಲಾ. ಸ್ವಲ್ಪ ಕರೆದುಕೊಂಡು ಹೋಗೋ' ಎಂದು ಅಂದುಬಿಟ್ಟಳು. ಶಂಕರನು ದಿಕ್ಕು ತೋಚದೆ ಆ ಹುಡುಗರನ್ನೂ ಕರೆದುಕೊಂಡು ಹೋಗಲು ಒಪ್ಪಿಕೊಳ್ಳಬೇಕಾಯಿತು. ಮನೆಯಿಂದ ಹೊರಡುವಾಗಲೇ ಮಾಧುವು 'ಮಾವ, ಬೆಗ್ಗೆಯಾಗೆ ನನ್ನನ್ನು ಪೆಪ್ಪೆಂಟ್ ಅಂಗಡಿಗೆ ಕದ್ದುಕೊಂಡು ಓತೀಯಾ?' ಅಂದು ಪೀಠಿಕೆ ಹಾಕಿದನು. ಜಾನಕಿಯು 'ನನಗೀಗಲೇ ಕಾಲ್ನೋವು. ಬೆಳಿಗ್ಗೆ ಮಾಧೂನ ಎತ್ಕೊಂಡೆ, ಈಗ ನನ್ನನ್ನು, ಅಲ್ವೇ ಮಾವ?' ಅಂದಳು. ದಾರಿಯುದ್ದಕ್ಕೂ ಸರಳೆಯ ಮಕ್ಕಳು ಶಂಕರನನ್ನು ನರಸಿಂಹ ಮೂರ್ತಿಯೊಂದಿಗೆ ನಾಲ್ಕು ಮಾತುಗಳು ಸಹಾ ಆಡಲು ಬಿಡಲಿಲ್ಲ. ಅವರ ಜಗಳವನ್ನು ಬಿಡಿಸುವುದರಲ್ಲಿಯೂ, ಅಳುವನ್ನು ಸಮಾಧಾನಪಡಿಸುವುದರಲ್ಲಿಯೂ, ಅವರು ಕೇಳುವ ಲೆಕ್ಕವಿಲ್ಲದಷ್ಟು ಪ್ರಶ್ನೆಗಳಿಗೆ ಜವಾಬು ಹೇಳುವುದರಲ್ಲಿಯೂ, ಶಂಕರನಿಗೆ ಸಾಕುಸಾಕಾಯಿತು. 'ಸಾಕಪ್ಪಾ ಈ ದಿನಸದ ವಾಕಿಂಗಿನ ಸುಖ'ವೆಂದುಕೊಂಡು ಮನೆಗೆ ಹಿಂತಿರುಗಿದನು.

ರಾತ್ರಿ ಊಟವಾದಾನಂತರ ಎಲ್ಲರೂ ಸ್ವಲ್ಪ ಹೊತ್ತು ಹರಟೆ ಹೊಡೆದದ್ದಾಯಿತು. ಸರಳೆಯು ಮಕ್ಕಳನ್ನು ಮಲಗಿಸಲು ಹೋಗಲು, ಅವಳ ಪತಿಯು 'ಹಿಂದೂ' ಪತ್ರಿಕೆಯನ್ನು ಓದಲು ಕುಳಿತರು. ಶಂಕರನು ಸ್ವಲ್ಪ ವಿರಾಮವಾಗಿ ತಾನು ಹಿಂದಿನ ದಿನಸ ರೈಲ್ವೇ ಬುಕ್‌ಸ್ಟಾಲಿನಲ್ಲಿ ಕೊಂಡು ತಂದಿದ್ದ ಎಡ್ಗರ್ ವಾಲ್ಲೇಸರ ಕಾದಂಬರಿಯೊಂದನ್ನು ಓದಲು, ಉಪಕ್ರಮಿಸಿದನು. ಪುಸ್ತಕದ ಹಾಳೆಯನ್ನು ತಿರುವಿದನೋ ಇಲ್ಲವೋ ಅಷ್ಟರಲ್ಲಿಯೇ ಯಾರೋ ಹಿಂದಿನಿಂದ ಅವನ ಅಂಗಿಯನ್ನು ಎಳೆದಂತಾಯಿತು. ಹಿಂತಿರುಗಿ ನೋಡಿದರೆ ಜಾನಕಿ! 'ಮಾವ, ಬೆಳಿಗ್ಗೆ ನಾನು ಕೇಳಿದ್ದಕ್ಕೆ, ನೀನು ರಾತ್ರಿ ಮಲ್ಕೊಣ್ವಾಗ ಕಥೆ ಹೇಳ್ತೇನೇಂದ್ಯಲ್ಲಾ! ಈಗ್ಹೇಳು, ಇಲ್ದಿದ್ರೆ ನಾನ್ಬಿಡೋಲ್ಲಾ!' ಶಂಕರ 'ಬಿಡ್ದಿದ್ರೆ ಗಟ್ಟಿಯಾಗಿ ಹಿಡ್ಕೊ.' ಜಾನಕಿ 'ಇಲ್ಲಾ ಮಾವ ಈಗ ನೀನ್ಹೇಳ್ಲೇ ಬೇಕು. ಇಲ್ದಿದ್ರೆ ಮಲ್ಕೊಳ್ಳೋಲ್ಲಾ.' ಶಂಕರ 'ಮಲಗದಿದ್ರೆ ಅಪ್ಪಾ ಬಂದು ಹೊಡೀತಾರೆ. ನನ್ಗೇನು?' ಜಾನಕಿ ಅವನನ್ನು ಬಿಡುವಂತಿಲ್ಲ. ಸರಿ, ಜಾನಕಿಯನ್ನು ಕರೆದುಕೊಂಡು ಹೋಗಿ, ಅವಳಿಗೆ ಕಥೆ ಹೇಳಿ ಮಲಗಿಸುವಷ್ಟರಲ್ಲಿ ಘಂಟೆ ೧೦॥ ಆಗಿಹೋಯಿತು. ಆ ದಿನ ಅವನು ಒಂದಕ್ಷರವೂ ಓದಲಾಗದೆ ಬಹು ಆಯಾಸ ಹೊಂದಿದವನಾಗಿ ನಿದ್ರಿಸಿಬಿಟ್ಟನು.

ಮಾರನೇಯ ದಿವಸ ಮಧ್ಯಾಹ್ನ ಬಿಸಿಲು ಬಹಳ ಚುರುಕಾಗಿದ್ದಿತು. ಎಲ್ಲರೂ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುತ್ತಿದ್ದರು. ಆಗ ಸರಳೆಗೂ ಸ್ವಲ್ಪ ನಿದ್ರೆಹತ್ತಿತು. ಆದರೆ ಅವಳ ಮಕ್ಕಳು ಅವಳನ್ನು ನಿದ್ರಿಸಗೊಡದೆ ಏನೋ ಚೇಷ್ಟೆ ಮಾಡುತ್ತಲಿದ್ದರು. ಸರಳೆಯು ಇಬ್ಬರ ಕೈಯಲ್ಲಿಯೂ ಒಂದೊಂದು ಹಾಳೆ ಕಾಗದವನ್ನು ಕೊಟ್ಟು 'ಮಾವನು ಆನೆ, ಕುದುರೆ ಎಲ್ಲದರ ಚಿತ್ರವನ್ನೂ ಚೆನ್ನಾಗಿ ಬರೆಯಬಲ್ಲನು. ಅವನ ಹತ್ತಿರ ಹೋಗಿ ಚಿತ್ರಬರೆಸಿಕೊಳ್ಳಿ, ಹೋಗೊಪ್ಪಾ ಕಂದಾ, ಜಾನಕೀ, ಮಾಧುವನ್ನೂ ಶಂಕರನ ಹತ್ತಿರಕ್ಕೆ ಕರೆದುಕೊಂಡು ಹೋಗೇ, ನಾನು ಸ್ವಲ್ಪ ಹೊತ್ತು ಮಲಗಿಕೊಳ್ಳುತ್ತೇನೆ.' ಎಂದು ಅವರನ್ನು ಶಂಕರನ ಹತ್ತಿರಕ್ಕೆ ಓಡಿಸಿಬಿಟ್ಟು ತಾನು ಚಾಪೆಯ ಮೇಲೆ ಮಲಗಿಕೊಂಡಳು. ಶಂಕರನು ಆಗ ತಾನೆ ಆರಾಮುಕುರ್ಚಿಯಲ್ಲಿ ಕುಳಿತುಕೊಂಡು ಹಿಂದಿನ ದಿನದ ವರ್ತಮಾನಪತ್ರಿಕೆಯನ್ನು ಓದಲಾರಂಭಿಸಿದನು. ಅಷ್ಟರಲ್ಲಿಯೇ ಹುಡುಗರು ಬಂದು ಚಿತ್ರಬರೆದುಕೊಡೆಂದೂ ಹಿಂಸಿಸಲಾರಂಭಿಸಿದರು. 'ಆ ಮೇಲೆ ಬರೆದುಕೊಡುತ್ತೇನೆ'ಂದು ಹೇಳಿದರೆ, ಕೇಳುವಂಥಾ ಹುಡುಗರೇ ಅವರು? ಕಡೆಗೆ ಬಹು ಜಿಗುಪ್ಸೆಯೊಂದಿಗೆ ಶಂಕರನು 'ಪಕ್ಕದ ಕೊಠಡಿಯಲ್ಲಿ ನನ್ನ ಕೋಟು ತಗುಲಹಾಕಿದ್ದೇನೆ. ಅದರ ಜೇಬಿನಿಂದ ಪೆನ್ಸಿಲ್ ತೆಗೆದುಕೊಂಡು ಬಾರೇ ಜಾನಕೀ,' ಅಂದ. ತಕ್ಷಣ 'ನಾನು ತಾನೆ'ಂದು ಇಬ್ಬರೂ ಓಡಿದರು. ಸ್ವಲ್ಪ ಹೊತ್ತು ಅವರ ಸುಳಿವೇ ಇಲ್ಲ; ಶಂಕರನೂ ನೆಮ್ಮದಿಯಾಗಿ ಪೇಪರ್ ಓದುತ್ತಲಿದ್ದನು. ಸ್ವಲ್ಪ ಹೊತ್ತಿನಲ್ಲೇ ಹುಡುಗರಿಬ್ಬರೂ ಕಿರಿಚಿಕೊಳ್ಳಲು ತೊಡಗಿದರು. ನಿದ್ರಿಸುತ್ತಲಿದ್ದ ಸರಳೆಯನ್ನು ತಟ್ಟನೆದ್ದು ಮಕ್ಕಳಿದ್ದ ಕೊಠಡಿಗೆ ಬಂದು ನೋಡಲು, ಇಬ್ಬರು ಪೆನ್ಸಿಲ್ ಹುಡುಕುತ್ತೇನೆಂದು ಶಂಕರನ ಕೋಟಿನ ಜೇಬುಗಳನ್ನು ಒಂದೊಂದಾಗಿ ಖಾಲಿಮಾಡಿ, ಸಾಮಾನುಗಳನ್ನು ಕೆಳಗೆ ಎರಚಿದ್ದರು. ಅವನು ಡೈರಿಯಲ್ಲಿಟ್ಟಿದ್ದ ಒಂದು ಫೋಟೋವನ್ನು ತೆಗೆದುಕೊಂಡು ಮಕ್ಕಳು 'ನನಗೆ ತನಗೆ' ಎಂದು ಬಲವಾಗಿ ಜಗಳಕ್ಕೆ ಪ್ರಾರಂಭಿಸಿದಾಗಲೇ ಸರಳೆಯು ಅಲ್ಲಿಗೆ ಬಂದುದು. ಅವಳು ಆ ಪಠವನ್ನು ಹುಡುಗರ ಕೈಯಿಂದ ಕಿತ್ತುಕೊಂಡು ಅತ್ಯಾಶ್ಚರ್ಯದೊಡನೆ ನೋಡುತ್ತಾ, ಗಟ್ಟಿಯಾಗಿ ನಗುತ್ತಾ ಶಂಕರನಿದ್ದ ಕೊಠಡಿಯನ್ನು ಪ್ರವೇಶಿಸಿದಳು. ಪತ್ರಿಕೆಯನ್ನು ಓದುವ ಸ್ವಾರಸ್ಯದಲ್ಲಿ ಶಂಕರನಿಗೆ ಈ ಗಲಾಟೆಗಳೇನೂ ಕೇಳಿಸಲಿಲ್ಲ. ಅಕ್ಕನು ಕರೆಯುವುದನ್ನು ಕೇಳಿ ಹಿಂತಿರುಗಿ ನೋಡಲಾಗಿ, ತನ್ನ ಪ್ರೇಯಸಿಯ ಫೋಟೋವು ಅವಳ ಕೈಯಲ್ಲಿರುವುದನ್ನು ಕಂಡು 'ಇದು ಇವಳಿಗೆ ಹ್ಯಾಗೆ ಸಿಕ್ಕಿತೆ'ಂದು ಆಶ್ಚರ್ಯಗೊಂಡನು; ಮರುಕ್ಷಣ ಸೀಸದ ಕಡ್ಡಿ ತರುವುದಕ್ಕೆ ಹೋದ ಆ ಮಕ್ಕಳ ಕೆಲಸವೇ ಇರಬೇಕೆಂದು ಅವನ ಮನಸ್ಸಿಗೆ ಹೊಳೆಯಿತು. ಆ ಕ್ಷಣ ಅವರಿಬ್ಬರನ್ನೂ ಚೆನ್ನಾಗಿ ಹೊಡೆಯಬೇಕೆಂದು ಆತುರಗೊಂಡನು. ಆದರೆ ಸರಳೆಯು ಏನನ್ನು ವಳೋ ಏಂಬ ಭಯದಿಂದ ಹಲ್ಲು ಕಚ್ಚಿಕೊಂಡು ಸುಮ್ಮಗಾದನು.

ಸರಳೆಯು 'ಶಂಕ್ರೂ, ನಿನ್ನನ್ನು ಈ ಊರಿಗೆ ಯಾಕೆ ಕರೆಸಿದೆನು ಗೊತ್ತೇ? ಈ ಫೋಟೋನಲ್ಲಿ ಇರುವ ಹುಡುಗಿಯನ್ನು ತೋರಿಸುವುದಕ್ಕಾಗಿಯೇ. ಇವಳು ಹೊಸದಾಗಿ ವರ್ಗವಾಗಿ ಈ ಊರಿಗೆ ಬಂದಿರುವ ಕೇಶವರಾಯರ ನಾದಿನಿಯ ಮಗಳು. ಅವರು ಮೊದಲು ಮೈಸೂರಲ್ಲಿದ್ದಾಗ ಬೇಸಿಗೆಯ ರಜಕ್ಕೆಂದು ಈ ಹುಡುಗಿಯೂ ಇವಳ ತಾಯಿತಂದೆಯರೂ ಮೈಸೂರಿಗೆ ಬಂದರಂತೆ. ಇವರು ಅಲ್ಲಿಗೆ ಬಂದ ಮಾರನೇಯ ದಿವಸವೇ ಕೇಶವರಾಯರಿಗೆ ಇಲ್ಲಿಗೆ ವರ್ಗವಾಯಿತಂತೆ. ಸಂಗಡಲೇ ಅವರೂ ಇಲ್ಲಿಗೆ ಬಂದಿದ್ದಾರೆ. ಹುಡುಗಿಯನ್ನು ನೋಡಿದಾಗಲಿಂದ ಅವಳು ನನಗೆ ಬಹಳ ಒಪ್ಪಿಹೋದಳು. ಯಾವ ಹುಡುಗಿಯನ್ನೂ ನೀನು ಒಪ್ಪುವುದಿಲ್ಲವಲ್ಲಾ, ಇವಳನ್ನಾದರೂ ಕಂಡು ಮದುವೆಯಾಗಲು ನೀನು ಒಪ್ಪುವೆಯೇನೋ ಎಂಬ ಆಶೆಯಿಟ್ಟು, ನಿನ್ನನ್ನು ಇಲ್ಲಿಗೆ ಕರೆಸಿದೆನು. ನಾಳೆಯ ದಿನ ನಿಮ್ಮಿಬ್ಬರನ್ನೂ ನಮ್ಮ ಮನೆಯಲ್ಲಿ ಸಂಧಿಸುವಂತೆ ಏರ್ಪಾಟು ಮಾಡಬೇಕೆಂದಿದ್ದೆ. ಅಷ್ಟರೊಳಗೆ ನೀನೇ ಸನ್ಮತಿಯನ್ನೂ ತಿಳಿಸಿಬಿಟ್ಟೆಯಲ್ಲಾ? ಈಗಲೇ ಅಮ್ಮನಿಗೂ, ಅಪ್ಪನಿಗೂ ಸೊಸೆಯನ್ನು ಬಂದು ನೋಡಲು ಕಾಗದ ಬರೆದುಬಿಡುತ್ತೇನೆ. ಅದಿರಲಿ. ಶಂಕರಾ ನಿನಗೆ ಇವಳು ಹ್ಯಾಗೆ ಗೊತ್ತು? ಹೇಳೋ ಸ್ವಲ್ಪ. ನನ್ನ ಹತ್ತಿರ ನಾಚಿಕೋಬಾರದು, ನೋಡು!' ಅಂದಳು.

ಶಂಕರನು ಗಂಭೀರಧ್ವನಿಯಲ್ಲಿ 'ಇವಳು ನನ್ನ (class mate) ಸಹಪಾಠಿಯಾದ ಕೃಷ್ಣಮೂರ್ತಿಯ ತಂಗಿ. ಅವನು ಒಂದು ದಿನ ಶಾಂತಿಯನ್ನು 'ಮದ್ರಾಸ್ ಬೀಚ್'ಗೆ ಕರೆತಂದಿದ್ದನು. ಆಗ ನಾವಿಬ್ಬರೂ ಸಂಧಿಸಿ, ಕ್ರಮೇಣ ನಮ್ಮಿಬ್ಬರಲ್ಲಿ ಸ್ನೇಹ ಬೆಳೆಯಿತು. ಶಾಂತಿಯ ಅಣ್ಣನಿಗೂ, ಅವರ ಮನೆಯವರಿಗೂ ಅವಳನ್ನು ನನಗೆ ಕೊಡಬೇಕೆಂದೇ ಇಷ್ಟ. ಆದರೆ ಅವರು ವರದಕ್ಷಿಣೆ ಕೊಡಲಾರರು. ಅದರಿಂದ ನಿಮಗೆಲ್ಲಾ ಹೇಗೆ ತಿಳಿಸಿ ನಿಮ್ಮನ್ನು ಒಪ್ಪಿಸುವುದು ಎಂಬುವುದನ್ನು ಹಗಲಿರುಳೂ ಯೋಚಿಸುತ್ತಿರುವೆನು. ಈ ಮಕ್ಕಳ ಕೆಲಸ—ಈ ದಿನ ಇದನ್ನು ಹೊರಗೆಡವಿಬಿಟ್ಟರು.'

ಸರಳೆ 'ವರದಕ್ಷಿಣೆ ಇಲ್ಲದಿದ್ದರೆ ಅಷ್ಟೇ ಆಯಿತು. ಸದ್ಯ ನೀನು ಮದುವೆಯಾದರೆ ಸಾಕೆಂದಾಗಿಬಿಟ್ಟಿದೆ ನಮ್ಮ ಪಾಡು. ಶಾಂತಿ ಒಳ್ಳೆಯ ವಿದ್ಯಾವತಿ, ಗುಣವತಿ, ರತಿಯ ಹಾಗಿದ್ದಾಳೆ. ಸಂಗೀತದಲ್ಲಂತೂ ಪ್ರವೀಣೆ. ಆದರೆ ಮೂಹೂರ್ತ ನಿಷ್ಕರ್ಷೆ ಮಾಡುವುದೊಂದೇ ಬಾಕಿ ಅಲ್ಲವೇನೋ ಶಂಕ್ರೂ? ಇಗೊ ಈಗಲೇ ಅಪ್ಪನಿಗೆ ಕಾಗದ ಬರೆಯುತ್ತೇನೆ' ಎಂದು ಹೇಳಿ ಶಂಕರ ನನ್ನು ತಟ್ಟಿ, ತನ್ನ ಪತಿ ಇದ್ದ ಕೊಠಡಿಗೆ ತೆರಳಿದಳು.

ಅಂದಿನಿಂದ ಶಂಕರನಿಗೆ ಸರಳೆಯ ಮಕ್ಕಳೆಂದರೆ ಪ್ರಾಣ. ಅವರು ತಂಟೆ ಮಾಡಿದಷ್ಟೂ ಅವನಿಗೆ ಆನಂದ ಹೆಚ್ಚುತ್ತಲಿತ್ತು. ಏಕೆನ್ನುವಿರೋ? 'ವರದಕ್ಷಿಣೆ'ಯೆಂಬ ದುರಾಶೆಯಲ್ಲಿ ಮುಳುಗಿದ್ದ ಅವನ ಮಾತಾ-ಪಿತೃ-ಸಹೋದರಿಯರನ್ನು ಅದರಿಂದ ಬಿಡಿಸಿ ಅವನ ಪ್ರೇಯಸಿಯನ್ನು ಮದುವೆಯಾಗಲು ಅವಕಾಶ ಕಲ್ಪಿಸಿದವರು ಅವರಲ್ಲವೇ?

ಕನ್ನಡಿಗರೇ!

ಬೊಂಬಾಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲು

(MADRAS BRAHMINS' LODGE.)

(ಸ್ಥಾಪನೆ:—1912.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರ

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಪ್ಯಲ್ಮೋನರಿಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಸಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದ್ದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್,
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। $2\frac{1}{2}$.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। $4\frac{1}{2}$. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 5
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೂಡಾ ಕೊಡುತ್ತದೆ.
H. S. RAMA RAO, *Manager.*




ಹರಳೆಣ್ಣೆ ಕುಡಿಸಿದೆ
CASTOPHENE
COMPOUND
CASTOR OIL
CHOCOLATES
A delicious Chocolate Laxative.
ಕೆಸ್ಟೊಫೇನಿನೊಡನೆ
ಕೆಸ್ಟೊಫೇನ್
ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ—ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು. ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ.
CASTOPHENE
CASTOR OIL CHOCOLATES

ಪ್ರಕಟಣೆ.

ಮಂಗಳೂರಿನ ಯಾವತ್ತೂ ಸಾರ್ವಜನಿಕ ಮಂದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

'ಝಂಡೂ ಫಾರ್ಮಸಿಯ ಖಾತರಿಯಾದ ಆಯುರ್ವೇದೀಯ ಸಿದ್ಧೌಷಧಗಳನ್ನು ಸ್ಥಳೀಯ ಏಜೆಂಟರಾದ ಮೆಸರ್ಸ್. 'ಪಹಾ ಎಂಡ್ ಕೋ, ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು' ಇವರಿಂದ ಮಾತ್ರವೇ ಪಡೆಯಬಹುದು. ಒಂದು ವೇಳೆ ನಮ್ಮಿಂದ ಒಪ್ಪಲಾದ ಏಜೆಂಟರ ಹೊರತು, ಬೇರೆ ಯಾವ ವ್ಯಾಪಾರಿಗಳಿಂದಲಾದರೂ ಇವನ್ನು ಪಡೆವಲ್ಲಿ ಆ ಕುರಿತು ಈ ಕಂಪೆನಿಯು ಯಾವ ಜವಾಬುದಾರಿಯನ್ನೂ ವಹಿಸುವುದಿಲ್ಲ; ಹಾಗೂ ಆ ಔಷಧಗಳ ಖಾತರಿಯ ಬಗ್ಯೆ ಯಾವ ಗ್ಯಾರಂಟಿಯನ್ನೂ ಕೊಡುವುದಿಲ್ಲ.

ಮದ್ರಾಸ್ ಆಧಿಪತ್ಯದ ಸೋಲ್ ಡಿಸ್ಟ್ರಿಬ್ಯೂಟರ್ಸ್
ದಾವೋದರ್ ಎಂಡ್ ಕೊ.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್.

ಡಾ. ವಾಮನ್ ಗೋಪಾಲರ
ಸರ್ಸಪರಿಲ್ಲಾ

5 ವರ್ಷಗಳ ಅನುಭವದಿಂದ ತಿಳಿದಿರುವಂತೆ ಜನರು, ರಕ್ತ ಶುದ್ಧಿಕಾರಕ ಔಷಧಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಹೊಸಿಲ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

THE GENERAL INSURANCE BANK OF INDIA LIMITED,
MANGALORE.
ESTD. 1933.

BENEFIT AMOUNT PAID EXCEEDS RS. 20,950/— AS ON 30TH JUNE 1936. RESERVE FUND EXCEEDS RS. 7,360/—

WE HAVE THREE SCHEMES FOR YOU

LIFE MARRIAGE BIRTH

ADMISSION FEE RS. 5/8/- ONLY.
(By Instalments if required)
MONTHLY PREMIUM RUPEE ONE ONLY.

Chairman:—M. R. Ry. Philip J. Chandran, Avgl., B. A., Retired Dt. Registrar and Assistant Registrar of Joint Stock Companies, S. K., Mangalore.

WANTED SPECIAL AGENTS AND REPRESENTATIVES ON LIBERAL TERMS.

For Full Prospectus and Agency Terms please apply to:—
THE GENERAL INSURANCE BANK OF INDIA LIMITED,
H. O. MANGALORE, S. K.

Mangalore, 1—11—1936.
P. K. MENON, *Secretary.*

ಗ್ರಾಮೋದ್ಧಾರ

ಮದ್ರಾಸು ಸಾರ್ವಜನಿಕ ಆರೋಗ್ಯಶಾಖೆಯ ಕಾರ್ಯಕ್ರಮಗಳ ವಿವರ.

ಸರಕಾರದವರು ೧೪೬೪ರಲ್ಲಿ ನಿರ್ಮಲಕರಣಕಾರ್ಯಗಳಿಗಾಗಿಯೇ ಬೇರೆಯೊಂದು 'ಸೆನಿಟರಿ' ಶಾಖೆಯನ್ನು ಸ್ಥಾಪಿಸಿದಂದಿನಿಂದ ಹಳ್ಳಿಪ್ರದೇಶಗಳಲ್ಲಿ ಆರೋಗ್ಯರಕ್ಷಣೆಯ ಕಾರ್ಯದ ಕುರಿತು ಪ್ರಯತ್ನಗಳು ನಡೆಯುತ್ತಿವೆ. ಮೊಂಟೆಗು-ಚೆಲ್ಮ್ಸ್‌ಫರ್ಡ್ ಸುಧಾರಣೆಗಳ ಫಲವಾಗಿ ಸಾರ್ವಜನಿಕ ಆರೋಗ್ಯ ಸಂಗತಿಗಳೆಲ್ಲಾ ಮಂತ್ರಿಗಳ ಆಡಳಿತದೊಳಗೆ ಬಂದವು. ಬಳಿಕ ಮದ್ರಾಸು ಜಿಲ್ಲಾ ಆರೋಗ್ಯವರ್ಧಕ ಯೋಜನೆಯೊಂದನ್ನು ೧೯೨೨ರಲ್ಲಿ ಪ್ರಾರಂಭಿಸಲಾಯಿತು. ೧೯೨೩ರಲ್ಲಿ ಸಾರ್ವಜನಿಕ ಆರೋಗ್ಯಶಾಖೆಯೊಂದನ್ನೂ ಸ್ಥಾಪಿಸಲಾಯಿತು. ಈ ಆರೋಗ್ಯ ಶಾಖೆಯು ಬೇರೆಯೊಂದು ಶಾಖೆಯಾಗಿ ಸ್ಥಾಪಿಸಲ್ಪಟ್ಟಂದಿನಿಂದ ಅದರ ಕಾರ್ಯಕ್ಷೇತ್ರವು ಅನೇಕ ತರದಿಂದ ಬೆಳೆಯುತ್ತಾ ಬಂದಿದೆ. ಈ ಹೊಸ ಯೋಜನೆಯಿಂದ ಜನರಿಗೆ ಲಭಿಸಿದ ಗುಣಾಂಶವನ್ನೂ ಈ ಶಾಖೆಯ ಕೆಲಸವು ಸಮಂಜಸವಾಗಿ ನಡಿಯುತ್ತಿರುವುದನ್ನೂ ರಾಜನಿಯಮಿತ ಗೋಷ್ಠಿಯವರೂ ಸಮಿತಿಗಳೂ ಕಂಡು ಪ್ರಶಂಸಿಸಿರುತ್ತವೆ.

ಜಿಲ್ಲಾ ಸಾರ್ವಜನಿಕ ಆರೋಗ್ಯವ್ಯವಸ್ಥೆ.

ಪ್ರತಿಯೊಂದು ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯದ ಕುರಿತು ನಡೆಸುವ ಎಲ್ಲಾ ಕಾರ್ಯಭಾಗಗಳೂ ಉತ್ತಮ ತರದ ತರಬೇತು ಹೊಂದಿದ ಆರೋಗ್ಯ ಅಧಿಕಾರಿ(ಹೆಲ್ತ್ ಆಫೀಸರ್) ಗಳೊಬ್ಬರ ಸಂಪೂರ್ಣ ಮೇಲ್ವಿಚಾರಕ್ಕೊಳಗಾಗಿ ನಡೆಸಲ್ಪಡುತ್ತವೆ. ಜಿಲ್ಲಾ ಆರೋಗ್ಯ ಅಧಿಕಾರಿಗಳ ಅಧಿಕಾರವ ಮೇಲ್ವಿಚಾರಕ್ಕೊಳಗಾಗಿ ಪ್ರತಿಯೊಂದು ತಾಲೂಕಿನಲ್ಲಿ ಒಬ್ಬ ಆರೋಗ್ಯ ಮೇಲ್ವಿಚಾರಕ(ಹೆಲ್ತ್ ಇನ್ಸ್‌ಪೆಕ್ಟರ್)ರಿರುವರು. ಜಿಲ್ಲೆಯನ್ನೆಲ್ಲಾ (ರೇಂಜು) ಭಾಗಗಳಾಗಿ ವಿಂಗಡಿಸಿ, ಒಂದೊಂದು ಭಾಗಕ್ಕೆ ಅದರ ವಿಸ್ತೀರ್ಣಕ್ಕನುಕೂಲವಾಗಿ ಇಬ್ಬರು ಯಾ ಮೂವರು ಡಾಕು ವೈದ್ಯ(ವೆಕ್ಸಿನೇಟರ್)ರನ್ನು ನೇಮಿಸಿ, ಅವರ ಸಂಬಳವನ್ನು ಜಿಲ್ಲಾ ಬೋರ್ಡಿನವರೇ ಕೊಡುತ್ತಾರೆ. ಆರೋಗ್ಯ ಮೇಲ್ವಿಚಾರಕರ ಮೂಲಕ ಜಿಲ್ಲಾ ಆರೋಗ್ಯ ಅಧಿಕಾರಿಯವರು ಈ ಡಾಕು ವೈದ್ಯರ ಕೆಲಸದ ಮೇಲ್ವಿಚಾರವನ್ನು ನೋಡಿಕೊಳ್ಳುತ್ತಾರೆ.

ಈ ಅಧಿಪತ್ಯದಲ್ಲಿ ಹೆಚ್ಚಿನ ಭಾಗವು ಹಳ್ಳಿಪ್ರದೇಶವಾದುದರಿಂದ ಗ್ರಾಮಾಭಿವೃದ್ಧಿಗೆ ಸೇರಿದ ಸಾರ್ವಜನಿಕ ಆರೋಗ್ಯ ಸಂಗತಿಗಳ ಕುರಿತೇ ಸಾರ್ವಜನಿಕ ಆರೋಗ್ಯಶಾಖೆಯವರು ಹೆಚ್ಚಾದ ಕೆಲಸಗಳನ್ನು ನಡೆಸುವುದಾಗಿರುತ್ತದೆ. ಜಿಲ್ಲಾ ಆರೋಗ್ಯ ಅಧಿಕಾರಿಮಂಡಳಿಯವರು ಮಾಡುವ ಕಾರ್ಯಗಳು ಈ ಕೆಳಗೆ ಕಾಣಿಸಿದಂತಾಗಿವೆ:—

(೧) ಜನನ-ಮರಣಗಳನ್ನು ಸರಿಯಾಗಿ ದಾಖಲ್ಮಾಡಿಕೊಂಡಿದ್ದಾರೋ ಎಂಬುದರ ಕುರಿತು ಮೇಲ್ವಿಚಾರ ನೋಡಿ, ಜನನ-ಮರಣಗಳಿಗೊಪ್ಪಿದ ಸ್ಥಿತಿವೃತ್ತಾಂತವನ್ನು ಇಡುವ ಕ್ರಮವನ್ನು ರೂಪಿತಕ್ಕೆ ತರುವದು.

(೨) ಸಾಂಕ್ರಾಮಿಕ ರೋಗಗಳು ಸಂಭವಿಸುವ ಕಾರಣಗಳನ್ನು ಶೋಧಿಸಿ ಅವುಗಳು ಹಬ್ಬದಂತೆ ಜಾಗ್ರತೆ ಮಾಡುವುದು.

(೩) ಜಿಲ್ಲೆಯಲ್ಲಿ ಕ್ರಮವಾಗಿ ಎಲ್ಲಾ ಕಡೆ ಜನರಿಗೆ ಡಾಕು ಹಾಕುವಂತೆ ನೋಡಿಕೊಳ್ಳುವುದು.

(೪) ಜಾತ್ರೆಗಳು ನಡೆಯುವ ಪ್ರದೇಶಗಳಲ್ಲೆಲ್ಲಾ ನಿರ್ಮಲಕರಣ ವ್ಯವಸ್ಥೆಯು ಸರಿಯಾಗಿ ನಡೆಯುತ್ತದೋ ಎಂಬ ಕುರಿತು ಜಾಗ್ರತೆ ನೋಡುವುದು.

(೫) ಜಿಲ್ಲೆಯಲ್ಲೆಲ್ಲಾ ಶಿಶುಪ್ರಸೂತೆಯರ ಹಿತಾರ್ಥದ ಯೋಜನೆಗಳನ್ನು ಕೈಕೊಂಡು, ಅವುಗಳ ಕಾರ್ಯವು ಸಾಂಗವಾಗಿ ನಡೆಯುವಂತೆ ಜಾಗ್ರತೆ ನೋಡುವುದು.

(೬) ಸಾರ್ವಜನಿಕ ಆರೋಗ್ಯ ಸಂಬಂಧವಾದ ಸಂಗತಿಗಳ ಕುರಿತು ಜನರಲ್ಲಿ ಜ್ಞಾನವುಂಟುಮಾಡುವುದು.

(೭) ನಿರ್ಮಲಕರಣದ ಏರ್ಪಾಡುಗಳಲ್ಲಿ ಕಂಡುಬಂದ ದೋಷಗಳನ್ನು ಸ್ಥಳೀಯ ಅಧಿಕಾರಿಗಳ ಜಾಹೀರಾತಿಗೆ ತಂದು ಅವುಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನಿಸುವುದು.

ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದ ಬಗ್ಗೆ ಈ ಜಿಲ್ಲೆಯನ್ನು ೮ ರೇಂಜುಗಳಾಗಿ ವಿಂಗಡಿಸಿರುತ್ತಾರೆ. ಪ್ರತಿಯೊಂದು ರೇಂಜಿಗೊಬ್ಬ ಆರೋಗ್ಯ ಮೇಲ್ವಿಚಾರಕರಿರುವರು. ಈ ಜಿಲ್ಲೆಯಲ್ಲಿ ಒಟ್ಟಿಗೆ ೮ ಆರೋಗ್ಯ ಮೇಲ್ವಿಚಾರಕರೂ, (ಒಬ್ಬ ಸ್ತ್ರೀ ವೈದ್ಯಳು ಕೂಡಿ) ೨೦ ಡಾಕು ವೈದ್ಯರೂ ಜಿಲ್ಲಾ ಆರೋಗ್ಯಾಧಿಕಾರಿಗಳ ಕೆಳಗೆ ಕೆಲಸ ಮಾಡುತ್ತಿರುವರು. ಗ್ರಾಮವೈದ್ಯರೊಬ್ಬರನ್ನು ಸಾರ್ವಜನಿಕ ಆರೋಗ್ಯಕಾರ್ಯಕ್ಕೆ ನೇಮಿಸಿರುತ್ತಾರೆ.

ಗ್ರಾಮ ನಿರ್ಮಲಕರಣ ಕಾರ್ಯೋತ್ಸವ.

ಗ್ರಾಮ ನಿರ್ಮಲಕರಣ ಸಂಗತಿಗಳ ಕುರಿತು—ಮುಖ್ಯವಾಗಿ, ಹಳ್ಳಿಗಳಲ್ಲಿ ಜನರು ಮಣ್ಣನ್ನು ಹೊಲಸು ಮಾಡುವ ಕುರಿತು—ಏನು ಮಾಡಬೇಕೆಂಬ ವಿಷಯ ವಿಶೇಷ ಗಮನಕೊಡುತ್ತಾರೆ. ಈ ಅಧಿಪತ್ಯದಲ್ಲಿ ಕೊಕ್ಕೆಹುಳದ ಸೋಂಕನ್ನು ನಿರ್ಮೂಲ ಮಾಡುವ ಕಾರ್ಯಭಾಗವನ್ನು ೧೯೨೮ರ ತನಕ 'ರೊಕ್‌ಫೆಲ್ಲರ್ ಫೌಂಡೇಶನ್' ಎಂಬ ಸಂಸ್ಥೆಯವರು ಮಾಡುತ್ತಿದ್ದರು. ಅದನ್ನು ೧೯೨೮ರಲ್ಲಿ ಸರಕಾರದವರೇ ವಹಿಸಿಕೊಂಡು ಆ ಕೆಲಸಕ್ಕಾಗಿಯೇ ನಾಲ್ಕು ಶಾಶ್ವತ ಗ್ರಾಮ ನಿರ್ಮಲಕರಣ ಏಕಾವಳಿ ಶಿಬಂದಿಗಳನ್ನು ಇಟ್ಟಿದ್ದಾರೆ. ಇವುಗಳಿಗೆ ಅನಂತರ ಹಂಗಾಮಿಯಾಗಿ ಇನ್ನೆರಡು ಏಕಾವಳಿಗಳನ್ನು ಕೂಡಿಸಿರುತ್ತಾರೆ. ಈ ಏಕಾವಳಿ ಶಿಬಂದಿಗಳಲ್ಲಿ ಸಾಧಾರಣವಾಗಿ ಒಂದೊಂದು ಏಕಾವಳಿಯಲ್ಲಿ ಒಬ್ಬ ಎರಡನೇ ತರಗತಿಯ ಆರೋಗ್ಯಾಧಿಕಾರಿಯೂ, ಒಬ್ಬ ಆರೋಗ್ಯ ಮೇಲ್ವಿಚಾರಕನೂ, ಒಬ್ಬ ಪೇದೆಯೂ ಇರುವರು. ಈ ಏಕಾವಳಿ ಶಿಬಂದಿಗಳ ಮುಖ್ಯ ಕಾರ್ಯಕರ್ಮಗಳ ವಿವರವನ್ನು ಕೆಳಗೆ ಕೊಟ್ಟಿದೆ:—

(೧) ಗ್ರಾಮಗಳಲ್ಲೆಲ್ಲಾ ಪಾಯಖಾನೆಗಳನ್ನು ಒದಗಿಸುವುದು.

(೨) ನೆಲದ ಮಣ್ಣನ್ನು ಹೊಲಸು ಮಾಡುವುದರಿಂದಲೂ ಕೊಕ್ಕೆಹುಳದ ಸೋಂಕಿನಿಂದಲೂ ಉಂಟಾಗುವ ಅಪಾಯಗಳ ಕುರಿತು ಜನರಲ್ಲಿ ತೀಕ್ಷ್ಣ ಪ್ರಚಾರಕಾರ್ಯ.

(೩) ಕೊಕ್ಕೆಹುಳ ತಗಲಿದ ಜನರಿಗೆ ಸಾಮುದಾಯಿಕ ರೀತಿಯಿಂದ ಚಿಕಿತ್ಸೆನೂಡುವುದು.

ಈ ಏಕಾವಳಿಗಳು ಒಂದು ಜಿಲ್ಲೆಯಲ್ಲಿ ಪ್ರಾರಂಭದ ಕೆಲಸ ಮುಗಿದೊಡನೆ ಇನ್ನೊಂದು ಜಿಲ್ಲೆಗೆ ಹೋಗುವವು. ಏಕಾವಳಿಗಳು ಪೀಠಿಕೆ ಹಾಕಿಕೊಟ್ಟ ಕೆಲಸವನ್ನು ಅನಂತರ ಆಯಾಯ ಜಿಲ್ಲಾ ಬೋರ್ಡಿನವರು ಮುಂದರಿಸುವರು. ಈ ಏಕಾವಳಿಗಳು ಐದು ಜಿಲ್ಲೆಗಳಲ್ಲಿ ತಮ್ಮ ಕಾರ್ಯವನ್ನು ಸಂಪೂರ್ಣ ಮಾಡಿ ಈಗ ಮಧುರಾ, ರಾಮನಾಡು, ದಕ್ಷಿಣ ಆರ್ಕಾಡು, ತಿನ್ನವೆಲ್ಲಿ ಪಶ್ಚಿಮ ಗೋದಾವರಿ ಮತ್ತು ಪೂರ್ವ ಗೋದಾವರಿ ಜಿಲ್ಲೆಗಳಲ್ಲಿ ಕಾರ್ಯೋದ್ಯುಕ್ತವಾಗಿರುತ್ತವೆ.

ಅವರು ಈ ತನಕ ೧೫,೯೧೮ ಪಾಯಖಾನೆಯ ಆಸನಗಳನ್ನು ಸಿದ್ಧಪಡಿಸಿ ಕೊಟ್ಟಿರುವರು; ಚಲಚ್ಚಿತ್ರ, ಮಾಯಾಲಾಂದ್ರ ಮತ್ತು ಚಿತ್ರಪಟಗಳ ಮೂಲಕ ೧೩,೭೨೪ ಭಾಷಣಗಳನ್ನು ಕೊಟ್ಟಿರುವರು. ಕೊಕ್ಕೆಹುಳ ತಗಲಿದ ೧೨೫,೮೫೫ ಜನರಿಗೆ ಚಿಕಿತ್ಸೆನೂಡಿರುವರು.

ಗ್ರಾಮಗಳಲ್ಲಿ ಭೂರಂಧ್ರ ಪಾಯಖಾನೆಗಳನ್ನು ಒದಗಿಸುವ ವಿಶೇಷ ತರದ ಯೋಜನೆ.

ಇದಲ್ಲದೆ ಹಳ್ಳಿಗಳಲ್ಲಿ ಭೂರಂಧ್ರ ಪಾಯಖಾನೆಗಳನ್ನು ಒದಗಿಸುವ ಒಂದು ಯೋಜನೆಯನ್ನು ಸರಕಾರದವರು ಅಂಗೀಕರಿಸಿರುವರು. ಪ್ರತಿಯೊಂದು ಜಿಲ್ಲೆಯ ಒಂದೊಂದು ತಾಲೂಕಿನಲ್ಲಿ ೧೦೦ ಹಳ್ಳಿಗಳನ್ನು ಆರಿಸಿ, ಅವುಗಳಲ್ಲಿ ಈ ತರದ ಪಾಯಖಾನೆಗಳನ್ನು ಕಟ್ಟಿಸುತ್ತಾರೆ. ಈ ಯೋಜನೆಯ ಮೇರೆಗೆ ಸರಕಾರದವರು (೧) ಪ್ರತಿಯೊಂದು ಗ್ರಾಮದಲ್ಲಿಯೂ ನಾಲ್ಕು ನೂರಲ್ಕು ಜನರು ಉಪಯೋಗಿಸಲಿಕ್ಕಾಗುವ ಸಾರ್ವಜನಿಕ ಪಾಯಖಾನೆಗಳೆರಡನ್ನು ಕಟ್ಟಿಸುತ್ತಾರೆ. (೨) ಪ್ರತಿಯೊಂದು ಹಳ್ಳಿಯಲ್ಲಿ ಕೆಲವು ಮನೆಗಳಲ್ಲಿ ಖಾಸಗಿ ಪಾಯಖಾನೆಗಳನ್ನು ಕಟ್ಟಿಸುವ ಬಗ್ಗೆ ಬೇಕಾಗುವ ರಂಧ್ರ ಕೊರೆಯುವ ಯಂತ್ರಗಳನ್ನು ಧರ್ಮಾರ್ಥವಾಗಿ ಒದಗಿಸಿ ಕೊಡುತ್ತಾರೆ. ಮತ್ತು ಮನೆಯ ಮ್ಹಾಲೀಕರು ಕಲ್ಲಿನ ಹಲಿಗೆಗಳ ಅರ್ಧ ಕ್ರಯ ಕೊಟ್ಟು ಪಾಯಖಾನೆ ಮಾಡುವ, ನೆಲ ಕೊರೆಯುವ ಮತ್ತು ಸುತ್ತು ದರೆ ಹಾಕುವ ಖರ್ಚನ್ನು ಕೊಡುವಲ್ಲೆಲ್ಲಾ ಅವರಿಗೆ ಬಹು ಗಟ್ಟಿಯಾದ ಸುಣ್ಣದ ಕಲ್ಲಿನ ಹಲಿಗೆಗಳನ್ನು ಅರ್ಧ ಕ್ರಯಕ್ಕೆ ಕೊಡುತ್ತಾರೆ.

ಈ ಜಿಲ್ಲೆಯಲ್ಲಿ ನಿಶ್ಚಿತ ಕೆಲವು ಹಳ್ಳಿಗಳಲ್ಲಿ ಸರಕಾರದವರು ಸಾರ್ವಜನಿಕ ಉಪಯೋಗದ ಬಗ್ಗೆ ಭೂಮಿ ಕೊರೆದು ಮಾಡುವ ೪೦ ಪಾಯಖಾನೆಗಳನ್ನು ಕಟ್ಟಿಸುತ್ತಾರೆ. ಹೀಗೆ ಈ ನಿಶ್ಚಿತ ಗ್ರಾಮಗಳಲ್ಲಿ ಬಹಳ ಕಾಲದಿಂದ ಇರುವ ದೋಷಗಳು ಈ ಯೋಜನೆಯಿಂದ ದೂರವಾಗುವುವಲ್ಲದೆ—ಅಲ್ಲಿಯ ಕಾರ್ಯವು ಹತ್ತಿರವಿರುವ ಇತರ ಹಳ್ಳಿಗಳಿಗೂ ಆದರ್ಶ ರೂಪವಾಗಿ ಫಲಿಸ

(೧೦ನೇ ಪುಟ ನೋಡಿ)

ಕಿವುಡರಿಗೆ

"ಡೆಫ್‌ಕಿಲ್ಲರ್" ಕಿವುಡತನವನ್ನೂ, ಕಿವಿಗೆ ಸಂಬಂಧಿಸಿದ ಇತರ ಎಲ್ಲ ರೋಗಗಳನ್ನೂ ಶಾಶ್ವತವಾಗಿ ಗುಣಪಡಿಸುವ ಹೊಸದೊಂದು ಅತ್ಯಾಶ್ಚರ್ಯಕರವಾದ ಔಷಧ. ಕಿವುಡತನವು ಎಷ್ಟೇ ಹಳೆಯದಾಗಿರಲಿ, ಅದು ಯಾವ ಸಂದೇಹವೂ ಇಲ್ಲದೆ, ಯಾವತ್ಕಾಲಕ್ಕೂ ಗುಣವಾಗುವುದು ಮತ್ತೂ ಕಿವುಡರು ಸಂಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಕೇಳಲು ಆರಂಭಿಸುವರು. ಕಿವುಡತನವು ಸ್ವಲ್ಪವಾಗಿರಲಿ, ಪಾರ್ಶ್ವವಾಯುವಾಗಿರಲಿ, ಸಂಪೂರ್ಣವಾಗಿರಲಿ, ಅದು ಕಠಿಣವಾದ ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ, ಮುದುಡಿಹೋದ ನರಗಳಿಂದ ಅಥವಾ ಗಂಟಲಿನ, ಮೂಗಿನ ಇಲ್ಲವೆ ಒಳಗಿನ ಅವಯವಗಳ ತೊಂದರೆಗಳಿಂದಲೇ ಉಂಟಾಗಿರಲಿ—ಏನೂ ಚಿಂತ್ಯವಿಲ್ಲ. ಕಿವಿ ಸೋರುವುದು ಕೂಡ ಇದರಿಂದ ನಿಲ್ಲುವುದಲ್ಲದೆ, ಸ್ಪಷ್ಟವಾಗಿ ಕೇಳುವ ಶ್ರವಣಶಕ್ತಿಯು ಶಾಶ್ವತವಾಗಿ ಹಿಂದಿರುಗುವುದು. ಈ ದಿವ್ಯೌಷಧದಿಂದ ಸಾವಿರಾರು ಮಂದಿ ಕಿವುಡರು ಯಶಸ್ವಿಯಾಗಿ ಗುಣಹೊಂದಿದ್ದಾರೆ. **ಬೆಲೆ ರೂ. 5. ಪೋಸ್ಟೇಜ್ ಆಣೆ 7.**

MAHAMBS TRADING COMPANY OF ASIA, Indian Depot, P. O. Box 2186, Bombay.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸರ್ವ-ಗೊನೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ಪೀಳಿಗೆಕಾಲಕಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಕೃಚ್ಛ್ರ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗಕಾರುವಿಕೆ, ಧಾತುಸ್ರಾವ, ಬಿಳುಪು ಹರಿಯುವಿಕೆ ಇತ್ಯಾದಿ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, GIRGAUM BACK ROAD, BOMBAY 4.

GONO ORIGINAL KILLER

ನಕಲಿಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

THE KING OF DYES
Special Royal
Hair
Dye

1935ನೇ ಇಸ್ವಿಯ ಎ. ಐ. ಐ. ಪ್ರದರ್ಶನದಲ್ಲಿ ಬಂಗಾರದ ಬಹುಮಾನ ಪದಕವು ದೊರಕಿದೆ.

ನಿಮ್ಮ ಕೂದಲು ತನ್ನ ಸ್ವಾಭಾವಿಕ ಬಣ್ಣವನ್ನು ಕಳೆಯುತ್ತಿದೆ ಮತ್ತೂ ಹೊಳಪಿನ ಮೃದುತ್ವವನ್ನು ಪಡೆಯುತ್ತಿದೆ— ಈ ನಿಮ್ಮ ಗುಟ್ಟನ್ನು ಯಾರೂ ತಿಳಿಯರು. ಇಂದೇ ಒಂದು ಬಾಟಲಿಯನ್ನು ತರಿಸಿ— ಅದರಷ್ಟು ಒಳ್ಳಿದು ಇಂಡಿಯದಲ್ಲಿ ಇನ್ನೊಂದಿಲ್ಲ.

1 ಪೆಟ್ಟಿಗೆಗೆ ರೂ. 1—2. 6 ಪೆಟ್ಟಿಗೆಗಳಿಗೆ ರೂ. 5--0.
3 ಪೆಟ್ಟಿಗೆಗಳಿಗೆ ,, 2—12. 12 ಪೆಟ್ಟಿಗೆಗಳಿಗೆ ರೂ. 9—0.
ಪೋಸ್ಟೇಜಿನ ಸಹಿತ ಬೆಲೆ ಇಂಡಿಯಕ್ಕೆ ಮಾತ್ರ.

ಇಂಡಿಯಕ್ಕೆ ಸೋಲ್ ಡಿಸ್ಟ್ರಿಬ್ಯೂಟರ್ಸ್:—
THE MAQBOOL AGENCY,
Bombay 3. Tel: "AGENCY."

ಸಾಯುವಾಗಲೂ ಮುಖ್ಯವಾದ ಒಳ್ಳೆಯ ಕರ್ತನಾಗಿ.
ನಾನು ಕರಾಡ ಜನರು, ಕಟ್ಟಿಲ್ಲ, ಕಬ್ಬುಡ ಸಮುದಾಯ, ಗಾಜಿನ ಸಾಮಾನು, ಇಂಡಿಸ್ ಮತ್ತು ಪೇಟಿಂಟ್ ಔಷಧಗಳು ಇವೇ ಮೊದಲಾದ ಪುಸ್ತಿಯೊಂದು ಬಗೆಯ ಪರಕಾಗಳನ್ನೂ ಮಿತವಾದ ಕಮಿಶನ್ ಪರದಲ್ಲಿ ಒದಗಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಿದ್ದೇನೆ. ಒಮ್ಮೆ ಪರೀಕ್ಷಿಸಿದಲ್ಲಿ ಯಾವಾಗಲೂ ತರಿಸುವಂತಾಗುವುದು. ಎಲ್ಲ ಪತ್ರವ್ಯವಹಾರವೂ ಇಂಗ್ಲೀಷಿನಲ್ಲಿ ನಡೆಯತಕ್ಕದ್ದು.

DIAMONDS! DIAMONDS!
BEST BRILLIANCY!
K. R. K. SHET,
Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟ್ಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸಪ್ಲಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.

The United India Life Assurance Co., Ltd.,
Head Office: MADRAS. { ESTABLISHED: 1906. } Branch for Karnatak: UDIPI.
POLICIES IN FORCE EXCEED 3,00,00,000.
(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.
It will pay you to represent this oldest Life Office.
A policy in United India will give you the maximum benefits.
For particulars apply to:—
M. K. SRINIVASAN, B. A., B. L., Managing Director. OR PANGALKAR BROTHERS, DISTRICT & GENERAL AGENTS, KODIALBAIL, MANGALORE.

A Modern Way
A CURRENT Account saves you time and steps. The Bank keeps for you an excellent receipt—your paid cheque. And your cheque book gives you the whole story of just where every pie goes. It is a complete record on which to build your budget.
Consider the advantages of this modern way to handle money and start a Current Account with any one of the offices of this Bank.
The Travancore National Bank, Ltd.
INCORPORATED IN TRAVANCORE 1912.
Head Office: ALLEPPEY.

Paid up Capital & Reserves ...	... Rs.	13,71,000
Deposits ...	... Rs.	1,49,00,000
Total Resources ...	... Rs.	1,84,00,000

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ ದ್ರಾಕ್ಷಾಮೃತ ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರಖಂಡ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಮಿಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ಸಸಿಕೆಸಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧॥ ರೂ. ೩ ಬಾ. ಬೆಲೆ ೪॥ ರೂ.
೧ ಡಜನ್ ಬಾ. ಬೆಲೆ ೧೩ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)
ಮಂಗಳೂರು—ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ. ಕಾರ್ಕಳ—ವ್ಹಿ. ವ್ಹಿ. ಶೆಣೈ. ಕುಂದಾಪುರ—ಕೆ. ಆರ್. ಭಡಜೀ. ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸರ್ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

Spleen & Liver Enlargement. ಯಕೃದಂದು (ರಿಜಿಸ್ಟರ್ಡ್)
ಮಕ್ಕಳ ಮರಣವನ್ನು ತಪ್ಪಿಸುವುದು. ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಅಜೀರ್ಣ, ಭೇದಿ, ಮಲಬದ್ಧತೆ, ಹಸುರು ನರಗಳು, ಕಾಮಾಲೆ, ಮೈ ಕೈ ಬಾವು, ಕ್ಷೀಣತ್ವಗಳಲ್ಲಿ ಒಂದೇ ವಾರದಲ್ಲಿ ಅತ್ಯಾಶ್ಚರ್ಯಕರವಾದ ಗುಣ ಕೊಡುವುದು. ವರ್ಷಗಟ್ಟಲೆ ಔಷಧವನ್ನು ಕುಡಿಸಿ ವ್ಯಥೆಪಡಬೇಡಿರಿ.
ಪ್ರಧಾನ ವೈದ್ಯರು:—ಡಾ॥ ಎ. ಎಸ್. ಶ್ರೀನಿವಾಸ ರಾವ್, ಯಂ. ಸಿ. ಪ್ರಾಸಾದಿಕ ಔಷಧಾಲಯ, ಶಿವಮೊಗ್ಗ. ಸಿಟಿ ಜನರಲ್ ಮೆಡಿಕಲ್ ಏಜನ್ಸಿ, ಬೆಂಗಳೂರು.

ಕಳೆದ ವಾರ

ರಾಂಚಿಯಲ್ಲಿ ಜರುಗಿದ ಪ್ರವಾಸಿ ವಂಗಸಾಹಿತ್ಯ ಸಮ್ಮೇಳನದಲ್ಲಿ

ಅಧ್ಯಕ್ಷರಾದ, ಸಾಹಿತ್ಯವಿಚಾರದಲ್ಲಿ ಮಹಾವಿದ್ವಾಂಸರಾದ ರಾಯ್ ಬಹದೂರ್ ದಿನೇಶ್‌ಚಂದ್ರ ಸೇನ್‌ರವರು ಅಪ್ಪಣೆ ಕೊಡಿಸಿದ ಕೆಲವು ಮುಖ್ಯ ಅಂಶಗಳು ಮನನೀಯವಾಗಿವೆ. 'ಬಂಗಾಳಿ ಸಾಹಿತ್ಯವು ಉತ್ಕೃಷ್ಟವಾಗಿದೆ; ಅದು ಉಚ್ಚಸ್ಥಾನವನ್ನು ಅಡರಿದೆ ಎಂಬುದನ್ನು ಪ್ರಪಂಚದ ಇತರ ವಾಙ್ಮಯಪಂಡಿತರೂ ಒಪ್ಪಿದ್ದಾರೆ; ವಂಗಸಾಹಿತ್ಯದ ಉತ್ಕರ್ಷವು ಜಯದೇವ, ಮೈಕೇಲ್ ಮೊದಲಾದ ಘನವಿದ್ವಾಂಸರಿಂದ ಆಯಿತೆಂಬುದು ನಿರ್ವಿವಾದದ ಮಾತು; ಬಂಗಾಳಿಯು, ಒಂದು ಕಾಲದಲ್ಲಿ, ಒರಿಸ್ಸಾ, ಆಸ್ಸಾಂ, ಮಣಿಪುರ ಮತ್ತೂ ರಂಗೂನುಗಳನ್ನೂ ಆಕ್ರಮಿಸಿದ್ದಿತು. ಈಗ ಬಂಗಾಳಿ ಸಾಹಿತ್ಯದಲ್ಲಿ ರೋಮಿಯ ಸಂಪ್ರದಾಯವನ್ನು ತಂದುಕೊಳ್ಳಬೇಕೆಂದು ಹೂಡಿರುವ ಚಳವಳಿಯು ಸಯುಕ್ತಿಕವೇ ಆಗಿದೆ. ಏಕೆಂದರೆ, ಇದರಿಂದ ನಮ್ಮ ಪ್ರಾಚೀನ ಸಾಹಿತ್ಯಸಂಪತ್ತನ್ನು ಇಂದಿನ ಸಾಹಿತ್ಯದೊಡನೆ ಬಲವಾಗಿ ಬಂಧಿಸಿದ ಹಾಗಾಗುತ್ತದೆ. ಆದರೆ ಪ್ರಾಂತಪ್ರಾಂತಗಳಲ್ಲಿ ವಿಡ್ಡೂರವನ್ನು ತಂದೊಡ್ಡುವ ಕೈಸ್ತ ಮಿಶನರಿಗಳ ಚಟುವಟಿಕೆಗಳನ್ನು ನಾನು ಖಂಡಿಸಬೇಕಾಗಿದೆ. ಇದರ ನಿರ್ಮೂಲನಕ್ಕಾಗಿ ನಾವು ಕಮಿಟಿಗಳನ್ನು ರಚಿಸುವುದೊಳ್ಳಿದು. ಬಂಗಾಳಿಯಲ್ಲಿ ಉರ್ದೂ ಶಬ್ದಗಳನ್ನು ಬಳಸಿಕೊಳ್ಳುವುದರಿಂದ ಬಂಗಾಳಿ ಮುಸ್ಲಿಮರ ಇಷ್ಟಾರ್ಥವು ಸಿದ್ಧಿಸಲಾರದೆಂದು ನನ್ನ ಅಭಿಮತ. ಒಂದು ವೇಳೆ, ಅದರಿಂದ ಕೆಡುಕೇ ಆಗಬಹುದು' ಎಂದರು.

* * * * *

ಮುಂಬರಿಯುತ್ತ ಅವರು ರಾಷ್ಟ್ರೀಯ ಸಾಹಿತ್ಯದ ವಿಚಾರವಾಗಿ

ವಿವರಿಸಿದರು. 'ಇಂಗ್ಲೀಷಿನೊಡನೆ ಬೆಳೆದು ಬಂದ ಆ ಬಂಗಾಳಿಯು, ರಾಷ್ಟ್ರೀಯ ಸಾಹಿತ್ಯವೆಂದು ಹಕ್ಕು ಸ್ಥಾಪಿಸಲಾರದು. ಹೊಸ ಯುಗದ ಬಂಗಾಳಿ ವಾಙ್ಮಯವೆಂಬುದು, ರಾಷ್ಟ್ರೀಯ ಆಂದೋಲನವನ್ನು ಕೈಬಿಟ್ಟಿದೆ; ಜನಸಾಮಾನ್ಯದ ಮೇಲೆ ಸ್ಥಪರಿಣಾಮವನ್ನು ಉಂಟುಮಾಡಲು ಅಸಮರ್ಥವಾಗಿದೆ. ಬಡ ತರಗತಿಯವರನ್ನು ಅಸಡ್ಡೆ ಮಾಡುವುದು ವಿಹಿತವಲ್ಲ. ಅವರಿಗೆ ಗಾಢವಾದ ತಾತ್ವಿಕ ಮತ್ತೂ ನೀತಿಶಾಸ್ತ್ರದ ಪ್ರಶ್ನೆಗಳಲ್ಲಿ ವಿಶೇಷವಾದ ಅಭಿಮಾನವಿದೆ. ಡಾ॥ ಹೆವಲ್‌ರ ಹಾಗೆ, 'ಇಂಡಿಯದ ಒಕ್ಕಲಿಗರು ಪಾಶ್ಚಾತ್ಯರ ರೀತಿಯಂತೆ ಅಕ್ಷರಸ್ಥರಲ್ಲದಿದ್ದರೂ, ಪ್ರಪಂಚದ ಯಾವತ್ತೂ ತರಗತಿಯವರಲ್ಲಿ ಅವರಷ್ಟು ಸುಸಂಸ್ಕೃತರಾದವರು ಇನ್ನು ಯಾರೂ ಇಲ್ಲ.'

* * * * *

ದಿನೇಶ್‌ಚಂದ್ರ ಸೇನ್‌ರವರು, ಆಧುನಿಕ ಸಾಹಿತ್ಯದ ಬೆಳವಣಿಗೆಯು

ಶೆಲ್ಲಿ, ವರ್ಡ್ಸ್‌ವರ್ತ್, ಬರ್ನಾರ್ಡ್ ಶಾ ಮೊದಲಾದವರ ಅನುಕರಣದ ಅನುಸರಣೆಯಿಂದಾಗುತ್ತಿದೆ ಎಂದರು. 'ಈ ಲೇಖಕರೇನೋ ಜಗತ್ತಿನ ವಿಚಾರಕ್ರಾಂತಿಯ ಮೇರೆಗೇ ಒಂದು ಸಾಹಿತ್ಯವನ್ನು ವೃದ್ಧಿಗೊಳಿಸಿರುವುದಾದರೂ, ಅವರು ಈ ಕಾರ್ಯದಲ್ಲಿ ರಾಷ್ಟ್ರೀಯ ಪ್ರತಿಭೆಯನ್ನು ಕೆಡಿಸಿರುವರು. ನಿಜವಾದ ವಾಙ್ಮಯದ ರಚನೆಗೆ ಅಸ್ತಿವಾರವೆಂದರೆ, ಆ ರಾಷ್ಟ್ರೀಯ ಪ್ರತಿಭೆಯೇ ಎಂಬುದನ್ನು ಯಾರೂ ಮರೆಯಬಾರದು. ಅಷ್ಟೇ ಅಲ್ಲ; ಇನ್ನೂ ಒಂದು ಮಾತಿದೆ. ಬಂಗಾಳಿ ಸಾಹಿತ್ಯದಲ್ಲಿ ಈಚಿಗಿನ ಒಂದು ಹವ್ಯಾಸವೇನಾಗಿದೆಯೆಂದರೆ, ಜೀವನದ ನೀತಿಶಾಸ್ತ್ರದ ಬೆಲೆಯನ್ನು ತಿರಸ್ಕರಿಸುತ್ತಿರುವುದೇ. ಇದು ಶುದ್ಧ ಅವಿವೇಕದ ಕೆಲಸ. ಇಂತಹ ತಪ್ಪನ್ನು ಯಾವ ಕಾಲದಲ್ಲಿಯೂ, ಯಾವ ದೇಶತ್ತೂ ಮಾಡಿಲ್ಲ. ಸಮಾಜದ ಮಸಕಾದ ಚಿತ್ರವು ನಿಜವಾದ ಸಾಹಿತ್ಯವಲ್ಲ' ಎಂದರು.

* * * * *

'ನಿಜವಾದ, ಪರಿಣಾಮಕಾರಿಯಾದ ವಾಙ್ಮಯವು ಯಾವುದು?

ಜೀವನದ ಯಥಾರ್ಥಮೌಲ್ಯ ಮತ್ತೂ ಆದರ್ಶಗಳಿಗೆ ವಿರುದ್ಧವಾಗಿ ವಿಷಯಗಳನ್ನು ವರ್ಣಿಸುವುದು ಉತ್ತಮವಾದ ಸಾಹಿತ್ಯದ ಲಕ್ಷಣವಲ್ಲ; ಇಂತಹ ವರ್ಣನೆಗಳಿಂದ ಸಮಾಜಗಳಿಗೆ ಹಾನಿಯೊದಗಬಹುದಾಗಿದೆ. ಆದುದರಿಂದ, ಇಂದ್ರಿಯೋದ್ರೇಕದ ಆನಂದವನ್ನು ಉಂಟುಮಾಡುವ ಉದ್ದೇಶದಿಂದ ಚಿತ್ರಿಸಿರುವ ಈಗಿನ ಹೊಲಸು ಸಾಹಿತ್ಯದ ಕಂತೆಯನ್ನು ಮೂಲೆಗೊತ್ತಿ; ಇತಿಹಾಸಪ್ರಸಿದ್ಧವಾದ, ದೇಶದ ಸ್ಫೂರ್ತಿಗೆ ಸರಿಯಾದ ಸಾಹಿತ್ಯವನ್ನು ನಿರ್ಮಿಸಿಕೊಳ್ಳಿ. ಅದೇ ನಿಜವಾದ ಸಾಹಿತ್ಯ' ಎಂದರು. ಈ ಮಾತುಗಳು ನಮ್ಮ ಕರ್ನಾಟಕ ವಾಙ್ಮಯಕ್ಕೂ ಎಷ್ಟು ಚೆನ್ನಾಗಿ ಅನ್ವಯಿಸುತ್ತವೆ!

* * * * *

ಲಿಬರಲ್ ಪಂಗಡದ ರಾಜನೀತಿ; ಹೊಡೆದೂ ನೆವರಿಸಬೇಕೇ?

ನಮ್ಮ ಲಿಬರಲ್ ಪಂಗಡದ ರಾಜನೀತಿಯ ರೀತಿಯ ದೇಕೋ ವಿಜಾತೀಯವಾಗಿ ತೋರುತ್ತದೆ. 'ಸುಧಾರಣೆಗಳು, ಮುಂದೆ ಬರತಕ್ಕವು, ಅವೇನೋ ಎಷ್ಟಕ್ಕೂ ಸಾಲದು; ಮಾತ್ರವಲ್ಲ; ಅವುಗಳ ಗುಣ ಸ್ವಭಾವ ಅನೇಕ ಸಂದರ್ಭಗಳಲ್ಲಿ ಹಿಂದಿನವುಗಳಿಗಿಂತಲೂ ಕೆಟ್ಟವಾಗಿವೆ. ಅವು ಹಿಂದೀ ರಾಷ್ಟ್ರೀಯರ ಅಭಿಮತಕ್ಕೆ ಎಂದೂ ಅನುಗುಣವಾಗಿಲ್ಲ' ಎಂದು ದೂರುವವರೂ ಅವರೇ. ಆದರೆ, ಕಾರ್ಯಸ್ಥಂಭನವನ್ನು ಉಂಟುಮಾಡಿ, ತನ್ಮೂಲಕ ಈ ಹೊಸ ರಾಜ್ಯರಚನೆಯನ್ನು ಪಾತಾಳಕ್ಕೊತ್ತಿ ಬಿಡೋಣವೆಂಬ ಕಾಂಗ್ರೆಸಿನವರ ತೀರ್ಮಾನವನ್ನೊಪ್ಪದೆ, 'ಜನರ ಸಾಮಾಜಿಕ, ಆರ್ಥಿಕೋನ್ನತಿಗಳು ಆದಷ್ಟಾಗುವಂತೆ, ಡೊಮಿನಿಯನ್ ಸ್ಟೇಟಸಿನ ಗುರಿ ಮುಟ್ಟುವ ಆ ಹೆಜ್ಜೆ, ಸಾಧ್ಯವಿರುವಷ್ಟು ಮುಂದುವರಿಸುವ ಹಾಗೆ, ಈ ರಾಜ್ಯರಚನೆಯ ಸುಧಾರಣೆಗಳನ್ನು ನಾವು ಅಗತ್ಯವಾಗಿಯೂ ಉಪಯೋಗಿಸಿಕೊಳ್ಳೋಣ' ಎಂದು ಸಾರುವವರೂ ಅವರೇ. ಅಂದರೆ,—?

* * * * *

ಈ ಬಗೆಯಾಗಿ ತರ್ಕಿಸಿ ನೋಡೋಣ.

ಈ ಸುಧಾರಣೆಗಳನ್ನು ಜನರ ಸಾಮಾಜಿಕ, ಆರ್ಥಿಕೋನ್ನತಿಗಾಗಿ ನಾವು ಉಪಯೋಗಿಸಿಕೊಳ್ಳಬಹುದೆಂದು ಲಿಬರಲರು ಸಂಪೂರ್ಣವಾಗಿ ನಂಬಿರುವುದಾದರೆ, ಅವರೇ ಈಗ 'ಈ ಸುಧಾರಣೆಗಳು ಎಷ್ಟಕ್ಕೂ ಸ್ವೀಕಾರಯೋಗ್ಯವಲ್ಲ'ವೆಂದು ಬಾಯಿ ಹಾರಿಸುವುದಾದರೂ ಏತಕ್ಕೆ? ಪುನಃ ಈ ಸುಧಾರಣೆಗಳನ್ನು ನಾವು, ಡೊಮಿನಿಯನ್ ಸ್ಟೇಟಸಿನ ಗುರಿಗೆ ಸಮೀಪಿಸುವಂತೆ ಉಪಯೋಗಿಸಿಕೊಳ್ಳಬಹುದಾದರೆ, ಅವೇ ಸುಧಾರಣೆಗಳೇ ಈಗ, 'ಎಷ್ಟಕ್ಕೂ ಸ್ವೀಕಾರಯೋಗ್ಯ'ವಾಗದಿರುವುದಾದರೂ ಏತಕ್ಕೆ? ಈ ರೀತಿ ಹೊಡೆದೂ ಮತ್ತೆ ಹೊಡೆದಲ್ಲಿ ನೆವರಿಸಿಯೂ ಲಾಭವೇನು? ಈ ಸುಧಾರಣೆಗಳನ್ನು ಪಾತಾಳಕೊತ್ತಲು ಸಾಧ್ಯವಿಲ್ಲವೆಂದು, ಲಿಬರಲು ಮನಃಪೂರ್ವಕವಾಗಿ ನಂಬಿರಲೂ ಬಹುದು. ಆ ನಂಬಿಕೆ ನ್ಯಾಯವೂ ಆಹುದು. ಈ ವಿಷಯದಲ್ಲಿ ಬೇಕಾದರೆ ಲಿಬರಲರು ಕಾಂಗ್ರೆಸಿನವರ ಬಡಾಯಿಗಾಗಿ ಅವರನ್ನು ಹಂಗಿಸಿದರೂ, ಹಂಗಿಸಿಕೊಳ್ಳಲಿ. ಆದರೆ ಸುಧಾರಣೆಗಳಲ್ಲಿ ಯಾವ ಸದ್ಗುಣಗಳಿಲ್ಲವೋ, ಅವನ್ನು ಉಂಟೆಂದು ಈ ಲಿಬರಲರು ಸ್ಥಾಪಿಸಲು ಪ್ರಯತ್ನಿಸುವುದರಲ್ಲಿ ನಮಗಂತೂ ಅರ್ಥವು ತೋರುವುದಿಲ್ಲ. ಅದೇಕೆ ನಮ್ಮ ಲಿಬರಲರು ವ್ಯಕ್ತವಾಗಿ ಹೇಳಬಾರದು? 'ಸುಧಾರಣೆಗಳೇನೋ ಕೆಟ್ಟವೇ; ಆದರೆ ಅದನ್ನು ನಮ್ಮ ಗಂಟಲಿಗೆ ತುರುಕಿದ್ದಾರೆ. ನಮಗೆ ಅದನ್ನು ನುಂಗಲೂ ಸಾಧ್ಯವಿಲ್ಲ; ಉಗುಳಲೂ ಶಕ್ತಿ ಇಲ್ಲ. ಈ ಸುಧಾರಣೆಗಳನ್ನು ನಾವು ಕೈಬಿಡಲೂ ಆರೆವು; ನಾಶಪಡಿಸಲೂ ಆರೆವು; ಅಥವಾ ಅವುಗಳನ್ನು ಪಾತಾಳಕ್ಕೊತ್ತಲೂ ಆರೆವು!' ಎಂದು ಅವರು ಕಂಠೋಕ್ತವಾಗಿಯೇ ನುಡಿದರೇನು ಅಗಾಧ ರಾಜದ್ರೋಹವಾದೀತೇ?

* * * * *

ಜೋಗಿಯಾದರೂ ಕೆಟ್ಟ; ಜಂಗಮನಾದರೂ ಕೆಟ್ಟ.

ಹೀಗಿದೆ ಪ್ರಪಂಚದ ಸ್ಥಿತಿ. ಅಲ್ಲ,—ಒಬ್ಬ ರಾಜನಾದವನು, ತನ್ನ ಇಚ್ಛೆಯಂತೆ, ಒಬ್ಬಾಕೆಯನ್ನು ಮದುವೆಮಾಡಿಕೊಳ್ಳಲು ಯತ್ನಿಸುವುದು ಅದೊಂದು ತಪ್ಪಾಗಿರಬಹುದೆನ್ನಿ. ಆದರೆ ಮದುವೆಯಾಗಿದೆ; ಹೆಂಡತಿ ಹೋಗಿದ್ದಾಳೆ; ವಿಧುರನಾಗಿದ್ದಾನೆ. ಅಂತಹ ರಾಜನೊಬ್ಬನು ಎರಡನೆಯ ಮದುವೆಯಾಗಲೊಪ್ಪದಿದ್ದರೆ, ಇದೂ ಒಂದು ತಪ್ಪಾದೀತೇನು? ನೋಡಿ ಬೆಲ್ಜಿಯಮ್ಮಿನಲ್ಲಿ; ಅಲ್ಲಿನ ದೊರೆಯಾದ ಲಿಯಾಪಾಲ್ಡ್ ಪ್ರಭು, ತಾನೇ ಕಾರ್ ನಡೆಸುತ್ತಿದ್ದಾಗ, ಉರುಳಿ, ಅದರಲ್ಲಿದ್ದ ರಾಣಿಗೆ ಪೆಟ್ಟಾಗಿ ಮೃತಳಾದಳು, ಪಾಪ; ರಾಜನ ಆ ಕಣ್ಣೀರಾದರೂ ಇನ್ನೂ ಆರಿಲ್ಲ; ಆ ದುಃಖ ಮರೆತಿಲ್ಲ; ಆ ರಾಣಿಯ ಭಸ್ಮವಾದರೂ ಇನ್ನೂ ತಣ್ಣಗಾಗಿಲ್ಲ. ಹೀಗಿದ್ದರೂ ಬೆಲ್ಜಿಯಮ್ಮಿನ ಮಂತ್ರಿಗಳು, ಪುನರ್ವಿವಾಹವಾಗಲೇ ಬೇಕೆಂದು ರಾಜನನ್ನು ಪ್ರಾಣ ಹಿಂಸೆ ಮಾಡುತ್ತಿರುವರು. 'ಆಸ್ಟ್ರಿಯದ ಪಟ್ಟಕ್ಕೆ ಹಕ್ಕುದಾರನಾದ ರಾಜಕುಮಾರ ಒಟ್ಟೋವಿನ ಸಹೋದರಿಯೊಬ್ಬಳಿದ್ದಾಳೆ; ಆಕೆಯನ್ನು ಮದುವೆಯಾಗಬೇಕು; ಇದು ರಾಜಕೀಯ ಉದ್ದೇಶವುಳ್ಳ ಮದುವೆ; ಇದರಿಂದ ಬೆಲ್ಜಿಯಮಿನ ಸ್ಥಾನವು ಭದ್ರವಾಗುವುದು' ಎಂದು ಮಂತ್ರಿಗಳ ಮನೋಗತ. ಹಾಗಾದರೆ, ಬೆಲ್ಜಿಯಮಿನ ದೊರೆ, ಒಂದೋ, ಇವರೆನ್ನುವಂತೆ, ಈ ಬಲಾತ್ಕಾರದ ರಾಜಕೀಯ ಮದುವೆಗೊಪ್ಪಲೇ ಬೇಕು. ಇಲ್ಲವಾದರೆ, ಬೆಲ್ಜಿಯಮಿನ ಸಿಂಹಾಸನವನ್ನು ಆರು ವರ್ಷದ ತನ್ನ ಮಗನಿಗೆ ಬಿಟ್ಟುಕೊಟ್ಟು ತಾನು ವನವಾಸಕ್ಕೆ ತೆರಳಬೇಕು. ಹೇಗಿದೆ ರಾಜಮಹಾರಾಜರ ಮದುವೆಗಳ ಸುಖಪ್ರಾರಬ್ಧ!

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

Estd: 1906

CANARA BANK

LIMITED.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ

O. P. ನಂಬ್ರ 164/1936

1. ಜೆಸ್ಸಿ ಅಂಚನ್
2. ಬೆನಿಗ್ನಸ್ ಸ್ಟೆನಿಸ್‌ಲಾಸ್ ತೆದೋರ ಮ್ಯಾನರ, ಈತನ ಹಿತಚಿಂತಕಳು 1ನೇ ಅರ್ಜಿದಾರಳು,

} ಅರ್ಜಿದಾರರು.

ಮತ್ತು

ದೇವಪುತ್ರ ಅಂಚನ್ ವಗಯಿರರು—**ರೆಸ್ಪೋಂಡೆಂಟರು.**

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮಂಗಳೂರು ಶಹರಲ್ಲಿ ತಾ. 13—5—1936ರಲ್ಲು ಮೃತಪಟ್ಟ ತಿಯೋದರ ಅಂಚನ್‌ರೀಗೆ ಹೊರಗಿನಿಂದ ಬರತಕ್ಕ ಸಾಲದ ಹಣಗಳನ್ನು ವಸೂಲು ಮಾಡಿಕೊಳ್ಳುವ ಬಗ್ಗೆ 1ನೇ ಅರ್ಜಿದಾರಳಿಗೆ ವಾರಿಸು ಸರ್ಟಿಫಿಕೇಟು ಸಿಕ್ಕಬೇಕಾಗಿ ಅರ್ಜಿದಾರರು ಮಾಡಿದ ಅರ್ಜಿಯು ತಾ. 21—1—1937ರಲ್ಲು ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರತ್ತದೆ. ಆಕ್ಷೇಪಯಿದ್ದವರು ಉದಾಹರಣೆಯಿದ್ದರೆ ಸದ್ರಿ ತಾರಿಕಿನ ವಳಗೆ ಜಾಹೀರುಮಾಡಿಕೊಳ್ಳತಕ್ಕದ್ದು.

Mangalore, 8—1—1937. } M. Keshava Pai, *Counsel for Petitioners.*

ಆರ್. ಮಾರ್ಟಿನ್ಸ್‌ರ

ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮೂತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್‌ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.

ಶಾಖೆಗಳು: ಪುತ್ತೂರು, ಕಾಸರಗೋಡು, ಬಿಕ್ಕಮಗಳೂರು, ಮತ್ತು ಮೂಡಿಗೆರೆ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ಮೇಲೆ, ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ವಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO
ಸೆಕ್ರಟರಿ.

ಓರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ
ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874. ಹೆಡ್ ಆಫೀಸು—ಬೊಂಬಯಿ.

1935ನೇ ಇಸವಿಯ ವರದಿಯ ಸಾರಾಂಶ.

ಹೊರಡಿಸಲಾದ ಹೊಸ ವಿಮಾಪತ್ರಗಳು	ರೂ.	8,89,89,149
ವಾರ್ಷಿಕ ಉತ್ಪನ್ನ	,,	3,49,16,412
ಜ್ಯಾರಿಯಲ್ಲಿರುವ ವಿಮಾಪತ್ರಗಳು	,,	59,25,32,038
ಒಟ್ಟಿಗೆ ತೆತ್ತ 'ಕ್ಲೈಮು'ಗಳು	,,	17,43,21,855
ಫಂಡ್ ಹೆಚ್ಚಿದ ಮೊತ್ತ	,,	17,01,62,491

ಇಂಡಿಯದ ಪ್ರಾಮುಖ್ಯ ಜೀವನಿಮಾ ಕಾರ್ಯಾಲಯವಾದ

ಓರಿಯಂಟಲ್

ಸಂಸ್ಥೆಯ ಜನಪ್ರೀತಿಯನ್ನೂ, ಅದರ ದೃಢವಾದ ಸ್ಥಿತಿಯನ್ನೂ ಈ ಮೇಲಿನ ಅಂಕೆಸಂಖ್ಯೆಗಳು ಸ್ಪಷ್ಟೋಕ್ತಿಗಳಿಂದ ವಿಶದಗೊಳಿಸುತ್ತಿವೆ.

ಜನಪ್ರೀಯವಾದ ಮತ್ತೂ ಅಭಿವೃದ್ಧಿ ಪಡೆಯುತ್ತಿರುವ
ಭಾರತೀಯ ಜೀವನಿಮಾ ಕಾರ್ಯಾಲಯದಲ್ಲಿ
ನಿಮ್ಮ ಜೀವವನ್ನು ವಿಮೆ ಇಳಿಸಲು
ವಿಳಂಬ ಮಾಡಬೇಡಿ.

ಹೆಚ್ಚಿನ ವಿವರಕ್ಕೆ ಬರೆಯಿರಿ:—
ಶಾಖಾ ಕಾರ್ಯದರ್ಶಿಗಳು, ಓರಿಯಂಟಲ್ ಲ್ಯಾಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್, ಬೆಂಗಳೂರು ಇವರಿಗೆ

ಆಥವಾ ಕಂಪೆನಿಯ ಈ ಕೆಳಗಿನ ಯಾವುದಾದರೊಂದು ಕಾರ್ಯಾಲಯಕ್ಕೆ

ಆಗ್ರಾ	ಕೊಲೊಂಬೊ	ಲಾಹೋರ್	ಪೇಶಾವರ
ಅಜ್ಮೀರ್	ಡಾಕ್ಕಾ	ಲಕ್ನೋ	ಪೂನಾ
ಅಹಮ್ಮದಾಬಾದ್	ಢಿಲ್ಲಿ	ಮದ್ರಾಸ್	ರಾಯಿಪುರ
ಅಲ್ಲಹಾಬಾದ್	ಗೌಹತಿ	ಮ್ಯಾಂಡಲೇ	ರಾಜಶಾಹಿ
ಅಂಬಾಲ	ಗುಂಟೂರು	ಮಧುರಾ	ರಾಂಚಿ
ಅಮೃತಸರ	ಜಲಗಾಂ	ರಂಗೂನು	ರಾವಲ್ಪಿಂಡಿ
ಬಾರೇಲಿ	ಜಲಪೈಗುರಿ	ಮೊಂಬಾಸಾ	ಸಿಂಗಾಪೂರ್
ಬಳ್ಳಾರಿ	ಜೋಧ್ಪುರ	ಮುಲ್ತಾನ್	ಸಕ್ಕೂರ್
ಕಲ್ಕತ್ತಾ	ಜಬಲ್‌ಪೂರ್	ಮೈಸೂರು	ತ್ರಿಚಿನಾಪಳ್ಳಿ
ಕಲ್ಲಿಕೋಟೆ	ಕರಾಚಿ	ನಾಗ್ಪುರ	ತ್ರಿವೆಂದ್ರಪುರ್
ಕೊಯಂಬತ್ತೂರು	ಕೌಲಾಲಂಪೂರ್	ಪಾಟ್ನಾ	ವಿಶಾಖಪಟ್ಟಣ.

ಕೆ. ಆರ್. ಕೆ. ಭಟ್, ಎಸ್ಟ್ಯೂಯರ್,
ಎಕ್ಸಿಂಗ್ ಇನ್ಸ್‌ಪೆಕ್ಟರ್, ಓರಿಯಂಟಲ್ ಲ್ಯಾಫ್ ಆಫೀಸು, ಮಡಿಕೇರಿ.

ಡಿ. ವಾಸ್ ಎಂಡ್ ಸನ್ಸ್, ಏಜಂಟ್ಸ್,
ಮಂಗಳೂರು, ದ. ಕ.

FOR YOUR DIAMONDS
ENQUIRE AT
SOWCAR
SRINIVAS RANGA PAI
SOWCAR MAHAL,
Car Street,
MANGALORE.

ಯೂನಿಟ್ ಸೆಲ್ಲುಗಳು
ದೀರ್ಘವಾದ ಬಾಳಿಕೆ
ಶುಭ್ರವಾದ ಪ್ರಕಾಶ
ಅಮೇರಿಕನ್
ಎವರೆಡಿ
ಟ್ರೇಡ್‌ಮಾರ್ಕ್

ಯು. ಎಸ್. ಎ.ಯಲ್ಲಿ ತಯಾರಾದುದು.
ಕಾರ್ಖಾನೆಯ ಪ್ರತಿನಿಧಿಗಳು
ಡಾಜ್ ಎಂಡ್ ಸೈಮೂರ್, ಲಿಮಿಟೆಡ್,
ಕಲ್ಕತ್ತಾ, ಬೊಂಬಯಿ, ಮದ್ರಾಸ್,
ಕರಾಚಿ, ಲಾಹೋರ್, ಢಿಲ್ಲಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವ
ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟ
ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜ
ಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರ

ತಯಾರಿಸುವವರು:—
ಆಯುರ್ವೇದಾಶ್ರಮ, ಪೋ. ಬೋಕ್ಸ್ 28,

ಸ್ಟೋಕಿಸ್ಟರು:—**ಪೊಪ್ಯುಲರ್ ಸ್ಟೋರ್ಸ್, ಮಂಗ**

ಕೇರಳದ ಸಾಬೂನುಗಳು

ಪೂರ್ಣವಾಗಿಯೂ ಅವು ಸ್ವದೇಶಿಯಾದುದರಿಂದಲೇ ನೀವು ಉಪಯೋಗಿಸಿರೆನ್ನುವ
ವಾದುವು. ಅವು ಉತ್ಕೃಷ್ಟವಾದ ಸಾಧನಗಳಿಂದ, ಯೋಗ್ಯರಾದ ಹಿಂ
ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರಿಪ್ರೆಸೆಂಟೇಟಿವ್:—ಆರ್. ಸಿ. ದಲಾಲ್, ಕಲ್ಲಿಕೋ

ಪತ್ರವ್ಯವಹಾರ

ಸೂಚನೆ:—[ಬಾತಮಿದಾರರ ಅಭಿಪ್ರಾಯಗಳು ಕಂಠೀರವದ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ನಿವಾಸ ಕೊಡಬೇಕಾಗಿದೆ– ಸಂ.]

ಬಂಟ ಬಾಂಧವರಲ್ಲಿ 'ಬಂಟಪ್ಪ'ನ ಹೇಳಿಕೆ.

ಬಂಟರ ಯಾನೆ ನಾಡವ ಸಮಾಜವು ನಮ್ಮ ದೇಶದ ಪ್ರಧಾನ ಸಮಾಜಗಳಲ್ಲೊಂದು. ಈ ಸಮಾಜಕ್ಕೆ ಸೇರಿದ ಬಂಟಪ್ಪನೆಂಬವರೊಬ್ಬರು ಜನವರಿ ೧೨ರ ಕಂಠೀರವದಲ್ಲಿ ತನ್ನ ಸಮಾಜಬಾಂಧವರಲ್ಲಿ ಒಂದು ಪ್ರಾರ್ಥನೆ ಮಾಡಿಕೊಂಡಿರುವರು. ಅವರು ಬರೆದ ವಿಚಾರವು ಕುಂದಾಪುರ ಡಿವಿಜೆನಿನ ಚುನಾವಣೆಗಳ ಕುರಿತು ಎಂಬುದರಿಂದ ಇದೇ ಕೇವಲ ಬಂಟ ಸಮಾಜದ ಪ್ರಶ್ನೆಯಾಗಿರದೆ ಸಾರ್ವಜನಿಕ ರಾಜಕೀಯ ವಿಷಯವಿದ್ದು ಈ ದೃಷ್ಟಿಯಲ್ಲಿ ನಾನೂ ಒಂದೆರಡು ಮಾತುಗಳನ್ನು ಹರಿ ಅಸುಚಿತವಾಗಲಾರದೆಂದು ಭಾವಿಸಿ ಬಂಟ ಬಾಜಡೊಡನೆ ಈ ನನ್ನ ನಮ್ರವಿನಂತಿಯನ್ನು ಡಲಿಚ್ಛಿಸುತ್ತೇನೆ.

ಚುನಾವಣೆಯು ಹಾವಳಿಯನ್ನು ಕುರಿತು ಬಂಟ ನವರು ಬರೆದ ಮಾತುಗಳು ಯಾರ ಮನಸ್ಸಿಗೂ ತ್ಯ ಮಾತುಗಳೇ ಇವೆ. ಯಾಕೆಂದರೆ ಅವುಗ ಶವಿರುತ್ತವೆ. ಜಾತಿಬಾಂಧವರಲ್ಲಿ, ರಲ್ಲಿ, ಮನೆಮನೆಗಳಲ್ಲಿ ತಂಡವಿತಂಡ ಚುನಾವಣೆಗಾಗಿ ಆಹಾರ ದ್ರವ್ಯವು ಇತ್ಯಾದಿ ಬಂಟಪ್ಪನವರ ಹೇಳಿಕೆ ನ್ನು ಓದುವಾಗ ಯಾರಿಗೂ ಕನಿಕರವಾಗಲೇ ನಂ ಒಮ್ಮೆ ಜಾತಿಯ ಬಗ್ಗಟ್ಟಿಗೆ, ಜಾತಿಯ ಗೆ ಪ್ರಯತ್ನಿಸುತ್ತಿದ್ದ ಶ್ರೇಯುತರುಗಳಾದ ಬಹದ್ದೂರ ಹೆಗ್ಗಡೆಯವರೂ ಎ. ಬಿ. ಈ ರೀತಿ ಕಲಹಮಾಡಿ ತಮ್ಮ ಚ್ಚುನೂರಾಗಿ ಮಾಡುತ್ತಿರುವುದಾ ಥ ಕಲಹಕ್ಕೆ ಶ್ರೀ. ಎ. ಬಿ. ಶೆಟ್ಟ ಬಂಟಪ್ಪನವರ ಭಾವನೆಯಿದ್ದು ದಿವಾನ್ ಬಹದ್ದೂರ್ ಹೆಗ್ಗಡೆ ುಸಬೇಕಾಗಿ ಇವರು ಪ್ರಾರ್ಥನೆ ಕಾಂಗ್ರೆಸ್ ಪಾರ್ಟಿ ಜಸ್ಟೀ ್ಯಾದಿಗಳು ಕೇವಲ ಪ್ರಚಾರ ರವಾದ ಸ್ಪರ್ಧೆಯಲ್ಲದೆ ಬೇರೆ ರಿಗೆ ಸಮಾಧಾನವಾಗಿದೆ.

ದಿವಾನ್ ಬಹದ್ದೂರ್ ಶೆಟ್ಟರೂ ಈ ಹಿಂದೆ ತಮ್ಮ ಗಿ ಕೆಲಸಮಾಡಿದವರೆಂದು ು ಇವರು ವ್ಯಕ್ತಿಪರ ಜವನ್ನು ಹಾಳು ತಿಳಿಯುವುದು ಸರಿ ್ಮ ಮುಂದೆ ನಡೆ ವದ ಅರ್ಥವಾಗಲಿಲ್ಲ ಈಗ ಉಮೇದ್ವಾರ ಇವರೀರ್ವರು ಬಂಟ ಉನ್ನತಿಗಾಗಿ ಹಿಂದೆ ಮಾಡಿದ ವೋ ಅದೇ ರೀತಿ ಇವರೀ ಪ್ರದೇಶವೂ ಅದೇ ಸಮಾಜದ ಸರವಾದ ಸ್ಪರ್ಧೆಯಲ್ಲವೆಂದು ಳಬಲ್ಲೆನು. ಈ ಉಮೇ ದಾನ್ ಬಹದ್ದೂರ್ ಹೆಗ್ಗಡೆ ಬಿ. ಶೆಟ್ಟರಿಗಾಗಲಿ ಸಿಕ್ಕುವ ರೂ ಇರುವುದಿಲ್ಲ. ಇಬ್ಬ ಪ್ಪಿಗನುಗುಣವಾಗಿ ತಮ್ಮ ಗೆ ಹೋರಾಡುತ್ತಿರುವುದೇ ಸಿದರೆ ಸ್ಪಷ್ಟವಾಗುತ್ತದೆ. ನ ಚುನಾವಣೆಯಲ್ಲಿ ಪ್ರಚಾರ ಮಾತ್ರವೆಂದು ಅವರಿಗೆ ತಮ್ಮ ಆರ್ಥವಾಗಲಿಲ್ಲ. ನು ಉಂಟೆಂದು ಇವರ ಪರಿಚ ಶ ಕಾಣುತ್ತದೆ. ಪರಿಚಯವಿರು ಂಗ್ರೆಸ್ ಮಹಾ ರ್ಯಕ್ರಮಕ್ಕೆ ಕೈ ಮುಂದೆ ಮಾತ್ರ ಈ ದಿನ ಒಂದು ಶ್ರೀ. ಕಾಂಗ್ರೆಸ್ಸಿನ ಸಂದರ್ಭದಲ್ಲಿ ಅವರ ವಿರುದ್ಧ ನಾನು ಪ್ರಶ್ನೆ. ಶ್ರೀ ಲ್ಲಿ ಕಾಂಗ್ರೆಸ್ ಸಂಸ್ಥೆಗೆ ಲೇ ದೇಶದ ಹಾಗೂ ತಮ್ಮ ವಾಗಲಿದೆ ಎಂದು ಕಂಡುಬಂದು ದರಿಂದ ಅವರು ಕಾಂಗ್ರೆಸ್ಸಿಗೆ ಸೇರಿ ಅದರ ಪ್ರತಿನಿಧಿಯಾಗಿ ನೇಮಿಸಲ್ಪಟ್ಟು ಆ ಸಂಸ್ಥೆಗಾಗಿ ಅವರಿಂದು ಹೋರಾಡಲು ಸಿದ್ಧರಾಗಿ ನಿಂತಿದ್ದಾರೆ.

ಶ್ರೀ. ದಿವಾನ್ ಬಹದೂರ್ ಹೆಗ್ಗಡೆಯವರು ಜಸ್ಟೀಸ್ ಪಕ್ಷವನ್ನು ಕಟ್ಟಿಕೊಳ್ಳುವುದರಿಂದಲೇ ತಮ್ಮ ದೇಶದ ಹಾಗೂ ತಮ್ಮ ಸಮಾಜದ ಉನ್ನತಿಯಾಗುವುದು ಸಾಧ್ಯವೆಂದು ಭಾವಿಸುವಂತಿದೆ. ಇದು ನಿಜವೋ ಎಂದು ಅವರೇ ಹೇಳಬೇಕು. ಇದರಲ್ಲಿ ಯಾರ ಅಭಿಪ್ರಾಯವು ಸರಿಯೆಂದು ಬಂಟ ಸಮಾಜವು ಇಂದು ನಿರ್ಧಾರ ಮಾಡಿ ತಮ್ಮ ಮತಗಳನ್ನು ಕೊಡುವುದು ಅವರ ಕರ್ತವ್ಯವಿರುತ್ತದೆ. ಇಂಥ ಸಾರ್ವಜನಿಕ ಪ್ರಶ್ನೆಗಳ ಕುರಿತು ಭಿನ್ನಾಭಿಪ್ರಾಯಗಳಿರುವುದು, ಸಹಜವಿರುತ್ತದೆ. ಈ ಬಗೆಯ ಅಭಿಪ್ರಾಯಭೇದಗಳಿಂದ ಮನೆಮನೆಗಳಲ್ಲಿ ಇತ್ತಂಡಗಳಾಗಿವೆ ಎಂದು ಭಾಸವಾದರೂ ಪ್ರತಿಯೊಂದು ಸಮಾಜದಲ್ಲಿ ಆಗಿರುವ ಈ ತರದ ಛಿದ್ರಗಳಿಂದ ಯಾವ ಸಮಾಜಕ್ಕೂ ನಿಜವಾದ ಹಾನಿ ತಟ್ಟುವಂತಿಲ್ಲ. ಪ್ರಶ್ನೆಗೆ ಸರಿಯಾದ ಉತ್ತರವು ದೊರೆಯುವಂತಾಗಬೇಕೆಂದು ಪ್ರತಿಯೊಂದು ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಆತ್ಮ ಸಾಕ್ಷಿಗೆ ಸರಿಯಾಗಿ ತನ್ನ ಕರ್ತವ್ಯವನ್ನು ಮಾಡುವುದರಿಂದಲೇ ತನ್ನ ಸಮಾಜದ ಹಾಗೂ ದೇಶದ ಶ್ರೇಯಸ್ಸನ್ನು ಸಾಧಿಸುವುದು ಸಾಧ್ಯವಿರುತ್ತದೆ.

ತಮ್ಮ ಸಮಾಜದ ಉನ್ನತಿಗಾಗಿ ದುಡಿದವರೆಂದು ಬಂಟಪ್ಪನವರೇ ಹೇಳುವ ಶ್ರೀ. ಎ ಬಿ. ಶೆಟ್ಟರ ಮೇಲೆ ಇಂದಿನ ಅವರೆ ಧ್ಯೋರಣೆಯು ಅರ್ಥವಾಗದೆ ಬಂಟಪ್ಪನವರು ಬರೆದಿರುವ ವ್ಯಕ್ತಿಪರವಾದ ಟೀಕೆಗಳು ಮಾತ್ರ ಶೋಚನೀಯವಿರುತ್ತವೆ. ತಮ್ಮ ಸಮಾಜದ ಏಳಿಗೆಗೆ ಇದುವರೆಗೆ ಕೆಲಸ ಮಾಡಿದ ತಮ್ಮ ಸಮಾಜಪ್ರಮುಖರ ಮೇಲೆ ಈ ಬಗೆಯ ಟೀಕೆಗಳನ್ನು ಬರೆಯುತ್ತ ಹೋದರೆ ಬಂಟಪ್ಪನವರು ತಮ್ಮ ಸಮಾಜವನ್ನು ನಗೆಗೀಡು ಮಾಡುವರೆಂಬುದರಲ್ಲಿ ಸಂಶಯವಿಲ್ಲ. ಇನ್ನಾದರೂ ಈ ಬಗೆಯ ಟೀಕೆಯು ಗೊಡವೆಗೆ ಹೋಗದೆ ನಮ್ಮ ಜಿಲ್ಲೆಯ ಪ್ರಮುಖ ಸಮಾಜಗಳಲ್ಲೊಂದಾದ ಬಂಟ ಸಮಾಜವು ಇಂದು ತಮಗೆ ಕಾಂಗ್ರೆಸ್ ಮಹಾಸಂಸ್ಥೆಯು ಬೇಕೋ ಅಥವಾ ಜಸ್ಟೀಸ್ ಪಕ್ಷವು ಬೇಕೊ ಎಂಬ ಪ್ರಶ್ನೆಗೆ ಬರುವ ಚುನಾವಣೆಯಲ್ಲಿ ನ್ಯಾಯವಾದ ಉತ್ತರ ಕೊಡುವಂತೆ ಬಂಟಪ್ಪನವರು ಪ್ರಯತ್ನಿಸಬೇಕಾಗಿಯೂ ಬಂಟ ಸಮಾಜದವರು ಕಾಂಗ್ರೆಸ್ ಸಂಸ್ಥೆಯ ಗೌರವವನ್ನು ಕಾಪಾಡಬೇಕಾಗಿಯೂ ವಿಜ್ಞಾಪಿಸಿಕೊಳ್ಳುತ್ತೇನೆ.

ಹಿ. ರಾಮರಾಯ. ಮಲ್ಯ.

(೬ನೇ ಪುಟದಿಂದ)

ಬಹುದೆಂದು ಸರಕಾರದವರ ಅಭಿಪ್ರಾಯವಾಗಿದೆ. ಪತಿತವರ್ಗದವರು ವಾಸ್ತವಿಸಿಕೊಂಡಿರುವ ಪ್ರದೇಶಗಳಲ್ಲಿಯೂ ಸರಕಾರದವರು ಈ ವಿಷಯ ಗಮನಕೊಡುತ್ತಾರೆ. ೧೯೩೫ನೇ ಇಸವಿ ಅಕ್ಟೋಬರ ೧ರಿಂದ ೧೯೩೫ನೇ ದಶಂಬರ ೩೧ರ ನಡುವೆ ೧೦೧ ಸಾರ್ವಜನಿಕ ಪಾಯಖಾನೆಗಳನ್ನೂ ೩೦೬ ಖಾಸಗಿ ಪಾಯಖಾನೆಗಳನ್ನೂ ಈ ಯೋಜನೆಗನುಸಾರವಾಗಿ ಕಟ್ಟಿಸಿದ್ದರು. ಈ ಯೋಜನೆಯು ಸಂಪೂರ್ಣವಾಗಲಿಕ್ಕೆ ೨.೬೫ ಲಕ್ಷ ರೂಪಾಯಿ ಖರ್ಚಾಗುವುದು. ಹಿಂದೀ ಸರಕಾರದವರು ಮದ್ರಾಸು ಸರಕಾರಕ್ಕೆ ಗ್ರಾಮಾಭಿವೃದ್ಧಿಗಾಗಿ ಕೊಟ್ಟ ಹಣದಿಂದ ಈ ಖರ್ಚನ್ನು ನೋಡಿಕೊಳ್ಳುವುದಾಗಿರುತ್ತದೆ.

ಪ್ರಚಾರ.

ಸಾರ್ವಜನಿಕ ಆರೋಗ್ಯ ಕುರಿತಾದ ಸಂಗತಿಗಳೂ ಜನಸಮುದಾಯಕ್ಕೆ ಸಂಬಂಧಿಸುವ ಆರೋಗ್ಯ ವಿಜ್ಞಾನದ ಸಂಗತಿಗಳೂ ಎಲ್ಲರಿಗೂ ತಿಳಿಯುವಂತೆ ತೀಕ್ಷ್ಣ ಪ್ರಚಾರಕಾರ್ಯವನ್ನು ನಡೆಸುತ್ತಾರೆ. ಇದಕ್ಕಾಗಿ ಆರೋಗ್ಯ ಸಪ್ತಾಹಗಳನ್ನು, ಪುಸ್ತಕ ಪ್ರಕಟಣೆಗಳನ್ನು, ಮಾಯಾಲಾಂದ್ರ ಭಾಷಣಗಳನ್ನು, ಚಲಚ್ಚಿತ್ರಪ್ರದರ್ಶನಗಳನ್ನು, ಶಿಶುಪ್ರದರ್ಶನಗಳನ್ನು ಮಾಡುತ್ತಾರೆ. ವೋಟಾರು ಭಂಡಿಗಳು, ರೇಡಿಯೋ ಮುಂತಾದವುಗಳಿದ್ದು ಎಲ್ಲಾ ಕಡೆ ಸಂಚರಿಸಿ ಪ್ರಚಾರ ಮಾಡುವ ಏರ್ಪಾವಳಿ ಶಿಬಂದಿಗಳನ್ನೂ ನಿಯಮಿಸಿರುತ್ತಾರೆ.

ಶಿಶುಪ್ರಸೂತೆಯರ ಜಾಗ್ರತೆ.

ಈ ಆಧಿಪತ್ಯದಲ್ಲಿ ಶಿಶುಪ್ರಸೂತೆಯರ ಕುರಿತು ವಿಶೇಷ ತರದ ಜಾಗ್ರತೆ ಮಾಡುತ್ತಾರೆ. ಈ ಕೆಲಸಕ್ಕಾಗಿಯೇ ಸಾರ್ವಜನಿಕ ಆರೋಗ್ಯದ ಆಡಳಿತೆಯ ಸಹಾಯಕ ಸ್ತ್ರೀ ಉದ್ಯೋಗಸ್ಥರೊಬ್ಬರು (ಅಸಿಸ್ಟಾಂಟ್ ಡ್ಯಾರೆಕ್ಟೈಸ್ಸ್) ಇರುವರು. ಇವರು ಅಲ್ಲಲ್ಲಿ ಶಿಶುಪ್ರಸೂತೆಯರ ಕ್ಷೇಮಸಾಧಕ ಕಾರ್ಯಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಸಹಾಯಮಾಡುತ್ತಾರೆ; ಎಲ್ಲಾ ಜಿಲ್ಲೆಗಳಲ್ಲಿ ಪ್ರಚಾರಕೆಲಸವನ್ನು ಮಾಡುತ್ತಾರೆ; ಶಿಶುಪ್ರಸೂತೆಯರ ಕ್ಷೇಮಾರ್ಥ ಕಾರ್ಯಕ್ರಮಗಳಲ್ಲಿ ನಿಶ್ಚಿತವಾದೊಂದು ಧೋರಣೆಯನ್ನನುಸರಿಸಲಿಕ್ಕೆ ಸಾಧಿಸುತ್ತಾರೆ. ಅನೇಕ ಸ್ಥಳೀಯ ಸಂಸ್ಥೆಗಳು ಶಿಶುಪ್ರಸೂತಾ ಕ್ಷೇಮಸಾಧಕ ಕಾರ್ಯಕೇಂದ್ರಗಳನ್ನು ಸ್ಥಾಪಿಸಿರುತ್ತವೆ.

೧೯೩೫ನೇ ವರ್ಷದಲ್ಲಿ ಈ ಆಧಿಪತ್ಯದ ಹಳ್ಳಿಗಳಲ್ಲಿ ಶಿಶುಕ್ಷೇಮದ ೭೭ ಕಾರ್ಯಕೇಂದ್ರಗಳಲ್ಲಿ ಕೆಲಸ ನಡೆಯುತ್ತಿತ್ತು. ಗರ್ಭಿಣಿಯರಿಗೆ ಪ್ರಸವಕಾಲದಲ್ಲಿ ಯೋಗ್ಯ ಸಹಾಯವು ದೊರಕುವಂತೆ ೭೭೦ ತರಬೇತಾದ ಸೂಲಗಿತ್ತಿಯರನ್ನು ಕೆಲಸಕ್ಕೆ ಇಟ್ಟುಕೊಂಡಿತ್ತು.

ಮಲೆಜ್ವರ.

ಮಲೆಜ್ವರದ ಹಾವಳಿಯನ್ನು ತಗ್ಗಿಸಲಿಕ್ಕೆ ಸರಕಾರದವರು ಕೈಕೊಂಡಿರುವ ಧೋರಣೆಯು ಎರಡು ತರದ್ದಾಗಿರುತ್ತದೆ.

(೧) ಸಾಮುದಾಯಕವಾಗಿ ಚಿಕಿತ್ಸೆಹೊಂದಲಿಕ್ಕೆ ಅನುಕೂಲತೆಗಳನ್ನು ಕಲ್ಪಿಸುವುದು.

(೨) ಸ್ಥಳೀಯ ಸಂಸ್ಥೆಗಳು ಈ ಕುರಿತು ಏನಾದರೂ ಒಳ್ಳೆ ಕಾರ್ಯಕ್ರಮವನ್ನು ಕೈಕೊಂಡು ಅದರ ಖರ್ಚಿನಲ್ಲಿ ಮೂರರಲ್ಲಿ ಎರಡಂಶ ತಾಳಿಕೊಳ್ಳಲು ಸಿದ್ಧರಿದ್ದರೆ ಉಳಿದ ಒಂದಂಶವನ್ನು ತಾವು ಕೊಡುವುದು.

ಮಲೆಜ್ವರವಿರುವ ಪ್ರತಿಯೊಂದು ಹಳ್ಳಿಯೆಲ್ಲಿಯೂ ಕೊಯನಾ ಎಂಬ ಜ್ವರದ ಮದ್ದನ್ನು ಧರ್ಮಾರ್ಥವಾಗಿ ಹಂಚಲಿಕ್ಕೆ ಸರಕಾರದವರು ಪ್ರತಿ ವರ್ಷ ೪೫,೦೦೦ ರೂಪಾಯಿ ಖರ್ಚು ಮಾಡುತ್ತಾರೆ. ಈ ಜಿಲ್ಲೆಯ ೪೦೫ ಗ್ರಾಮಗಳಲ್ಲಿ ಈ ಕೊಯನಾ ಮದ್ದನ್ನು ಧರ್ಮಾರ್ಥವಾಗಿ ಹಂಚುತ್ತಾರೆ. ವರ್ಷ ಒಂದಕ್ಕೆ ೬೦೦ ರಾತ್ರಿ ಕೊಯನಾ ಈ ಜಿಲ್ಲೆಯಲ್ಲಿ ಖರ್ಚಾಗುತ್ತದೆ. ಹಳ್ಳಿಗಳಲ್ಲಿ ಈ ಕೊಯನಾ ಆದಷ್ಟು ಜನರಿಗೆ ಸುಲಭದಲ್ಲಿ ದೊರಕುವಂತೆ ಕಡಿಮೆ ಕ್ರಯಕ್ಕೆ ಅದನ್ನು ಮಾರುವುದೂ ಉಂಟು. ಈ ಆಧಿಪತ್ಯದ ನಿವಾಸಿಗಳಲ್ಲಿ ಸುಮಾರು ಒಂದು ಮಿಲಿಯ ಜನರಿಗೆ ಈ ಕೊಯನಾ ಧರ್ಮಾರ್ಥವಾಗಿ ಹಂಚುವುದರ ಪ್ರಯೋಜನವು ಸಿಕ್ಕುತ್ತದೆನ್ನಬಹುದು. ಈಗಿನ ಯೋಜನೆಯ ಪ್ರಯೋಜನವನ್ನು ಹಿಂದೀ ಮಲೆಜ್ವರ ಪೈನಾಶಿಯ ಡ್ಯಾರೆಕ್ಟರರು ಒಪ್ಪಿಕೊಂಡಿದ್ದಾರೆ. ಜನರಲ್ಲಿ ಶಿಕ್ಷಣಪ್ರಚಾರ ಹೆಚ್ಚಿದಂತೆ ಕಾಲಕ್ರಮದಲ್ಲಿ ಈ ಯೋಜನೆಯು ಇನ್ನೂ ಜನಪ್ರೀತವಾಗುವುದು ನಿಶ್ಚಯವೆಂದು ತೋರುತ್ತದೆ.

ಗ್ರಾಮಾಭಿವೃದ್ಧಿಗೆ ಹಿಂದೀ ಸರಕಾರದಿಂದ ಸಿಕ್ಕಿದ ಗ್ರಾಂಟಿನಿಂದ ೫೦,೦೦೦ ರೂಪಾಯಿಗಳನ್ನು ಮಲೆಜ್ವರದಿಂದ ಹೆಚ್ಚು ಪೀಡಿತವಾದ ಎರಡು ಘಾಟಿ ಸ್ಥಳಗಳಲ್ಲಿಯೂ ಮಲೆಜ್ವರವಿರುವ ಕರಾವಳಿಯ ಅನೇಕ ಗ್ರಾಮಗಳಲ್ಲಿಯೂ ಮಲೆಜ್ವರನಿವಾರಣೆಯ ಕಾರ್ಯಕ್ರಮಗಳನ್ನೆಲ್ಲಾ ಸದಾಕಾಲ ನಡೆಸುವ ಬಗ್ಗೆ ಮದ್ರಾಸು ಸರಕಾರದವರು ತೆಗೆದಿಟ್ಟಿರುತ್ತಾರೆ.

ಪೂನಮಲ್ಲಿಯ ವಿಜಾತೀಯವಾದ ಗ್ರಾಮಾಭಿವೃದ್ಧಿ ಯೋಜನೆ.

ಹಳ್ಳಿಗಳಲ್ಲಿ ಸಾರ್ವಜನಿಕ ಆರೋಗ್ಯ ವಿಷಯಗಳು ಸುವ್ಯವಸ್ಥೆಗೆ ಬರಬೇಕಾದರೆ ಇಡೀ ಆಧಿಪತ್ಯದಲ್ಲಿ ಸಾರ್ವಜನಿಕ ಆರೋಗ್ಯ ಕಾರ್ಯ ಕರ್ಮಚಾರಿಗಳೆಲ್ಲರೂ ಸುಸೂತ್ರವಾಗಿ ಒಕ್ಕಟ್ಟಿನಿಂದ ಕಾರ್ಯಗಳನ್ನು ನಡೆಸುವುದು ಆವಶ್ಯಕವೆಂದು ಈಗ ಸರಕಾರದವರ ತಿಳುವಳಿಕೆಗೆ ಬಂದಿರುತ್ತದೆ. ಆದ್ದರಿಂದ ಪರೀಕ್ಷಾರ್ಥವಾಗಿ, ಪೂನಾಮಲ್ಲಿಯೇ ಮುಖ್ಯ ಕೇಂದ್ರಸ್ಥಾನವಾಗಿರುವ, ಚೆಂಗಲ್ಪಟ್ಟು ಜಿಲ್ಲೆಯ ಶ್ರೀ ಪೆರಂಬುಡೂರು ತಾಲೂಕಿನ ೨೫ ಹಳ್ಳಿಗಳು ಕೂಡಿರುವ ಒಂದು ವಿಸ್ತೀರ್ಣದಲ್ಲಿ ಆರೋಗ್ಯಶಾಖೆಯವರು ಆರೋಗ್ಯವರ್ಧನೆ ಕಾರ್ಯವನ್ನು ತೀಕ್ಷ್ಣಗತಿಯಿಂದ ನಡೆಸುವ ಯೋಜನೆಯೊಂದನ್ನು ಪ್ರಾರಂಭಿಸಿರುತ್ತಾರೆ. ಆರೋಗ್ಯದ ಕುರಿತು ಒಳ್ಳೇ ಸುವ್ಯವಸ್ಥಿತ ಕಾರ್ಯಕ್ರಮಗಳನ್ನು ನಡೆಸಿ ಹಳ್ಳಿಯ ಜನರ ಜೀವೋತ್ಸಾಹವನ್ನು ಹೇಗೆ ಉತ್ತಮಸ್ಥಿತಿಗೆ ತರಬಹುದೆಂದು ಪ್ರದರ್ಶಿಸುವುದಕ್ಕಾಗಿಯೂ, ಜನತೆಯಲ್ಲಿ ಆ ಮೂಲಕ ಆರೋಗ್ಯವಿಚಾರಗಳ ಕುರಿತು ಜಾಗ್ರತೆಯನ್ನು ಹುಟ್ಟಿಸಲಿಕ್ಕಾಗಿಯೂ ಈ ಯೋಜನೆಯನ್ನು ಪ್ರಾರಂಭಿಸಿದ್ದಾಗಿರುತ್ತದೆ.

ಈ ಯೋಜನೆಯನ್ನು ಉತ್ತಮ ತರಗತಿಯ ಆರೋಗ್ಯ ಅಧಿಕಾರಿಗಳೊಬ್ಬರ ಕೈಗೆ ಸಂಪೂರ್ಣ ಬಿಟ್ಟುಕೊಟ್ಟಿರುತ್ತಾರೆ. ಮೇಲೆ ಹೇಳಿದ ವಿಸ್ತೀರ್ಣವನ್ನೆಲ್ಲಾ ನಾಲ್ಕು ಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಭಾಗದಲ್ಲಿ ಒಟ್ಟಾರೆ ೧೦,೦೦೦ ಜನಸಂಖ್ಯೆ ಇರುವ ಆರೇಳು ಗ್ರಾಮಗಳನ್ನು ಸೇರಿಸಿರುತ್ತಾರೆ; ಒಂದೊಂದು ಭಾಗದಲ್ಲಿ ಆರೋಗ್ಯ ಮೇಲ್ವಿಚಾರಕರೊಬ್ಬರೂ ಒಬ್ಬ ಆರೋಗ್ಯ ಸಂದರ್ಶನಾಧಿಕಾರಿಯೂ ಇಬ್ಬರು ಸೂಲಗಿತ್ತಿಯರೂ ಇಬ್ಬರು ಸ್ತ್ರೀ ಪರಿಚಾರಕರೂ ಇರುವರು. ಈ ಯೋಜನೆಯ ಖರ್ಚನ್ನೆಲ್ಲಾ 'ರೊಕ್‌ಫೆಲ್ಲರ್ ಫೌಂಡೇಶನ್' ಸಂಸ್ಥೆಯವರೂ ಸರಕಾರದವರೂ ಕೂಡಿ ಸಂಪೂರ್ಣ ತಾಳಿಕೊಳ್ಳುವರು. ಸರಕಾರದ ಪಾಲಿಗೆ ೨೫,೦೦೦ ರೂಪ್ಯಾ ಖರ್ಚು ಬೀಳುತ್ತದೆ. ಸರಕಾರದವರು ಈ ಖರ್ಚನ್ನು ಹಿಂದೀ ಸರಕಾರದವರು ಗ್ರಾಮಾಭಿವೃದ್ಧಿಗಾಗಿ ಅವರಿಗೆ ಕೊಟ್ಟ ಗ್ರಾಂಟಿನಿಂದ ಕೊಡುತ್ತಾರೆ.

ಕುಷ್ಠರೋಗ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೩೫ನೇ ವರ್ಷದಲ್ಲಿ ಜಿಲ್ಲಾ ಕುಷ್ಠರೋಗ ಸಮಿತಿಯೊಂದನ್ನು ಸ್ಥಾಪಿಸಿರುವರು. ಅದಕ್ಕೆ ಜಿಲ್ಲಾ ಆರೋಗ್ಯ ಅಧಿಕಾರಿಯರೇ ಕಾರ್ಯದರ್ಶಿಗಳು. ಈ ಸಮಿತಿಯವರು ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ೧೧ ಕ್ಲಿನಿಕ್ ಎಂಬ ಶಯ್ಯಾಸ್ಪತ್ರೆಗಳನ್ನಿಟ್ಟಿರುವರು. ಈ ಶಯ್ಯಾಸ್ಪತ್ರೆಗಳಲ್ಲಿ ಲರ್ಜಿ ರೋಗಿಗಳು ಈಗ ಚಿಕಿತ್ಸೆಯನ್ನು ಹೊಂದುತ್ತಿದ್ದಾರೆ.

ಕುಷ್ಠರೋಗ ಮುಖ್ಯಾಧಿಕಾರಿಗಳೂ ಪ್ರಾಂತಿಕ ಅಧಿಕಾರಿಗಳೂ ಆಗಿಂದಾಗ್ಗೆ ಈ ಜಿಲ್ಲೆಗೆ ಬಂದು ಬೇಕಾದ ಅನುಭವ–ಸೂಚನೆಗಳನ್ನು ಕೊಡುತ್ತಾರೆ.

ಸ್ತ್ರೀರೋಗಗಳನ್ನು ನಿವಾರಿಸುವುದರಲ್ಲಿ "ಲೋಧ್ರ"ಕ್ಕಿಂತಲೂ ಗುಣಕಾರಿಯಾದ ಬೇರಾವ ಔಷಧವೂ ಇಲ್ಲ. ಅದು ಮುಟ್ಟಿನ ಅವಧಿಯನ್ನು ಕ್ರಮಗೊಳಿಸುತ್ತದೆ, ಮಿತವಾದ ಮುಟ್ಟನ್ನುಂಟು ಮಾಡುತ್ತದೆ, ಅತ್ಯಧಿಕವಾದ ಮುಟ್ಟಿನ ಪ್ರದರವನ್ನು ತಡೆಗಟ್ಟುತ್ತದೆ, ಮುಟ್ಟಿನ ಕಾಲದ ನೋವು, ಹೊಟ್ಟೆ ನೋವು, ಬೆನ್ನುನೋವು ಮೊದಲಾದವುಗಳನ್ನು ನಿವಾರಿಸುತ್ತದೆ, ಎಲ್ಲಕ್ಕೂ ಮೇಲಾಗಿ ಸಾಮಾನ್ಯ ಆರೋಗ್ಯವನ್ನೂ, ಶಕ್ತಿಯನ್ನೂ ವೃದ್ಧಿಗೊಳಿಸುವುದಕ್ಕೆ ಅತ್ಯುತ್ತಮೋಷಧವಾದ "ಟಾನಿಕ್" ಆಗಿರುತ್ತದೆ.

ಲೋಧ್ರ

ಗರ್ಭಾಶಯದ "ಟಾನಿಕ್"

ಪ್ರತಿಯೊಂದು ಸಂಸಾರಕ್ಕೂ ಇದು ಬೇಕಾಗಿದೆ.

ಕೇಸರಿ ಕುಟೀರಂ

ಎಗ್ಮೋರ್ :: :: ಮದ್ರಾಸ್

ವಿದೇಶ

ಸ್ಪೈನಿನ ರಾಜಧಾನಿಯಾದ ಮೆಡ್ರಿಡಿನ ಸ್ವಾಧೀನತೆಗೋಸ್ಕರ ಘೋರ ಸಂಗ್ರಾಮವಾರಂಭವಾಗಿ, ದಂಗೆಗಾರರ ಕಡೆಯಿಂದ ನೂರಾರು ಮುಂದಿ ಸತ್ತಿರುವರಾಗಿ ತಿಳಿದುಬರುತ್ತಿದೆ. ದಂಗೆಗಾರರು ಕೈಗೆ ಸಿಕ್ಕಿದ ಸ್ತ್ರೀಮರುಗಳನ್ನು ಹಿಡಿದು ನಿಲ್ಲಿಸುವುದನ್ನು ಇನ್ನೂ ಬಿಟ್ಟಿಲ್ಲ.

ಅಮೆರಿಕದಲ್ಲಿ ಕೆಲವು ಕಾರ್ಖಾನೆಗಳಲ್ಲಿ ಕಾರ್ಯತ್ಯಾಗವು ಆರಂಭವಾಗಿದೆ.

ಸ್ಪೈನಿನ ಯುದ್ಧದಲ್ಲಿ ಇತರ ರಾಷ್ಟ್ರಗಳು ಕೈಹಾಕದೆ ತಟಸ್ಥವಾಗಿರಬೇಕೆಂಬ ಬ್ರಿಟಿಷರ ಸೂಚನೆಗೆ ಇಟೆಲಿ-ಜರ್ಮನಿಗಳು ಹಾಗೇ ಆಗಲೆಂದು ಒಂದು ರೀತಿಯಲ್ಲಿ ಒಪ್ಪಿಗೆ ಕೊಟ್ಟಿವೆಯಾದರೂ, ಮುಂದಿನ ಕಾರ್ಯಕ್ರಮಗಳು 'ಆಡಿದ್ದಂತೆ ಮಾಡಲಾಗುವುದೇ?' ಎಂದು ನೋಡಬೇಕಾಗಿದೆ.

ಹೊಲ್ಲೆಂಡಿನ ರಾಜಕುಮಾರಿ ಜೂಲಿಯಾನಾರಿಗೂ, ರಾಜಕುಮಾರ ಬರ್ನ್‌ಹಾರ್ಡ್‌ರಿಗೂ ವಿವಾಹವು, ಹೇಗ್ ನಗರದಲ್ಲಿ, ಅತ್ಯಂತ ವೈಭವ ಪೂರ್ವಕವಾಗಿ ನಡೆದುಹೋಯಿತು. ಲಕ್ಷಾಂತರ ಮುರಿದಿ ಪ್ರೇಕ್ಷಕರೀ ಆನಂದೋತ್ಸವದಲ್ಲಿ ಭಾಗಿಗಳಾಗಿ ರಾಜದಂಪತಿಗಳ ಜಯಕಾರ ಮಾಡಿದರು. ರಾಜದಂಪತಿಗಳು, ಕೆಲವು ಕಾಲ, ತಮ್ಮ ವಿವಾಹದ ಆನಂದ ವಿಲಾಸಗಳನ್ನು ಅನುಭವಿಸಲು ಟ್ಯಾರೋಲಿನ್ ಪ್ರಾಂತದಲ್ಲಿ ಕಳೆಯುವರೆಂದು ಪ್ರಕಟವಾಗಿದೆ.

ರಾಸ್ ಇಮ್ಯೂಗಳನ್ನು ತಮ್ಮ ಮುಂದೆ ತಂದು ನಿಲ್ಲಿಸಬೇಕೆಂದು ಮುಸಲೋನಿಯವರ ಅಪ್ಪಣೆಯಾಗಿದೆ. ಇಮ್ಯೂಗಳ ಮುಂದಿನ ಗತಿ ಏನೆಂದು ತಿಳಿಯದು.

ಇಟೆಲಿಯ ೧೯೩೫-೩೬ನೇ ಇಸ್ವಿಯ ಬಜೆಟಿನಲ್ಲಿ ಸುಮಾರು ೧೫೦೦ ಮಿಲ್ಯ ಲಯರುಗಳು ಖರ್ಚಿಗೆ ಸಾಲದೆ ಬಂದಿದೆ. ಇದರಲ್ಲಿ ಅಬಿಸೀನಿಯದ ಯುದ್ಧದ ಖರ್ಚು ಸೇರಿಲ್ಲ.

ಬ್ರಿಟನಿನಲ್ಲಿ ಇನ್‌ಫ್ಲುಯೆಂಜಾ ಜ್ವರದ ಹಾವಳಿ ಇನ್ನೂ ಹೆಚ್ಚಾಗುತ್ತಲೇ ಇದೆ. ಅಮೇರಿಕದಲ್ಲಿಯೂ ಈ ಜ್ವರದ ಹಾವಳಿ ಹಬ್ಬಿದೆ ಎಂದು ತಿಳಿದುಬರುತ್ತಿದೆ.

ರಾಜಕುಮಾರಿ ಜುಲಿಯಾನಾರವರ ವಿವಾಹದ ಸಂಬಂಧವಾಗಿ, ೧೯೩೬ರಲ್ಲಿ ಡಚ್ ಇಂಡೀಸಿನಲ್ಲಿ ದಂಗೆ ಎದ್ದ ಯಾವತ್ತು ದಂಗೆಗಾರರಿಗೂ, ಇನ್‌ಕಮ್-ಟೇಕ್ಸ್ ಕೊಡದೆ ನಿಬಂಧವಾಸದಲ್ಲಿರುವ ೧೩೦೦ ಮಂದಿಗೂ ರಾಜಕೃಪೆ ದೊರಕಿ ಬಿಡುಗಡೆ ಮಾಡುವ ಏರ್ಪಾಡು ನಡೆದಿದೆ.

ಮೆಡ್ರಿಡ್ ಪ್ರಾಂತದಲ್ಲಿ ದಂಗೆಗಾರರ ವಿಮಾನಗಳ ಬಾಂಬಿನಿಂದ ೧೫೦ ಮಂದಿ ಸತ್ತರು; ೩೦೦ ಮಂದಿಗೆ ಗಾಯಗಳಾಗಿವೆ.

ಡಿ. ವೆಲಾರ, ಆಯರ್‌ಲ್ಯಾಂಡಿನ ಪ್ರೆಸಿಡೆಂಟ್‌ರವರು, ಕಣ್ಣು ನೋವಿನಿಂದ ಬಾಧೆಪಡುತ್ತಿದ್ದು, ಚಿಕಿತ್ಸೆಗಾಗಿ ಜ್ಯೂರಿಕೆಗೆ ತೆರಳಿರುವರು.

ಪೆಲಸ್ತೈನ್ ವಿಚಾರಣಾಸಮಿತಿಯ ಮುಂದೆ, ಹಾಯರ್ ಅರಬ್ ಕಮಿಟಿಯವರು ತಮ್ಮ ಹೇಳಿಕೆಯನ್ನು ಸದ್ಯದಲ್ಲಿಯೇ ಶ್ರುತಪಡಿಸಲಿರುವರು.

ಚೀನದಲ್ಲಿ ಕಸ್ಟಮ್ಸ್ ಶಾಖೆಯಲ್ಲಿದ್ದ ಬ್ರಿಟಿಷ್ ಅಧಿಕಾರಿಯಾದ ಮಿ. ಟಿ. ಜಿ. ಪೇಜಟ್‌ರವರನ್ನು ಯಾರೋ ಕೊಲೆ ಮಾಡಿರುವರು.

ಸಾನ್ ಫ್ರಾನ್ಸಿಸ್ಕೋದಲ್ಲಿ ವಿಮಾನಚಾರಿಗಳಾದ ೩ ಮಂದಿ ಶ್ರೀಮಂತ ಹುಡುಗಿಯರನ್ನು ಕಾನ್‌ಸ್ಟೇಬಲರಾಗಿ ಸರಕಾರದವರು ನೇಮಿಸಿರುವರು.

ದಕ್ಷಿಣ ಹಂಗೇರಿಯ ಕಾಪೋಸ್ವರ್ ಮುನಿಸಿಪಾಲಿಟಿಯವರು ತಮ್ಮ ಉದ್ಯೋಗಿಗಳಿಗೆ ಕ್ರಿಸ್‌ಮಸಿನ ಬಹುಮಾನವಾಗಿ ಈ ಸಲ ಒಂದೊಂದು ವಿಷವಾಯುವಿನ ಮುಖವಾಡವನ್ನು 'ಬೋನಸ್' ಎಂದು ಹಂಚಿರುವರು.

ಇಸ್ತಾಂಬೂಲಿನಲ್ಲಿ ಭಿಕ್ಷುಕರ ಕಂಪೆನಿ, ಲಿಮಿಟೆಡ್, ಎಂಬು ದೊಂದು ಸಂಸ್ಥೆ ಇದೆ. ಇದನ್ನು ೧೭ ಮಂದಿ ಕಸುಬುದಾರಿ ಭಿಕ್ಷುಕರು ನಡೆಸುತ್ತಿರುವರು. ಈಚೆಗೆ ಪೋಲೀಸರೀ ಸಂಸ್ಥೆಯ ಝಾಡ್ತಿ ನಡೆಸಿದರು.

ಜಪಾನಿನಲ್ಲಿ, ವಿದೇಶೀಯ ಮತ್ತೂ ಸ್ವದೇಶೀಯ ಫಿಲ್ಮುಗಳ ವಿಚಾರದಲ್ಲಿ ಅಲ್ಲಿನ ಪ್ರಭುತ್ವದವರಿಂದ ನಿಬಂಧದ ಆಜ್ಞೆ ಹೊರಟಿದೆ; ಅವುಗಳಿವು,— ಮುತ್ತಿಡುವ ಅಥವಾ ನರ್ತನ ಮಾಡುವ ಯಾವ ದೃಶ್ಯವೂ ಇರಕೂಡದು; ಇಂಪೀರಿಯಲ್ ಕೋರ್ಟನ್ನು, ಸೈನ್ಯದ ಮತ್ತೂ ಪೋಲೀಸ್ ಶಾಖೆಯನ್ನು ಅವಮಾನಿಸುವ ಯಾವ ವಿದ್ಯಮಾನಗಳೂ ಇರಕೂಡದು; ರಾಷ್ಟ್ರೀಯ ನೀತಿಗೆ ವಿರುದ್ಧವಾದ ಸಂಗತಿಗಳೆಲ್ಲವೂ ಲೋಪವಾಗಲೇ ಬೇಕು.

ಮೆಡ್ರಿಡಿನಲ್ಲಿ ಬ್ರಿಟಿಷ್ ರಾಯಭಾರಿಗಳ ಕಟ್ಟಡಗಳ ಮೇಲೆ ವಿಮಾನದಿಂದ ಬಾಂಬುಗಳು ಬಿದ್ದು, ೩ ಮಂದಿ ಎಂಬಿಟರಿಯವರಿಗೆ ಗಾಯಗಳಾಗಿವೆ.

ಸ್ಪೈನಿನ ದಂಗೆಗಾರರ ನಾಯಕನಾದ ಜನರಲ್ ಫ್ರೇಂಕೋವಿನ ಅರ್ಡರಿನ ಮೇರೆಗೆ, ಲಂಡನ್ನಿನಲ್ಲಿ ಮಿಲ್ಯಗಟ್ಟಲೆಯ ಸ್ಪೈನಿನ ಬ್ಯಾಂಕ್ ನೋಟುಗಳನ್ನು ಮುದ್ರಿಸಿಟ್ಟಿದ್ದರು. ನವೆಂಬರಿನೊಳಗೆ ತಾನು ಮೆಡ್ರಿಡಿನಲ್ಲಿರುವೆನೆಂಬಾಶೆಯಿಂದ ಈ ಮುದ್ರಣದ ಕೆಲಸ ಜೋರಾಗಿ ನಡೆದಿತ್ತು. ಈಗ ಆ ಆಶೆಯು ಈಡೇರದುದರಿಂದ, ಆ ನೋಟುಗಳನ್ನು ಚಲಾವಣೆಯಲ್ಲಿ ತರಲಾಗದೆ ಅವು ಲಂಡನಿನ ಖಜಾನೆಯಲ್ಲಿಯೇ ಬಿದ್ದು ಕೊಳೆಯುತ್ತಿವೆ.

ಶಾಂಘೈಯಲ್ಲಿ ಹೊಗೆಬತ್ತಿ ಸೇದುವುದರ ವಿರುದ್ಧವಾಗಿ ಒಂದು ಹೊಸ ಚಳವಳವು ಆರಂಭವಾಗಿದೆ. ಇದನ್ನು ಹೂಡಿದವರು ಹೊಸ ಜೀವನ ಚಳವಳದ ಸದಸ್ಯರುಗಳು. ಇವರು ನೀರಿನಿಂದ ತುಂಬಿದ ಬಕೆಟುಗಳನ್ನು ಎತ್ತಿಕೊಂಡು, ಬೀದಿಗಳಲ್ಲೆಲ್ಲ ಸಂಚರಿಸುವರು; ಹೊಗೆ ಬತ್ತಿ ಸೇದುವವರನ್ನು ಕಂಡಲ್ಲಿ 'ನೀವಿದನ್ನು ಎಂದೂ ನಿಮ್ಮ ಜೀವಮಾನದಲ್ಲಿ ಸೇದಬೇಡಿ' ಎಂದು ಉಪದೇಶಿಸುವರು. ಅವರು ಕೇಳದಿದ್ದರೆ, ಇವರೇನು ಆ ಬಕೆಟಿನ ನೀರನ್ನು ಚೆಲ್ಲುವರೋ ಬಿಡುವರೋ ತಿಳಿಯದು. ಅಂತೂ ಈ ನೀರಿನ ಬಕೆಟು ಈ ಚಳವಳದ ಗುರುತೆನ್ನಿಸಿಹುದು.

ಆಯಾಸವನ್ನು
ತೊರೆಯುವುದಕ್ಕೆ
ಭಾರತೀಯ ಚಾ ಸೇವನೆ.



ಮುಕ್ಕಳೊಂದಿಗಾಡುವುದಕ್ಕೆ ಎಲ್ಲರಿಗೂ ಎಷ್ಟೇ ಬ್ರಹ್ಮಾನಂದಕರವಾದರೂ, ಅವರ ಸಮಾನವಾಗಿ ಬಹುಕಾಲ ಆಡುವುದಕ್ಕೆ ಎಲ್ಲರಿಗೂ ಸಾಧ್ಯವಲ್ಲ. ಹಾಗೆ ಆಡಲು, ಮಧ್ಯೆ ಮಧ್ಯೇ ಚಾ ಸೇವನೆಯು, ಸಹಾಯಮಾಡುವುದು. ಚಾ ಸೇವಿಸಿ ಚೇತರಿಸಿಕೊಂಡು ಸಂತೋಷಪಡಿ.

ಚಾ ತಯಾರಿಸುವ ವಿಧಾನ. ನಿರ್ಮಲವಾದ ನೀರನ್ನು ಕಾಸಿ, ಶುಚಿಯಾದ ಪಾತ್ರೆಯೊಂದನ್ನು ಬೆಚ್ಚಗೆ ಮಾಡಿ, ಅದರಲ್ಲಿ ತಲಾ ಒಬ್ಬರಿಗೊಂದು ಚಂಚಾ, ಕೊಸರಿಗೆಯಿಂದು ಚಂಚಾ, ಉತ್ತಮವಾದ ಭಾರತೀಯ ಚಾಸೊಪ್ಪನ್ನು ಹಾಕಿ, ನೀರು ಚೆನ್ನಾಗಿ ಕುದಿದ ಮೇಲೆ, ಅದರ ಮೇಲೆ ಬಿಡಿ. ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ, ಹಾಲು ಸಕ್ಕರೆ ಬೆರಸಿ ಸೇವಿಸಿ.

ಸಂಸಾರಕ್ಕೊಂದೇ ಪಾನ - ಭಾರತೀಯ ಚಾ.

I.K. 30

ಕುಡಿಯಿರಿ! ಕುಡಿ

ಕಣನ್ ದೇವನ್
ಟೀ

ಶುದ್ಧತೆ, ಸುವಾಸನೆ
ಮತ್ತೂ ಶಕ್ತಿಗಳಿಗಾಗಿ
ಹೆಸರ್ಗೊಂಡದ್ದು.

ರಿಜಿಸ್ಟ್ರಿಯಾದ
ಟ್ರೇಡ್‌ಮಾರ್ಕ್-

ಚಿಕ್ಕ ಪ್ಯಾಕಿಂಗ್
ಎಲ್ಲರ ಉಪ
ಯೋಗಕ್ಕೆ ಸುಲಭ
ವಾಗಿದೆ.



ಆಹ್ಲಾದಕರವಾದ
ಪಾನೀಯ

SOLE SOUTH KANARA AGENTS:-

THE KERALA TEA SYNDICATE,
PONANI-MALABAR.

ವಿದೇಶ

ಸ್ಪೈನಿನ ರಾಜಧಾನಿಯಾದ ಮೆಡ್ರಿಡಿನ ಸ್ವಾಧೀನತೆಗೋಸ್ಕರ ಘೋರ ಸಂಗ್ರಾಮವಾರಂಭವಾಗಿ, ಪಂಗೆಗಾರರ ಕಡೆಯಿಂದ ಸೂರಾರು ಮಂದಿ ಸತ್ತಿರುವರಾಗಿ ತಿಳಿದುಬರುತ್ತಿದೆ. ಪಂಗೆಗಾರರು ಕೈಗೆ ಸಿಕ್ಕಿದ ಸ್ತ್ರೀಮರುಗಳನ್ನು ಹಿಡಿದು ನಿಲ್ಲಿಸುವುದನ್ನು ಇನ್ನೂ ಬಿಟ್ಟಿಲ್ಲ.

ಅಮೆರಿಕದಲ್ಲಿ ಕೆಲವು ಕಾರ್ಖಾನೆಗಳಲ್ಲಿ ಕಾರ್ಯತ್ಯಾಗವು ಆರಂಭವಾಗಿದೆ.

ಸ್ಪೈನಿನ ಯುದ್ಧದಲ್ಲಿ ಇತರ ರಾಷ್ಟ್ರಗಳು ಕೈಹಾಕದೆ ತಟಸ್ಥವಾಗಿರಬೇಕೆಂಬ ಬ್ರಿಟಿಷರ ಸೂಚನೆಗೆ ಇಟೆಲಿ-ಜರ್ಮನಿಗಳು ಹಾಗೇ ಆಗಲೆಂದು ಒಂದು ರೀತಿಯಲ್ಲಿ ಒಪ್ಪಿಗೆ ಕೊಟ್ಟಿವೆಯಾದರೂ, ಮುಂದಿನ ಕಾರ್ಯಕ್ರಮಗಳು 'ಅಡಿದಂತೆ ಮಾಡಲಾಗುವುದೇ?' ಎಂದು ನೋಡಬೇಕಾಗಿದೆ.

ಹೊಲ್ಲೆಂಡಿನ ರಾಜಕುಮಾರಿ ಜೂಲಿಯಾನರಿಗೂ, ರಾಜಕುಮಾರ ಬರ್ನ್‌ಹಾರ್ಡರಿಗೂ ವಿವಾಹವು, ಹೇಗ್ ನಗರದಲ್ಲಿ, ಅತ್ಯಂತ ವೈಭವ ಪೂರ್ವಕವಾಗಿ ನಡೆದುಹೋಯಿತು. ಲಕ್ಷಾಂತರ ಮಂದಿ ಪ್ರೇಕ್ಷಕರೀ ಆನಂದೋತ್ಸವದಲ್ಲಿ ಭಾಗಿಗಳಾಗಿ ರಾಜದಂಪತಿಗಳ ಜಯಕಾರ ಮಾಡಿದರು. ರಾಜದಂಪತಿಗಳು, ಕೆಲವು ಕಾಲ, ತಮ್ಮ ವಿವಾಹದ ಆನಂದ ವಿಲಾಸಗಳನ್ನು ಅನುಭವಿಸಲು ಟ್ಯಾರೋಲಿನ್ ಪ್ರಾಂತದಲ್ಲಿ ಕಳೆಯುವರೆಂದು ಪ್ರಕಟವಾಗಿದೆ.

ರಾಸ್ ಇಮ್ಯೂಗಳನ್ನು ತಮ್ಮ ಮುಂದೆ ತಂದು ನಿಲ್ಲಿಸಬೇಕೆಂದು ಮುಸಲೋನಿಯವರ ಅಪ್ಪಣೆಯಾಗಿದೆ. ಇಮ್ಯೂಗಳ ಮುಂದಿನ ಗತಿ ಏನೆಂದು ತಿಳಿಯದು.

ಇಟೆಲಿಯ ೧೯೩೫-೩೬ನೇ ಇಸ್ವಿಯ ಬಜೆಟಿನಲ್ಲಿ ಸುಮಾರು ೧೫೦೦ ಮಿಲ್ಯ ಲಯರುಗಳು ಖರ್ಚಿಗೆ ಸಾಲದೆ ಬಂದಿದೆ. ಇದರಲ್ಲಿ ಅಬಿಸೀನಿಯದ ಯುದ್ಧದ ಖರ್ಚು ಸೇರಿಲ್ಲ.

ಬ್ರಿಟನಿನಲ್ಲಿ ಇನ್‌ಫ್ಲುಯೆಂಜಾ ಜ್ವರದ ಹಾವಳಿ ಇನ್ನೂ ಹೆಚ್ಚಾಗುತ್ತಲೇ ಇದೆ. ಅಮೇರಿಕದಲ್ಲಿಯೂ ಈ ಜ್ವರದ ಹಾವಳಿ ಹಬ್ಬಿದೆ ಎಂದು ತಿಳಿದುಬರುತ್ತಿದೆ.

ರಾಜಕುಮಾರಿ ಜುಲಿಯಾನಾರವರ ವಿವಾಹದ ಸಂಬಂಧವಾಗಿ, ೧೫೩೫ರಲ್ಲಿ ಡಚ್ ಇಂಡೀಸಿನಲ್ಲಿ ದಂಗೆ ಎದ್ದ ಯಾವತ್ತು ದೆಂಗೆಗಾರರಿಗೂ, ಇನ್‌ಕಮ್-ಟೇಕ್ಸ್ ಕೊಡದೆ ನಿರ್ಬಂಧವಾಸದಲ್ಲಿರುವ ೧೫೦೦ ಮಂದಿಗೂ ರಾಜಕೃಪೆ ದೊರಕಿ ಬಿಡುಗಡೆ ಮಾಡುವ ಏರ್ಪಾಡು ನಡೆದಿದೆ.

ಕೆಂಪ್ರಿಡ್ ಪ್ರಾಂತದಲ್ಲಿ ದಂಗೆಗಾರರ ವಿಮಾನಗಳ ಬಾಂಬಿನಿಂದ ೧೫೦ ಮಂದಿ ಸತ್ತರು; ೩೦೦ ಮಂದಿಗೆ ಗಾಯಗಳಾಗಿವೆ.

ಡಿ. ವೆಲಾರ, ಆಯರ್‌ಲ್ಯಾಂಡಿನ ಪ್ರೆಸಿಡೆಂಟ್‌ರವರು, ಕಣ್ಣು ನೋವಿನಿಂದ ಬಾಧೆಪಡುತ್ತಿದ್ದು, ಚಿಕಿತ್ಸೆಗಾಗಿ ಜ್ಯೂರಿಕೆಗೆ ತೆರಳಿರುವರು.

ಪೆಲಸ್ತೈನ್ ವಿಚಾರಣಾಸಮಿತಿಯ ಮುಂದೆ, ಹಾಯರ್ ಅರಬ್ ಕಮಿಟಿಯವರು ತಮ್ಮ ಹೇಳಿಕೆಯನ್ನು ಸದ್ಯದಲ್ಲಿಯೇ ಶ್ರುತಪಡಿಸಲಿರುವರು.

ಚೀನದಲ್ಲಿ ಕಸ್ಟಮ್ಸ್ ಶಾಖೆಯಲ್ಲಿದ್ದ ಬ್ರಿಟಿಷ್ ಅಧಿಕಾರಿಯಾದ ಎಮ್. ಟಿ. ಜಿ. ಪೇಜಟ್‌ರವರನ್ನು ಯಾರೋ ಕೊಲೆ ಮಾಡಿರುವರು.

ಸಾನ್ ಫ್ರಾನ್ಸಿಸ್ಕೋದಲ್ಲಿ ವಿಮಾನಚಾರಿಗಳಾದ ೩ ಮಂದಿ ಶ್ರೀಮಂತ ಹುಡುಗಿಯರನ್ನು ಕಾನ್‌ಸ್ಟೇಬಲರಾಗಿ ಸರಕಾರದವರು ನೇಮಿಸಿರುವರು.

ದಕ್ಷಿಣ ಪಂಗೇರಿಯ ಕಾಪೋಸ್ವರ್ ಮುನಿಸಿಪಾಲಿಟಿಯವರು ತಮ್ಮ ಉದ್ಯೋಗಿಗಳಿಗೆ ಕ್ರಿಸ್‌ಮಸಿನ ಬಹುಮಾನವಾಗಿ ಈ ಸಲ ಒಂದೊಂದು ವಿಷವಾಯುವಿನ ಮುಖವಾಡವನ್ನು 'ಬೋನಸ್' ಎಂದು ಹಂಚಿರುವರು.

ಇಸ್ತಾಂಬೂಲಿನಲ್ಲಿ ಭಿಕ್ಷುಕರ ಕಂಪೆನಿ, ಲಿಮಿಟೆಡ್, ಎಂಬುದೊಂದು ಸಂಸ್ಥೆ ಇದೆ. ಇದನ್ನು ೧೭ ಮಂದಿ ಕಸುಬುದಾರಿ ಭಿಕ್ಷುಕರು ನಡೆಸುತ್ತಿರುವರು. ಈಚೆಗೆ ಪೋಲೀಸರೀ ಸಂಸ್ಥೆಯ ರುಜುಡ್ತಿ ನಡೆಸಿದರು.

ಜಪಾನಿನಲ್ಲಿ, ವಿದೇಶೀಯ ಮತ್ತೂ ಸ್ವದೇಶೀಯ ಫಿಲ್ಮುಗಳ ವಿಚಾರದಲ್ಲಿ ಅಲ್ಲಿನ ಪ್ರಭುತ್ವದವರಿಂದ ನಿರ್ಬಂಧದ ಆಜ್ಞೆ ಹೊರಟಿದೆ; ಅವುಗಳಲ್ಲಿ,—ಮುತ್ತಿಡುವ ಅಥವಾ ನರ್ತನ ಮಾಡುವ ಯಾವ ದೃಶ್ಯವೂ ಇರಕೂಡದು; ಇಂಪೀರಿಯಲ್ ಕೋರ್ಟನ್ನು, ಸೈನ್ಯದ ಮತ್ತೂ ಪೋಲೀಸ್ ಶಾಖೆಯನ್ನು ಅವಮಾನಿಸುವ ಯಾವ ವಿದ್ಯಮಾನಗಳೂ ಇರಕೂಡದು; ರಾಷ್ಟ್ರೀಯ ನೀತಿಗೆ ವಿರುದ್ಧವಾದ ಸಂಗತಿಗಳೆಲ್ಲವೂ ಲೋಪವಾಗಲೇ ಬೇಕು.

ಮೆಡ್ರಿಡಿನಲ್ಲಿ ಬ್ರಿಟಿಷ್ ರಾಯಭಾರಿಗಳ ಕಟ್ಟಡಗಳ ಮೇಲೆ ವಿಮಾನದಿಂದ ಬಾಂಬುಗಳು ಬಿದ್ದು, ೩ ಮಂದಿ ಮಿಲಿಟರಿಯವರಿಗೆ ಗಾಯಗಳಾಗಿವೆ.

ಸ್ಪೈನಿನ ಪಂಗೆಗಾರರ ನಾಯಕನಾದ ಜನರಲ್ ಫ್ರೇಂಕೋವಿನ ಆರ್ಡರಿನ ಮೇರೆಗೆ, ಲಂಡನಿನಲ್ಲಿ ಮಿಲ್ಯಗಟ್ಟಲೆಯ ಸ್ಪೈನಿನ ಬ್ಯಾಂಕ್ ನೋಟುಗಳನ್ನು ಮುದ್ರಿಸಿಟ್ಟಿದ್ದರು. ನವೆಂಬರಿನೊಳಗೆ ತಾನು ಮೆಡ್ರಿಡಿನಲ್ಲಿರುವೆನೆಂಬಾಶೆಯಿಂದ ಈ ಮುದ್ರಣದ ಕೆಲಸ ಜೋರಾಗಿ ನಡೆದಿತ್ತು. ಈಗ ಆ ಆಶೆಯು ಈಡೇರದುದರಿಂದ, ಆ ನೋಟುಗಳನ್ನು ಚಲಾವಣೆಯಲ್ಲಿ ತರಲಾಗದೆ ಅವು ಲಂಡನಿನ ಖಜಾನೆಯಲ್ಲಿಯೇ ಬಿದ್ದು ಕೊಳೆಯುತ್ತಿವೆ.

ಶಾಂಘ್ಯಾಯಲ್ಲಿ ಹೊಗೆಬತ್ತಿ ಸೇದುವುದರ ವಿರುದ್ಧವಾಗಿ ಒಂದು ಹೊಸ ಚಳವಳವು ಆರಂಭವಾಗಿದೆ. ಇದನ್ನು ಹೂಡಿದವರು ಹೊಸ ಜೀವನ ಚಳವಳದ ಸದಸ್ಯರುಗಳು. ಇವರು ನೀರಿನಿಂದ ತುಂಬಿದ ಬಕೆಟುಗಳನ್ನು ಎತ್ತಿಕೊಂಡು, ಬೀದಿಗಳಲ್ಲೆಲ್ಲ ಸಂಚರಿಸುವರು; ಹೊಗೆಬತ್ತಿ ಸೇದುವವರನ್ನು ಕಂಡಲ್ಲಿ 'ನೀವಿದನ್ನು ಎಂದೂ ನಿಮ್ಮ ಜೀವಮಾನದಲ್ಲಿ ಸೇದಬೇಡಿ' ಎಂದು ಉಪದೇಶಿಸುವರು. ಅವರು ಕೇಳದಿದ್ದರೆ, ಇವರೇನು ಆ ಬಕೆಟಿನ ನೀರನ್ನು ಜೆಲ್ಲುವರೋ ಬಿಡುವರೋ ತಿಳಿಯದು. ಅಂತೂ ಈ ನೀರಿನ ಬಕೆಟು ಈ ಚಳವಳದ ಗುರುತೆನ್ನಬಹುದು.

ಆಯಾಸವನ್ನು
ತೊರೆಯುವುದಕ್ಕೆ
ಭಾರತೀಯ ಚಾ ಸೇವನೆ.

ಮಕ್ಕಳೊಂದಿಗಾಡುವುದಕ್ಕೆ ಎಲ್ಲರಿಗೂ ಎಷ್ಟೇ ಬ್ರಹ್ಮಾನಂದಕರವಾದರೂ, ಅವರ ಸರಿಸಮಾನವಾಗಿ ಬಹುಕಾಲ ಆಡುವುದಕ್ಕೆ ಎಲ್ಲರಿಗೂ ಸಾಧ್ಯವಲ್ಲ. ಹಾಗೆ ಆಡಲು, ಮಧ್ಯೇ ಮಧ್ಯೇ ಚಾ ಸೇವನೆಯು, ಸಹಾಯಮಾಡುವುದು. ಚಾ ಸೇವಿಸಿ ಚೇತರಿಸಿಕೊಂಡು ಸಂತೋಷಪಡಿ.

ಚಾ ತಯಾರಿಸುವ ವಿಧಾನ. ನಿರ್ಮಲವಾದ ನೀರನ್ನು ಕಾಸಿ, ಶುಚಿಯಾದ ಪಾತ್ರೆಯೊಂದನ್ನು ಬೆಚ್ಚಗೆ ಮಾಡಿ, ಅದರಲ್ಲಿ ತಲಾ ಒಬ್ಬರಿಗೊಂದು ಚಂಚಾ, ಕೊಸರಿಗೊಂದು ಚಂಚಾ, ಉತ್ತಮವಾದ ಭಾರತೀಯ ಚಾಸೊಪ್ಪನ್ನು ಹಾಕಿ, ನೀರು ಚೆನ್ನಾಗಿ ಕುದಿದ ಮೇಲೆ, ಅದರ ಮೇಲೆ ಬಿಡಿ. ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ, ಹಾಲು ಸಕ್ಕರೆ ಬೆರಸಿ ಸೇವಿಸಿ.



ಸಂಸಾರಕ್ಕೊಂದೇ ಪಾನ - ಭಾರತೀಯ ಚಾ.

I.K. 30

ಕುಡಿಯಿರಿ! ಕುಡಿ

ಕಣನ್ ದೇವನ್
ಟೀ

ಶುದ್ಧತೆ, ಸುವಾಸನೆ
ಮತ್ತೂ ಶಕ್ತಿಗಳಿಗಾಗಿ
ಹೆಸರ್ಗೊಂಡದ್ದು.

ರಿಜಿಸ್ಟ್ರಿಯಾದ
ಟ್ರೇಡ್‌ಮಾರ್ಕ್-



ಬಿಕ್ಕ ಪ್ಯಾಕಿಂಗ್
ಎಲ್ಲರ ಉಪ
ಯೋಗಕ್ಕೆ ಸುಲಭ
ವಾಗಿದೆ.

ಆಹ್ಲಾದಕರವಾದ
ಪಾನೀಯ

SOLE SOUTH KANARA AGENTS:-

THE KERALA TEA SYNDICATE,
PONANI-MALABAR.

ಹಿಂದೂದೇಶ

ಲಾಹೋರಿನ ಮೇಯೋ ಆಸ್ಪತ್ರೆಯ ಒಬ್ಬ ಆಂಗ್ಲೋ ಇಂಡಿಯನ್ ನರ್ಸು ಆಸ್ಪತ್ರೆಯ ವಠಾರದಲ್ಲಿಯೇ, ತನ್ನ ಸ್ವಂತ ಕಾರಣಗಳಿಂದ, ವಿಷ ತಿಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಲಕ್ನೋ ಪ್ರಾಂತದಲ್ಲಿ, ಕಾಂಗ್ರೆಸಿನ ಪರವಾಗಿ ಚರ್ಮಾರ್ ಶೆಡ್ಯೂಲ್ಡ್ ಜಾತಿಯ ಉಮೇದುವಾರನಾಗಿ ನಿಂತಿದ್ದ ಶ್ರೀ. ಪೂರ್ಣಮಸಿ ಎಂಬಾತನ ಹೆಂಡತಿಯನ್ನು ಯಾರೋ ಹೊಡೆದು ಕೊಂದಿರುವರು. ಇದಕ್ಕೆ ಕಾರಣವು ಚುನಾವಣೆಯ ಕುರಿತು ಇದ್ದ ದ್ವೇಷಸಾಧನೆಯೇ ಎಂದು ಹೇಳಲಾಗಿದೆ. ದುಷ್ಟರು ಆ ಹೆಂಗಸಿನ ಮೃತದೇಹವನ್ನು ಕೂಡ, ಯಾರಿಗೂ ಸಿಕ್ಕದಂತೆ, ಎಲ್ಲಿ ಅಡಗಿಸಿಟ್ಟಿರುವರೋ ತಿಳಿಯದು.

ಕೊಯಮುತ್ತೂರಿನ ಹಜೂರ್ ಟ್ರೆಜರಿಯಲ್ಲಿ ಕಾವಲಿದ್ದ ನಾರಾಯಣಸ್ವಾಮಿ ನಾಯ್ಡು ಎಂಬ ಒಬ್ಬ ರಿಸರ್ವ್ ಕಾನ್‌ಸ್ಟೇಬಲನು, ರಾತ್ರಿ ಎರಡು ಸಲ ಗುಂಡು ಹಾರಿಸಿ, ಅನಂತರ ತಾನೇ ಗುಂಡಿಟ್ಟುಕೊಂಡು ಸತ್ತನು. ಸಂಗತಿ ಏನೆಂದರೆ,—ರಾಮಸ್ವಾಮಿ ನಾಯ್ಡು ಎಂಬ ಹೆಡ್ ಕಾನ್‌ಸ್ಟೇಬಲಿಗೂ ಇವನಿಗೂ ಬಹಳ ದ್ವೇಷವಿದ್ದ ಹಾಗೂ, ಆತನಲ್ಲಿಯೇ ಮಲಗಿದ್ದ ಹಾಗೂ, ಅದನ್ನು ಕಂಡು ಮೊದಲೀತನು ಕತ್ತಲಲ್ಲಿ ಎರಡು ಸಲ ಗುಂಡು ಹಾರಿಸಿ, ಆತನು ಸತ್ತಿರಬೇಕೆಂದು ಊಹಿಸಿ, ತಾನೂ ಆತ್ಮಹತ್ಯ ಮಾಡಿಕೊಂಡ ಹಾಗೂ ತಿಳಿದುಬರುತ್ತಿದೆ. ಆಶ್ಚರ್ಯವೆಂದರೆ ಈತನ ದ್ವೇಷಿಕನಿಗೆ ಗುಂಡು ತಗುಲಲೇ ಇಲ್ಲ.

ಕಾಂಗ್ರೆಸಿಗೆ ಓಟು ಕೊಡೆರೆಂಬ ಪತ್ರಗಳಲ್ಲಿ ಮುದ್ರಕರ ಹೆಸರಿಲ್ಲದ ಕಾರಣ, ಬೊಂಬಯಿಯಲ್ಲಿ ಆ ಕರಪತ್ರಗಳನ್ನು ಹಂಚುತ್ತಿದ್ದ ಮೂರು ನುಂದಿ ವಾಲಂಟಿಯರುಗಳನ್ನು ಪೋಲೀಸರು ಕೈದು ಮಾಡಿದ್ದಾರೆ.

ತಂಜಾವೂರಿನ ಮುನಿಸಿಪಲ್ ಕವಿಾಶನರರು ಅಲ್ಲಿನ ತಿಲಕ ಮೈದಾನಿನ ಕಾಂಗ್ರೆಸ್ ಧ್ವಜವನ್ನು ಅಲ್ಲಿಂದ ತೆಗೆಯಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಆದರೆ ಆ ಟೌನ್ ಕಾಂಗ್ರೆಸ್ ಕಮಿಟಿಯವರು ಅದನ್ನು ಅಲ್ಲಿಯೇ ಉಳಿಸಿಕೊಳ್ಳುವಂತೆ ಬಹಳ ಪ್ರಯತ್ನಪಡುತ್ತಿದ್ದಾರೆ.

ಬಿ. ಎನ್. ರೈಲ್ವೆಯ ಕಾರ್ಮಿಕರ ಪರಿಸ್ಥಿತಿಯು ಸಾಮಾನ್ಯ ಇದ್ದ ಹಾಗೇ ಇದೆ. ಗಲಭೆಗಳೇನೂ ಇಲ್ಲದೆ ಶಾಂತವಾಗಿದೆ.

೧೯೩೪-೩೫ನೇ ಇಸ್ವಿಯ ಸಮಗ್ರ ಭಾರತದ ವಿದ್ಯಾ ಸಂಬಂಧದ ಸರಕಾರದ ವರದಿಯು ಈಚಿಗೆ ತಾನೇ ಪ್ರಕಟವಾಗಿದೆ. ೧೯೨೮-೧೯೨೯ರಲ್ಲಿ ಹುಡುಗರ ಶಾಲೆಗಳು ೧೭೧೩೮ ಇದ್ದುವು; ಹುಡುಗಿಯರ ಶಾಲೆಗಳು ೫೦,೫೦೨ ಇದ್ದುವು; ಆಗ ಇವುಗಳಿಗಾಗಿ ಒಟ್ಟಿಗೆ ೨೮॥ ಕೋಟಿ ರುಪಾಯಿಗಳು ಖರ್ಚಾಗುತ್ತಿದ್ದುವು. ಆದರೆ ೧೯೩೪—೩೫ರಲ್ಲಿ ಪರಿಸ್ಥಿತಿ ಹೀಗಿದೆ—ಈ ವರ್ಷದಲ್ಲಿ ಹುಡುಗರ ಶಾಲೆಗಳ ಸಂಖ್ಯೆ ೧೬೬೫೮ಲಕ್ಕಿಳಿದಿದೆ; ಹುಡುಗಿಯರ ಶಾಲೆಗಳು ೪೪೭೮ಕ್ಕೇರಿವೆ. ಇವುಗಳಿಗಾಗಿ ಒಟ್ಟು ಖರ್ಚು ೨೬॥ ಕೋಟಿಗಳಷ್ಟಾಗಿದೆ; ಅಂದರೆ ೨॥ ಕೋಟಿ ಕಡಿಮೆ. ಮುಖ್ಯ ವಿದ್ಯಾಭ್ಯಾಸದ ಖರ್ಚು ಏರುವ ಬದಲು ಕಡಿಮೆಯಾಗಿದೆ. ಈ ವರ್ಷಗಳಲ್ಲಿ ಪ್ರಜಾಸಂಖ್ಯೆ ಸುಮಾರು ೨೫ ಮಿಲ್ಯಗಳಷ್ಟು ಏರಿದ್ದರೂ, ವಿದ್ಯಾಸಂಬಂಧದ ಖರ್ಚು ಮಾತ್ರ ಮೊದಲಿಂದಲೂ ಕಡಿಮೆಯಾಗಿದೆ ಎಂದರೆ—ಇದೀಗ ಆಶ್ಚರ್ಯ.

ಮೋಟರ್ ವಾಹನಗಳ ಇನ್ಶೂರೆನ್ಸಿನ ಸಮಿತಿಯು ಮದ್ರಾಸಿನಲ್ಲೀಗ ಆ ಸಂಬಂಧದ ಸಾಕ್ಷ್ಯಗಳನ್ನು ವಿಚಾರಿಸಲು ಆರಂಭಿಸಿದೆ.

ನಾಗ್ಪುರದ ಮೊಡೆಲ್ ಮಿಲ್ಲುಗಳ ಸುಮಾರು ೬೦೦ ಮಂದಿ ತಮಗೆ ಸಂಬಳ ಸಾಲದೆಂದು ಕಾರ್ಯತ್ಯಾಗ ಮಾಡಿದ್ದಾರೆ.

ಲಾಹೋರಿನಲ್ಲಿ ಇಸ್ಲಾಮಿಯಾ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದ ಮಿ. ಯುಸಫ್ ಅಲಿಯವರನ್ನೇ ಪುನಃ ನೇಮಿಸುವಂತೆ ವಿದ್ಯಾರ್ಥಿಗಳ ಮುಷ್ಕರವೂ ಆರಂಭವಾಗಿದೆ. ಆ ಕಾಲೇಜಿನಲ್ಲಿ ಬಾಗಿಲು ಹಾಕಿಕೊಂಡು ಕೆಲವು ವಿದ್ಯಾರ್ಥಿಗಳಿಗೆ ಪಾಠಗಳು ನಡೆಯುತ್ತಿದ್ದ ಹಾಗೇ ಮುಷ್ಕರಗಾರರು ಅಲ್ಲಿಗೆ ನುಗ್ಗಿ, ಗಲಭೆ ಮಾಡಿ, ಕುರ್ಚಿಗಳನ್ನೂ, ಕನ್ನಡಿಗಳನ್ನೂ ಒಡೆದು, ಮುಂದೆ ಒಂದು ಮೆರವಣಿಗೆ ಮಾಡಿಕೊಂಡು, ಹಾಡುತ್ತಾ, ಮ್ಯಾನೇಜಿಂಗ್ ಕಮಿಟಿಯವರಲ್ಲಿಗೆ ಹೋಗಿ ದೂರುಕೊಟ್ಟರು. ಆ ಕಮಿಟಿಯವರೀಗ ಆಲೋಚಿಸುತ್ತಿದ್ದಾರೆ.

ಇಂಡಿಯದ ಇಕ್ಯಾ ಕವಿಾಶನರಾದ ಸರ್ ಫಿರೋಜ್ ಖಾನ್ ನೂನ್‌ರವರು, ಇದೇ ತಾ. ೧೧ಕ್ಕೆ ಕರಾಚಿಗೆ ಬರಲಿರುವರು.

ಬೊಂಬಯಿಯ ಮುನಿಸಿಪಲ್ ಕಾರ್ಪರೇಶನಿನ ಬಜೇಟಿನಲ್ಲಿ ೧೯೩೭—೩೮ರ ಬಾಬತು, ಕಾರ್ಪರೇಶನಿಗೆ ಸುಮಾರು ೭,೭೦,೦೦೦ ರುಪಾಯಿಗಳು ಖರ್ಚಿಗೆ ಕಡಿಮೆ ಬೀಳಬಹುದೆಂದು ಅಂದಾಜಾಗಿದೆ.

ಬಂಗಾಳ ಗವರ್ನರರ ಪ್ರೋತ್ಸಾಹದಿಂದ ಆ ಪ್ರಾಂತದ ಯುವಕರ ಸ್ಥಿತಿಗತಿಗಳನ್ನು ವಿಚಾರಿಸಿ ಸುಧಾರಿಸಲಿಕ್ಕಾಗಿ ಅನೇಕ ಮಂದಿ ಆಢ್ಯ ಮಹನೀಯರದೊಂದು ಕಮಿಟಿಯಲ್ಲಿ ನಿರ್ಮಾಣವಾಗಿದೆ ಎಂದು ಕಲ್ಕತ್ತೆಯ ವಾರ್ತೆ.

ತಾನು 'ಚಕ್ರವರ್ತಿ' ಎಂದು ಕೂಗುತ್ತ, ಒಬ್ಬ ಭ್ರಾಂತನು, ಧಾನ್‌ಬಾದ್ ಕೋರ್ಟಿನಲ್ಲಿ ಎಡಿಷನಲ್ ಡಿಸ್ಟ್ರಿಕ್ಟ್ ಜಡ್ಜ್ ಕವಿಾಶನರು ಚೇಂಬರಿನಲ್ಲಿದ್ದಾಗ, ಅವರ ಸ್ಥಾನವನ್ನೇರಿ, ಕೊನೆಗೆ ಪೋಲೀಸರವನನ್ನು ಕೈದು ಮಾಡುವಾಗ, ಪೋಲೀಸರಲ್ಲಿ ಅನೇಕರಿಗೆ ಲಾಠಿಯಿಂದ ಹೊಡೆದನೆಂದೂ ಅವನನ್ನು ಈಗ ಜೈಲಲ್ಲಿಟ್ಟು ಪರೀಕ್ಷಿಸುತ್ತಿರುವರಿಂದೂ ಗೊತ್ತಾಗಿದೆ.

ನಾಗ್ಪುರದ ಕೆಥೊಲಿಕ್ ಇನ್ಸ್ಟಿಟ್ಯೂಟ್ ಡ್ಯಾನ್ಸ್ ಹಾಲಿನಲ್ಲಿ ಹೊಸ ವರ್ಷದ ದಿನ ವಿಪರೀತ ಗಲಭೆ. ಆ ನರ್ತನದ ಸಮಾರಂಭದಲ್ಲಿ ಕೆಲವು ಸೋಲ್ಜರ್ಸೂ ಭಾಗಿಗಳಾಗಿದ್ದು, ಕುರ್ಚಿಗಳನ್ನು ಮೈಮೇಲೆ ಬಿಸಾಡಿದರೆಂದೂ, ಹೆಂಗಸರನ್ನು ಕೈ ಹಿಡಿದೆಳೆದರೆಂದೂ, ಕೊನೆಗೆ ಪೋಲೀಸರು ಬಂದು ಈ ಅನಾಂತರ ಶಮನವಾಯಿತೆಂದೂ ವಾರ್ತೆ.

ಎಟ್ಟಾ ಜಿಲ್ಲೆಯ ಮುಸ್ತಾನ್ ರಾಜರ ಒಂದು ಆನೆಗೆ ಹುಚ್ಚು ಹಿಡಿದು, ಕಟ್ಟಿಹಾಕಿದಲ್ಲಿಂದ ತಪ್ಪಿಸಿಕೊಂಡೋಡಿ ಟೆಲಿಗ್ರಾಫ್ ಕಂಭಗಳನ್ನು ಕಿತ್ತು ಬಿಸಾಟು, ಒಂದು ಟ್ರೈನನು ಕೆಡವಿ ಕಾಡಿನೊಳಗೋಡಿತು.

ಪುರೋಹಿತರ ಗಲಭೆ ಇಲ್ಲದೆ, ಫರದೆಯನ್ನೂ ಬಿಟ್ಟು, ಕರಾಚಿಯಲ್ಲಿ ಶಿರಿನ್ ತಾಯಬಾಲಿ ಮಂಡೀವಾಲ ಎಂಬಾಕೆ, ಒಬ್ಬ ಪ್ರಸಿದ್ಧ ವರ್ತಕರ ಮಗಳು, ಸುಧಾರಣೆಯ ಮದುವೆ ಮಾಡಿಕೊಂಡಳು. ಮಿಸ್ ಸಿರಾನಿಯು, ವಿದ್ಯಾವಂತ ಮಹಿಳೆ; ಸಮಾಜಸುಧಾರಣೆಗಳಲ್ಲಿ ತುಂಬ ಆಸಕ್ತಿಯುಳ್ಳ ಮುಸ್ಲಿಂ ಭಗಿನಿ. ಈಕೆಯ 'ನಿಕಾ'ವನ್ನು ಈಕೆಯ ಸಹೋದರನೇ ಪೂರೈಸಿದನು.

ಗಾಂಧಿಜಿಯವರು ಪೂನಾ ಪ್ರಾಂತದಲ್ಲಿ ಸಂಚರಿಸುತ್ತಿದ್ದಾರೆ.

ಎಸೆಂಬ್ಲಿಯ ಕಾಂಗ್ರೆಸ್ ಮೆಂಬರರು ಫೆಬ್ರುವರಿಯಲ್ಲಿ ಮುಂಚಿತವಾಗಿ ಎಸೆಂಬ್ಲಿಯ ಅಧಿವೇಶನಕ್ಕೆ ಹಾಜರಾಗಬೇಕೆಂದು ಶ್ರೀ. ಭಲ್ಲೂಭಾಯ್ ದೇಸಾಯ್‌ಯವರು ಆಜ್ಞೆ ಮಾಡಿದ್ದಾರೆ.

ಮೇಲಿನ ಅಸಾಮಿನಲ್ಲಿ ಬ್ರಹ್ಮಪುತ್ರ ನದಿಯ ಘಾಟುಗಳು ಜರಿದು ಬಿದ್ದು, ನದೀಪ್ರವಾಹವು ದಿಬ್ಬದೊಳಗೂ ಸುತ್ತಲೂ ನುಗ್ಗಬಹುದೆಂಬ ಭೀತಿಯುಂಟಾಗಿದೆ.

ಕಳೆದ ಏಪ್ರಿಲಿನಿಂದ ದಶಂಬರದ ವರೆಗೆ, ಹಿಂದಿನ ವರ್ಷದ ಆ ಅವಧಿಗಿಂತ, ರೈಲ್ವೆಯವರಿಗೆ ೨೧೫ ಲಕ್ಷ ರುಪಾಯಿಗಳಷ್ಟು ಹೆಚ್ಚಿಗೆ ಉತ್ಪತ್ತಿ ದೊರಕಿದೆ.

ಕಲ್ಕತ್ತೆಯ ಬಳಿಯ ಬೆಂಡಾರ್ ರೈಲ್ವೆ ಸ್ಟೇಷನ್ ಮಾಸ್ತರರಾದ ಮಿ. ಇ. ಬೆಕ್ ಎಂಬಾತನು ಗುಂಡಿನಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತನ ಆರೋಗ್ಯವು ನೆಟ್ಟಗಿರಲಿಲ್ಲವಂತೆ.

ಕಲ್ಕತ್ತೆಯ ಒಬ್ಬ ಮಾರ್ವಾಡಿಯು ಅಂಗಡಿಯಲ್ಲಿ ಇಪ್ಪತ್ತು ಸಾವಿರ ರುಪಾಯಿಗಳ ನಗದಿಯೂ, ನಗನಾಣ್ಯಗಳೂ ಇದ್ದುವಂತೆ. ಅವನ ಅಂಗಡಿಯ ನೆರೆಯಲ್ಲಿಯೇ ಕೆಲವರು ಕಳ್ಳರು ಕೋಣೆಯಲ್ಲಿ ವಾಸವಾಗಿದ್ದವರು ಕೆಲವರು ಕನ್ನ ಕೊರೆದು ಕಳವು ಮಾಡಿರಬೇಕೆಂದು ಊಹೆ.

ಹೊಸ ಸುಧಾರಣೆಗಳ ಆಕ್ಟನ್ನು ಯಾರೂ ಒಪ್ಪುವುದಿಲ್ಲವಾದರೂ, ಈ ಆಕ್ಟಿನ ಪ್ರತಿಗಳು ಇಷ್ಟರಲ್ಲಿಯೇ ಮುಗಿದುಹೋಗಿ ಮತ್ತೆ ಮುದ್ರಣಕ್ಕೆ ಏರ್ಪಾಡಾಗಿದೆ.

೨೦ ವರ್ಷದ ವಿಶ್ವಕರ್ಮ ಯುವಕನೊಬ್ಬನು ಸೇಲಂ ಸವಿಾಪ, ಓಡುವ ಟ್ರೈನಿಗೆ ಅಡ್ಡಹಾಕಿ ಮಲಗಿ ಆತ್ಮಹತ್ಯೆ ಮಾಡಿಕೊಂಡನು. ಇದಕ್ಕೆ ಕಾರಣವು ಆತನಿಗೇನೂ ಕೆಲಸವು ದೊರೆಯದುದೇ ಎಂದು ನಂಬಲಾಗಿದೆ.

ಗೋರಕಪುರದ ಶ್ರೀ. ಎ. ಸಿ. ಮೇಥಾ ಎಂಬ ಲಾಯರ್ ಕೋರ್ಟನ್ನು ಅವಮರ್ಯಾದೆಯ ಮಾತುಗಳಿಂದ ಹೀನೈಸಿದನೆಂಬ ಆರೋಪವು ಅಲ್ಲಹಾಬಾದ್ ಹೈಕೋರ್ಟಿನವರಿಂದ ವಿಚಾರಿಸಲ್ಪಟ್ಟು, ಅಪರಾಧ ಸ್ಥಾಪನೆಯಾಗಿ ೬ ತಿಂಗಳಿನ ದಂಡವಿಧಿಸಲ್ಪಟ್ಟಿತು.

ತಿನ್ನವೆಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಎರಡಾಗಿ ವಿಭಾಗಿಸಲ್ಪಟ್ಟಿದೆ. ದಕ್ಷಿಣ ವಿಭಾಗದ ಕಾರ್ಯಭಾಗಗಳನ್ನು ಅಲ್ಲಿನ ಕಲೆಕ್ಟರರೇ ನಿರ್ವಹಿಸಿರುವರು.

ಸಿಂಹಳದಲ್ಲಿ ಇವಾ ಕಂಗಸೀಸ್ ಸಂಸ್ಥಾನವನ್ನು ಸ್ಥಾಪಿಸಿರುವ ಯಾವತ್ತು ದೇವಸ್ಥಾನಗಳನ್ನು ಯಾವತ್ತು ಹೊಂಗಲಿನ ದಿನ ಪೂಜೆಗಾಗಿ ತೆರೆದಿಡಲು ನಿರ್ಧಾರವಾಗಿದೆ.

ಕಾಂಗ್ರೆಸ್‌ನವರ ಚುನಾವಣೆಯ ಸಂಬಂಧ ಕೆಲವರು ಬೊಬ್ಬಿಲಿ ಸಂಸ್ಥಾನದ ಕೆಲವು ಹಳ್ಳಿಗಳಲ್ಲಿ ಪ್ರಚಾರ ಮಾಡಬೇಕೆಂದಿದ್ದಾಗ, ಸಂಸ್ಥಾನದ ಅಧಿಕಾರಿಗಳು ಅದರಲ್ಲಿ ಕಾಂಗ್ರೆಸಿನವರ ಕಾರು ಹೋಗದ ಹಾಗೆ ಮರಗಳನ್ನು ದಾರಿಗೆ ಅಡ್ಡವಾಗಿಟ್ಟು, ಒಂದು ಕಡೆ ಭಾರಿ ದಿಕೆಯ ಮೇಲೆ ಹತ್ತಿಯೂ ಆತಂಕಪಡಿಸಿದರೆಂದು ಸುದ್ದಿ ಬರುತ್ತಿದೆ.

ಚಿಟ್‌ಗಾಂಗಿನಲ್ಲಿ ಅಹಮ್ಮದ್ ಖಾನ್ ಪಂಜಾಬಿ ಮೂಜಿ ಕಾನ್‌ಸ್ಟೇಬಲನು ಒಂದು ಕಳ್ಳರ ಪಡೆಯನ್ನೇ ಕೊಂಡು ಹಲವು ಡಕಾಯಿತಿಗಳನ್ನು ನಡೆಯಿಸಿದನೆಂದು ನನ್ನು ಬಂಗಾಳದಿಂದ ೨೦ ವರ್ಷಗಳ ವರೆಗೆ ಹೊರಗಟ್ಟಿದರು. ಈ ಪೋಲೀಸ್ ಕಳ್ಳನು ಮೊದಲು ಜೈಲಿಗೆ ಬಂದವನೇ.

Box & Folding Camera.



With this Camera you can take excellant photos of men, women, boys, girls, gardens, natural scenery, Race, Marriage party, Procession etc. Unemployed can earn Rs. 5 - daily Film, Card, Chemicals and instruction book are sent free. Folding Camera Rs. 4/-, Box No. 2 Rs. 2/12/-, No. 1 Rs. 3/12/- Postage extra.

National Trading Co. (K. R.)
P. O. Beadon Street,
4, 5—1. CALCUTTA.

For all kinds of
NEAT & ACCURATE PRINTING
please consult
The
Saraswathi Printing Works, Ltd.
MANGALORE, S. K.



NOTICE
In the Court of the District Munsiff of Mangalore.

S. C. No. 619 of 1936.

Between

K. Shrinivas Bhatta—**Plaintiff**

and

B. Sunder Bhat, Son of Shrinivas Bhat, Bala Village, Mangalore Taluq } **Defendant.**

To

The Defendant B. Sunder Bhat.

Please take notice that the plaintiff abovenamed has filed the above suit for recovery of Rs. 12—13—9 due in respect of dealings with the plaintiff from 12—9—35 till 4—3—1936 and the said suit stands posted to 18—1—1937 for final disposal.

Mangalore, 8-1-1937. } M. A. Talwar, *Vakil for Plaintiff.*

KANT
Toilet Soap
ಚರ್ಮಕ್ಕೆ ತಾವರೆಯ ಪುಳಕವನ್ನು ಕೊಡುತ್ತ

ಶುದ್ಧ ವನಸ್ಪತಿತೈಲಗಳಿಂದ ಸಿದ್ಧವಾಗಿ ಆನಂದಕರ ಸುಗಂಧದ್ರವ್ಯಗಳಿಂದ ಪುವಾಸಿತವಾಗಿವೆ. ಕಡಿಮೆ ಬೆಲೆಯಲ್ಲಿ, ವಿಲಾಸದ, ಶೃಂಗಾರದ ಒಂದು ಸಾಬೂನು.

ಸ್ವಸ್ತಿಕ್ ಆಯಿಲ್ ವರ್ಕ್ಸ್, ಲಿಮಿಟೆಡ್,
ವಡಾಲಾ. - ಬೊಂಬಯಿ 15.

ಶ್ರೀ. ಕಾರ್ನಾಡ ಶಿವರಾಯರು

ಮುಂಬಯಿಯಲ್ಲಿ ತಾರೀಕು ೫ನೇ ಶನಿವಾರ ಸಾಯಂಕಾಲ ಇಹಲೋಕವನ್ನು ತ್ಯಜಿಸಿದರೆಂಬ ು, ಈ ಜಿಲ್ಲೆಗೂ, ಸಮಗ್ರ ಕರ್ನಾಟ , ಅಷ್ಟೇಕೆ, ಇಡೀ ಭಾರತಭೂಮಿಗೂ ತಾಪವನ್ನು ಉಂಟುಮಾಡಿದಿರದು. ಇವರು ಾರಸ್ವತ ಬ್ರಾಹ್ಮಣರಲ್ಲಿ ಹೆಸರುವಾಸಿಯಾದ ಕಾರ್ನಾಡು ಮನೆತನದವರು, ಆಗರ್ಭಶ್ರೀ ಮಂತರು, ಬಿ. ಎ., ಎಲ್. ಎಲ್. ಬಿ. ಪಾಸು ಮಾಡಿದವರು. ಇವರು ವಿದ್ಯಾರ್ಥಿದಶೆಯಲ್ಲಿ ಗವರ್ನಮೆಂಟ್ ಕೊಲೇಜಿನಲ್ಲಿ ಎಫ್. ಎ. ್ಲಾಸಿನಲ್ಲಿ ಕಲಿಯುತ್ತಿದ್ದಲ್ಲಿಂದ ನನ್ನೆ ಪರಿಚಿ ಆಗಿನಿಂದಲೂ ಕೆಲವು ವಿಚಾರಗಳಲ್ಲಿ ರೂ ಭಿನ್ನಾಭಿಪ್ರಾಯದವರಾಗಿದ್ದರೂ ಗೆಳೆತನಕ್ಕೆ ಏನೊಂದು ಆತಂಕ ಬರಲಿಲ್ಲ. ಂತರವಾಗಿದ್ದುದರಿಂದ ಎಲ್. ಎಲ್. ಬಿ. ಗಿ ಬಂದು ವಕೀಲಿವೃತ್ತಿಯನ್ನು ಕೈಕೊಂ ರ ಕೊಂಗ್ರೆಸ ಅಸಹಕಾರದ ಚಳವಳಿದ ೀರುವ ವರೆಗೆ ಇವರು ಆ ಕಾಲದ 'ಫೆಶನ' ರ್ತಿಯಾಗಿದ್ದರು. ಇಲ್ಲಿಯ ಬ್ರಹ್ಮಸಮಾಜ ಸೇರಿ, ಪ್ರೌಢವಿವಾಹ ಇತ್ಯಾದಿ ಸುಧಾ ಗಳಿಗೆ ಪುಷ್ಟಿ ಕೊಡುತಿದ್ದರು. ಜಾತಿ, ಗುರು ತ ಇತ್ಯಾದಿಗಳ ಮೇಲೆ ಇವರಿಗೆ ವಿಶ್ವಾಸವಿರ ್ಲ, ಮಾತ್ರವಲ್ಲ, ಈ ಸಂಸ್ಥೆಗಳನ್ನು ಧಿಕ್ಕರಿಸು ರು. ಇವರು ಮುಂಬಯಿಯಲ್ಲಿ 'ಲೊ' ಯುತಿದ್ದಾಗ ಕೈ.ವಾಸಿ ಸರ್ ನಾರಾಯಣ ೀಶ ಚಂದಾವರಕರ. (ಮುಂಬಯಿಯ ಹೈ ೀರ್ಟ ಜಡ್ಜರಾಗಿದ್ದವರು) ಇವರ ಅನುಯಾ ಗಳಾಗಿದ್ದು ಇವರ ಧಾರ್ಮಿಕ ಮತ್ತು ರಾಜ ರು ವಿಚಾರಗಳನ್ನು ಸ್ವೀಕರಿಸಿದ್ದರು. ಇವೇ ್ಯಬ್ಬರಿಗೆ ಇದ್ದ ಭಿನ್ನಾಭಿಪ್ರಾಯಗಳು.

ಇಲ್ಲಿ ಪ್ರಥಮ ಸಲ ಮಹಾತ್ಮಾಜಿಯ ಚಿತ್ತಯಿಸಿದಾಗ ಇವರು ಅವರ ಸ್ವಾಗತ ಲದ ಜತೆ ಕಾರ್ಯದರ್ಶಿಗಳಾಗಿದ್ದರು. ಧಿವಲದಲ್ಲಿಯೇ ಇವರು ಪ್ರಾದಿಧಾರಣೆ ಸರಿಷಾ ಯುರೋಪಿಯನ್ ಫೆಶನಿಗೆ ನ್ನು ಇತ್ತಿದ್ದರು. ಆಗಿನಿಂದ ಇ ಜಕೀಯಕಾರ್ಯಾಸಕ್ತಿಯು ಪ್ರಾರಂ ರಲ್ಲಿ ತನ್ನ ಸರ್ವಸ್ವವನ್ನು ಇವರು ಕಳೆ ು ಬಹಳ ಹೀನಸ್ಥಿತಿಗೆ ಒಳಗಾದರು. ಇವರು ಕೊನೆಯ ವರೆಗೆ ಸಾಹಸಿಗರಾ ಜೀವನವನ್ನು ಕೊಂಗ್ರೆಸ್ಸಿಗಾಗಿ ಸಮ ರ್ಪಿಸಿದ್ದು ಯಾಕಂದರೆ ಇವರು ಹೈಜಪ್ಪಸ ಅಧಿವೇಶನಕ್ಕೆ ಹೋ ಹಿದ್ದು ಮುಂಬಯಿಗೆ ಬಂದಾಗಲೆ ವಿದ್ದು ಕಾಲನಿಗೆ ತುತ್ತಾದರು. ನ್ನು ೬೬ ಅಥವಾ ೫೭ ವರ್ಷ ಂದು.

ವರ ಚಟುವಟಿಕೆಗಳು ಹಲವು ಕಡೆ ಾಣುತಿದ್ದುವು. ಇವರು ಮಂಗಳೂರು ಪಾಲಿಟಿಯ ಕೌನ್ಸಿಲರಾಗಿದ್ದರು. ಇ ಡಿಪ್ರೆಸ್ಸ್‌ಡ್ ಕ್ಲಾಸು ಮಿಶ್ಶನಿನ ಆಧಾರ ಳಲ್ಲಿ ಒಬ್ಬರು. ಭಾರತಸೇವಾಸಮಿ ಯ ಹೆಸರಿನಿಂದ ಕೈ. ವಾ. ಶ್ರೀ. ಪಡ ್ಕರ ರಾಮಚಂದ್ರಯ್ಯನವರು ಸ್ಥಾಪಿಸಿದ ಸಂಸ್ಥೆಯ ವ್ಯವಸ್ಥಾಪಕರಲ್ಲಿ ಒಬ್ಬರಿ ಗಣಪತಿ ಸೆಕೆಂಡರಿ ಶಾಲೆಯ ಆಡಳಿತೆ ಟಿಯ ಒಬ್ಬ ಮೆಂಬರರಾಗಿದ್ದರು. ಮ ತ ಸಭೆಯ ಸ್ಥಾಪಕರಲ್ಲಿ ಇವರು ಒಬ್ಬ ಎಮಿಂಡ ಪುರುಷರು.

ಇವು ಇತರ ಚಟುವಟಿಕೆಗಳಿದ್ದಾಗ್ಯೂ ಇ ರು ಕೊಂಗ್ರೆಸ್ಸಿನ ಧ್ಯೇಯಗಳಿಗಾಗಿ ತನುಮನ ಧನಗಳನ್ನು ಅರ್ಪಿಸಿದರು. ತಿಲಕ ವಿದ್ಯಾಲ ಯವನ್ನು ಸ್ಥಾಪಿಸಿ ಇದಕ್ಕಾಗಿ ರೂ. ೧೦,೦೦೦ದ ವರೆಗೆ ವೆಚ್ಚಮಾಡಿದರು. ಕದ್ರಿಯಲ್ಲಿ ಸ್ಥಾಪಿ ಸಿದ ಸಾಧಕಾಶ್ರಮದ ಬಗ್ಗೆ ಕಟ್ಟಡಕ್ಕೆ ೮೦೦೦ ರೂಪಾಯಿ ವೆಚ್ಚಮಾಡಿ ಅದು ಇರುವಷ್ಟು ಕಾಲ ತಿಂಗಳಿಗೆ ರೂ. ೫೦೦ರಂತೆ ಅದಕ್ಕೆ ಸಹಾಯ ಮಾಡುತಿದ್ದರು. ಖಾದಿ ಪ್ರಚಾರ ಕ್ಕಾಗಿ ರೂ. ೬೦೦೦ ವೆಚ್ಚಮಾಡಿದ್ದಲ್ಲದೆ ರೂ. ೫ ಲೆಯ ಒಂದು ಸಾವಿರ ಚರ್ಕಗಳನ್ನು ತಯಾ ಸಿ ಜಿಲ್ಲೆಯಲ್ಲೆಲ್ಲ ಹಂಚಿ ನೂಲುಸಂಗ್ರಹಕ್ಕೆ ವೈಶ್ಯೇಕ ಸಂಸ್ಥೆಯನ್ನು ಏರ್ಪಡಿಸಿದರು. ತಿಲ ಕ ಸ್ವರಾಜ್ಯ ಫಂಡಿಗೆ ಇವರು ರೂ. ೨೦೦೦ ದಾನಮಾಡಿದವರು. ಇದಕ್ಕೆ ಇವರ ಹಾಗೆ ನಂತಿಗೆ ಈ ಜಿಲ್ಲೆಯಲ್ಲಿ ಯಾರೂ ಕೊಟ್ಟಿಲ್ಲ. ನೇತ್ರಾವತಿಯ ನೆರೆಯ ಹಾವಳಿ ಆದರ ದಂಡೆಯಲ್ಲಿದ್ದ ನಿವಾಸಿಗಳಿಗೆ ಬಹಳ ಕಷ್ಟನಷ್ಟಗಳನ್ನು ತಂದೊಡ್ಡಿದ್ದಾಗ ಕೊಂಗ್ರೆಸ್ಸಿನವರು ಅವರ ಸಹಾಯಕ್ಕಾಗಿ ಏರ್ಪಡಿಸಿದ ಸಹಾಯಧನದ ಫಂಡಿಗೆ ಇವರು ಜತೆ ಕಾರ್ಯದರ್ಶಿಯಾಗಿದ್ದು ಹಣ ಸಂಗ್ರಹಿಸಿದ್ದಲ್ಲದೆ ಅನೇಕ ಉತ್ಸಾಹಿ ತರುಣರನ್ನು ಜಿಲ್ಲೆಯಿಂದ ಜತೆಗೊಳಿಸಿ ಅವರೊಂದಿಗೆ ಸೇರಿ ಬಹಳ ಪ್ರಯತ್ನಪಟ್ಟದ್ದೂ, ಈ ಉತ್ಸಾಹಿ ತರುಣರು ಅನ್ನಾಹಾರ ಬಟ್ಟೆಬರೆಗಳಿಲ್ಲದೆ ಬಳಲಿದವರಿಗೆ ಇವರ ಪ್ರೋತ್ಸಾಹದಿಂದ ಸಹಾಯ ತಂದೊಡ್ಡಿದ್ದೂ ನಾನು ಆ ಕಾಲದಲ್ಲಿ ಕಣ್ಣಾರೆ ಕಂಡಿದ್ದ ವಿಷಯ. ಇದಲ್ಲದೆ ಅಕ್ಕಿ ಧಾರಣೆ ಮುಡಿಗೆ ೧೫ ರೂಪಾಯಿಗೆ ಏರಿದಾಗ ಬಡಜನರಿಗೆ ನಿರಾಶ್ರಿತರಿಗೆ ಧರ್ಮಮಾಡಿದ್ದಲ್ಲದೆ ಮಧ್ಯಮವರ್ಗದವರಿಗೆ ಮುಡಿಗೆ ರೂಪಾಯಿ ಎಂಟರಂತೆ ಮಿತಸಂಖ್ಯೆಯಲ್ಲಿ ಅಂದರೆ ಇದರಿಂದ ಈ ಜನರು ವ್ಯಾಪಾರ ಮಾಡದಂತೆ ಎಚ್ಚರಿಟ್ಟು ಅನೇಕ ಜನರಿಗೆ ಸಹಾಯ ಮಾಡಿರುವರು. ಇದಲ್ಲದೆ ಹಲವು ಸಲ ಜಿಲ್ಲಾ ಕೊಂಗ್ರೆಸ ಕಮ್ಮಿಟಿಯ, ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮ್ಮಿಟಿಯ ಅಧ್ಯಕ್ಷರಾಗಿದ್ದು ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯ ಸದಸ್ಯರಾಗಿದ್ದು ಹಲವು ಕೊಂಗ್ರೆಸು ಸಭೆಗಳಿಗೆ ಹೋಗಿ ಕೊಂಗ್ರೆಸ ಮುಖಂಡರ ಗೆಳೆತನವನ್ನು ಸಂಪಾದಿಸಿ ಕೊಂಗ್ರೆಸು ಕಾರ್ಯಗಳಿಗೆ ತುಂಬಾ ಸಾಹಸ ಮಾಡುತ್ತಿದ್ದರು. ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಇವರು ಕಾರಾಗೃಹವಾಸವನ್ನು ಅನುಭವಿಸಿದರು.

ಹೀಗೆ ಸರ್ವತೋಮುಖವಾಗಿ ಇವರ ಚಟುವಟಿಕೆಯ ವರ್ಚಸ್ಸು ಬಿದ್ದಿದ್ದರೂ ಇವರಿಗೆ ಈ ಚುನಾವಣೆಯ ಕಾಲದಲ್ಲಿ ಒಂದು ಸೀಟನ್ನು ಕೊಡಬೇಕೆಂದು ವಾದಿಸಲಿಕ್ಕೆ ಇವರ ಗೆಳೆಯನೂ ಇವರ ಎಲ್ಲಾ ಕೊಂಗ್ರೆಸು ಕಾರ್ಯಗಳಲ್ಲಿ ಒಡನಾಡಿಯೂ ಆಗಿದ್ದ ಶ್ರೀ। ಹಿರಿಯಡ್ಕ ರಾಮರಾಯ ಮಲ್ಯರಲ್ಲದೆ ಇತರರು ಸಿಗಲಿಲ್ಲ. ಅವರೂ ಕೂಡಾ ಕೊಂಗ್ರೆಸ್ ಶಿಸ್ತನ್ನು ಮನ್ನಿಸಿ ಕೊನೆಗೆ ಸುಮ್ಮನಿರಬೇಕಾಯಿತು. 'ದುಡ್ಡಿಲ್ಲದ ನರನು ರಸ್ತೆ ಕಲ್ಲಿಗೆ ಸಮ' ಎಂಬ ಮಾತು ಶ್ರೀ। ಸದಾಶಿವರಾಯರ ವಿಷಯದಲ್ಲಿ ಸರಿ ಹೋಯಿತು. ಓಲ್ ಇಂಡಿಯಾ ಪಾರ್ಲಿಮೆಂಟರಿ ಬೋರ್ಡಿನ ವರೆಗೆ ಶ್ರೀ। ಸದಾಶಿವ ರಾಯರನ್ನು ವಿರೋಧಿಸಿ ಲೇಖನ, ತಂತಿಗಳು ಹೋದುವು. ಸ್ಥಳೀಯ ಕೊಂಗ್ರೆಸ್ ಕೌನ್ಸಿಲ್ ಒಫ್ ಎಕ್ಶನಿನ (Council of Faction?) ಸೂಚನೆಗಳನ್ನು ಅಂಗೀಕರಿಸದೆ ಓಲ್ ಇಂಡಿಯಾ ಪಾರ್ಲಿಮೆಂಟರಿ ಬೋರ್ಡಿನವರಿಗೆ ನಿರ್ವಾಹವಿಲ್ಲದಾಯಿತು. ಸದಾಶಿವರಾವ್ ನೀನು ಸೋತೆ! ಆದರೂ ನಿನ್ನ ಉತ್ಸಾಹವು ಮೇರೆ ಇಲ್ಲದಾಯಿತು. ಕೊಂಗ್ರೆಸು ಅಧಿವೇಶನಕ್ಕೆ ಹೋಗಿ ನಿನ್ನ ದೇಶಭಕ್ತಿಯನ್ನು ಅರ್ಪಿಸಿ ನೀನು ಇಹವನ್ನು ತ್ಯಜಿಸಿದೆ. ನಿನ್ನ ನಿಷ್ಕಾಮಭಕ್ತಿ ದೇಶಪ್ರೇಮಗಳಿಂದಾಗಿ ನೀನು ಸಾಯುಜ್ಯವನ್ನು ಪಡೆಯುವುದು ಖಂಡಿತ. ನಿನ್ನ ಆತ್ಮನು ಅಲ್ಲಿ ಶಾಂತಿಯಿಂದ ಶ್ರೀ ಪರಮಾತ್ಮನಲ್ಲಿ ಐಕ್ಯನಾಗಲಿ. ನಿನ್ನ ಮುದಿ ತಾಯಿಯನ್ನೂ ನಿನ್ನಿಬ್ಬರು ಅವಿವಾಹಿತೆಯರಾದ ಹೆಣ್ಮಕ್ಕಳನ್ನೂ ತೀರಾ ಅನಾಶ್ರಿತರಾಗಿ ಬಿಟ್ಟು ಹೋಗಬೇಕಾದುದೊಂದೆ ನಮಗೆ ವ್ಯಸನ. ಆದರೆ 'ಉಂಟುಮಾಡಿದ ದೇವರು ಊಟ ಕೊಡಲಾರನೇ' ಎಂಬದೇ ನನ್ನಂಥಾ ನಿನ್ನ ಗೆಳೆಯರಿಗೆ ಒಂದು ಸಮಾಧಾನ. ಅಂತು ನಿನಗೆ ನ್ಯಾಯವಾದ ಸ್ಥಾನ ಸಿಗದಂತೆ ಕಾರಣಾಂತರದಿಂದ ನಿನ್ನ ಮೇಲಿನ ಸೇಡು ತೀರಿಸಿದವರಿಗೆ ಇನ್ನಾದರೂ ಸುಖನಿದ್ರೆ ಬೀಳಲಿ.

ನೀನು ನಿಜವಾಗಿಯೂ ಕೊಂಗ್ರೆಸ್ಸಿನ 'ಟ್ರಂಪ್ ಕಾರ್ಡ್' (ತುರುಪಿನ ಎಲೆ) ಎಂದು ಚಮತ್ಕಾರಿಕವಾಗಿ ಒಬ್ಬರು ಹೇಳಿದ ಮಾತು ಭವಿಷದ್ವಾಣಿಯಾಗುತ್ತದೊ ಎಂಬದು ಈಗಿನ ಚುನಾವಣೆಯ ಫಲಿತಾಂಶದಿಂದ ಗೊತ್ತಾದೀತು. ನೀನು ಸಮೃದ್ಧನಾಗಿದ್ದಾಗ ನಿನ್ನನ್ನು ಹೊಗಳಿ ನಿನ್ನೊಡನೆ ಕೊಂಗ್ರೆಸಿನ ನೆವದಿಂದ ದಿಕ್ಕುದೆಶಗಳನ್ನು ತಿರುಗಿದವರೂ ನಿನ್ನಿಂದ ಹಣಸಹಾಯ ಪಡೆದವರೂ ಹಲವರು ನಿನ್ನ ಕಷ್ಟಕಾಲದಲ್ಲಿ ನೆರವಾಗುವುದಕ್ಕೆ ಮುಂದೆ ಬರಲಿಲ್ಲ. ಹಳ್ಳಿ ಪಳ್ಳಿಗಳಲ್ಲಿಯೂ ಸಂದಿಮೂಲೆಗಳಲ್ಲಿಯೂ ನಿನ್ನ ಹೆಸರಿನಲ್ಲಿ ದೀಪ ಉರಿಸುವವರು ಇದ್ದರೂ ಮಂಗಳೂರಿನಲ್ಲಿ ನಿನ್ನ ವಿಸ್ಮರಣೆಯಾಯಿತು. ಅದರ ಬದಲಾಗಿ ನೀನು ಇಹವನ್ನು ತ್ಯಜಿಸಿದ ಮೇಲೆ ಹರತಾಳವೊ, ಮೆರವಣಿಗೆಯೋ ಮೈದಾನದಲ್ಲಿ ಭಾಷಣಗಳ ಜಡಿಮಳೆಯೋ ಬರ ಬಹುದು. ಆದರೆ ಅವುಗಳಲ್ಲಿ ಸಹಭಾಗಿಯಾಗಲು ಇಷ್ಟವಿಲ್ಲದ ನಾನು ನನ್ನ ಕಂಬನಿಯ ತಿಲಾಂಜಲಿಯಿಂದಲೇ ನಿನ್ನ ಆತ್ಮನಿಗೆ ಶಾಂತಿಯನ್ನು ಬಯಸಿ, ಈ ಲೇಖನವನ್ನು ಮುಗಿಸುವೆನು.

ಉಳ್ಳಾಲ ಮಂಗೇಶರಾವ್.



ಜಗತ್ತಿನಲ್ಲಿ ಅತ್ಯಂತ ವಿಲಾಸದಾಯಕ ವಾದ ಕಾಲಕ್ಷಯೋಪನೆ



ಫೊಟೊಗ್ರಾಫಿಯಷ್ಟು ಉಲ್ಲಾಸಕರ ನಾದ ಆಡ್ಡಕಸುಬು ಬೇರೊಂದಿಲ್ಲ. ಸ್ವಲ್ಪ ಆಲೋಚಿಸಿ ನೋಡಿ, "ಕೋಡಕ್" ಅಥವಾ ಒಂದು "ಬ್ರೌನಿ" ಯಿಂದ ನೀವು ಮಾಡಬಹುದಾದ ಸುಂದರ ಭಾವಚಿತ್ರಗಳನ್ನು–ನಿಮ್ಮ ಮಿತ್ರರ ಚಿತ್ರಗಳನ್ನು, ನೀವು ಸಂದರ್ಶಿಸುವ ಸ್ಥಳಗಳ ಚಿತ್ರಗಳನ್ನು, ಏನೊಂದೂ ಪಾಖಲೆಯಿಲ್ಲದುದರಿಂದಾಗಿ ನೀವು ಬೇಗನೇ ಮರೆಯಬಹುದಾದ ಸಂತೋಷಕರವಾದ ಸಂಭ್ರಮಗಳ ಚಿತ್ರಗಳನ್ನು.

ಆರಂಭದಿಂದಲೇ ನೀವು ಕೋಡಕ್ ಫಿಲ್ಮ್ ಮತ್ತು ಈ ಉತ್ತಮ ಕೆಮೆರಾಗಳಲ್ಲೊಂದರಿಂದ ಯಶಸ್ವಿಯಾಗಿ ಚಿತ್ರಗಳನ್ನು ಮಾಡಬಹುದು ಮತ್ತು ವೆಚ್ಚವಾದರೂ ಬಹಳ ಅತ್ಯಲ್ಪ. ಕೋಡಕ್‌ನವರಿಂದ ಮಾಡಲ್ಪಟ್ಟಿರುವ ಕೆಲವು ಕೆಮೆರಾಗಳ ಕ್ರಯವು ರೂ. 3/12ರಷ್ಟು ಕಡಿಮೆಯಾಗಿದೆ. ನಿಮ್ಮ ಸಮೀಪದ ಕೋಡಕ್ ವ್ಯಾಪಾರಿಯಲ್ಲಿಗೆ ಹೋಗಿ ಮತ್ತು ಅವನ್ನು ನಿಮಗೆ ತೋರಿಸಲು ಹೇಳಿರಿ.

ಇದು "ಬುಲ್ಲೆಟ್" ಎಂಬ ಆಶ್ಚರ್ಯಕರವಾದ ಚಿಕ್ಕ ಕೆಮೆರಾ; ಇದಕ್ಕೆ ಹೊಳೆಯುವ ಕಪ್ಪು ಹೊರಭಾಗವೂ ಮತ್ತು ಶುಭ್ರವಾದ ನಿಕ್ಕಲಿನ ಸಾಮಾನುಗಳೂ ಇವೆ. ಇದರ ಕ್ರಯ ಬರೀ ರೂ. 10/—

ಕೋಡಕ್ ಲಿಮಿಟೆಡ್
(ಇಂಗ್ಲಾಂಡಿನಲ್ಲಿ ಇನ್ಕೊರ್ಪೊರೇಟ್ ಆದದ್ದು)
ಬೊಂಬಯಿ . ಕಲ್ಕತ್ತಾ
ಲಾಹೋರ್ . ಮದ್ರಾಸ್

ದಕ್ಷಿಣ ಕನ್ನಡ ಜಿಲ್ಲಾ ತೃತೀಯ ಶಿಕ್ಷಣಪ್ರದರ್ಶನ, ೧೯೫೭.

ಸ್ಥಳ:— ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆ, ಮಂಗಳೂರು.

ಸೂಚೀಪತ್ರ.

೧೫—೧—೫೭ ಬ-೫೦ ಪ್ರಾತಃಕಾಲ—ಶಿಕ್ಷಣ ಪ್ರದರ್ಶನವನ್ನು ತೆರೆಯುವುದು— ಮಿ। ಎ. ಡಿ. ಕ್ರೊಂಬಿ, ಸಿ. ಐ. ಇ., ಐ. ಸಿ. ಎಸ್., ದ. ಕನ್ನಡ ಜಿಲ್ಲಾ ಕಲ್ಲೆಕ್ಟರರು. ೯-೧೫ ಪೂರ್ವಾಹ್ನ ಮತ್ತು ೨-೫ ಮಧ್ಯಾಹ್ನ—ಪ್ರದರ್ಶನ—ಎಲ್ಲರಿಗೂ ಪ್ರವೇಶವಿದೆ. ೫-೬ ಸಾಯಂಕಾಲ—ವ್ಯಾಯಾಮ ಪ್ರದರ್ಶನ—ಮುನ್ಸಿಪಾಲಿಟಿಯೊಳಗಿನ ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳಿಂದ; ೬-೩೦—ಲ ರಾತ್ರೆ—ನಾಟಕ ಮತ್ತು ಹಾಸ್ಯ—ಶ್ರೀ. ಎನ್. ಎಸ್. ಹೊಳ್ಳ ಮುಂತಾದವರಿಂದ.

೧೪—೧—೫೭ ಪೂರ್ವಾಹ್ನ ೮-೧೫—ಪ್ರದರ್ಶನ—ಎಲ್ಲರಿಗೂ ಪ್ರವೇಶವಿದೆ; ಸಾಯಾಹ್ನ ೨-೫ ಪ್ರದರ್ಶನ—ಸ್ತ್ರೀಯರಿಗೆ ಮಾತ್ರ; ಸಾಯಂಕಾಲ ೫-೬ ವ್ಯಾಯಾಮ ಪ್ರದರ್ಶನ—ಮುನ್ಸಿಪಾಲಿಟಿಯೊಳಗಿನ ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳಿಂದ; ೬-೩೦—ಲ ರಾತ್ರೆ—ನಾಟಕ ಮತ್ತು ವಿವಿಧ ವಿನೋದಗಳು—ಬೆಸೆಂಟ ಗರ್ಲ್ಸ್ ಸ್ಕೂಲು, ಮತ್ತು ಕೆನರಾ ಗರ್ಲ್ಸ್ ಸ್ಕೂಲಿನ ವಿದ್ಯಾರ್ಥಿಗಳಿಂದ.

೧೫—೧—೫೭ ಬ-೧೫ ಪೂರ್ವಾಹ್ನ ಮತ್ತು ೨-೫ ಮಧ್ಯಾಹ್ನ—ವಸ್ತುಪ್ರದರ್ಶನ—ಎಲ್ಲರಿಗೂ ಪ್ರವೇಶ. ೫—೬ ಸಾಯಾಹ್ನ ವ್ಯಾಯಾಮ ಪ್ರದರ್ಶನ—ಸ್ವಸ್ತಿ ಸಂಘದ ಮೆಂಬರರಿಂದ; ೬-೩೦—ಲ ರಾತ್ರೆ—ನಾಟಕ ಮತ್ತು ಹಾಸ್ಯ—ಮುನ್ಸಿಪಲ್ ಉಪಾಧ್ಯಾಯರ ಸಂಘದಿಂದ.

೧೬—೧—೫೭ ಬ-೧೫ ಪೂರ್ವಾಹ್ನ ಮತ್ತು ೨-೫ ಮಧ್ಯಾಹ್ನ ವಸ್ತುಪ್ರದರ್ಶನ—ಎಲ್ಲರಿಗೂ ಪ್ರವೇಶ; ೫—೬ ಸಾಯಾಹ್ನ ಜಿಲ್ಲಾ ಸ್ಕೌಟ್ ಸಂಘದವರಿಂದ ಪ್ರದರ್ಶನ; ೬-೩೦—ಲ ರಾತ್ರೆ—ಜಿಲ್ಲಾ ಸ್ಕೌಟ್ ಶಿಬಿರಾಗ್ನಿ.

ಪ್ರವೇಶವು ಟಿಕೇಟುಗಳ ಮೂಲಕ—ಟಿಕೇಟುಗಳ ಧರವು ಹೀಗಿದೆ:—ಪ್ರಥಮ ದಿನ (ಅಂದರೆ ೧೫—೧—೫೭ರಲ್ಲಿ) ಪ್ರದರ್ಶನ ನೋಡಲಿಕ್ಕೆ ಪ್ರತಿ ವ್ಯಕ್ತಿಗೆ ಒಂದು ಆಣೆ. ಉಳಿದ ದಿನಗಳಲ್ಲಿ (ಅಂದರೆ ೧೪, ೧೫, ೧೬ರಲ್ಲಿ) IIIನೇ ಫಾರ್ಮ್ ಅಥವಾ ಅನೇ ದರ್ಜೆ ವರೆಗಿನ ಮಕ್ಕಳಿಗೆ ಅರ್ಧಾಣೆ, ಉಳಿದವರಿಗೆ ಒಂದಾಣೆ.

ತಾ. ೧೪ನೇ ಮಧ್ಯಾಹ್ನ ಸ್ತ್ರೀಯರಿಗೆ ಮಾತ್ರ ಪ್ರವೇಶವಿರುವುದರಿಂದ ಗಂಡಸರಿಗೆ ಆ ಕಾಲದಲ್ಲಿ ಪ್ರವೇಶವಿರದು. ೬-೩೦ ಮತ್ತು ಆ ಬಳಿಕ ಒಳಗಿನ ನೋಟಗಳಿಗೆ I ಕ್ಲಾಸಿಗೆ ಆಣೆ ೪, IIನೇ ಕ್ಲಾಸಿಗೆ ಆಣೆ ೨ ದಿನಂಪ್ರತಿ ತೆರಬೇಕಾಗುವುದು. ಸೀಸನ್ ಟಿಕೇಟುಗಳಿಗೆ (೧೪ನೇ ತಾರೀಕಿನ ಮಧ್ಯಾಹ್ನ ಸ್ತ್ರೀಯರಿಗೆ ಮಾತ್ರ) ಎಲ್ಲರಿಗೂ ಎಲ್ಲಾ ದಿನಗಳ ಬಗ್ಗೆ ಪ್ರವೇಶಕ್ಕೆ Iನೇ ಕ್ಲಾಸಿಗೆ ೧ ರೂ. IIನೇ ಕ್ಲಾಸಿಗೆ ೪ ಆಣೆ ತೆರಬೇಕಾಗುವುದು.

ಇದಲ್ಲದೆ ಪ್ರದರ್ಶನದ ದಿನಗಳಲ್ಲಿ ಉಪಾಧ್ಯಾಯರಿಗೆ—ಮುಖ್ಯವಾಗಿ ಜಿಲ್ಲೆಯ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ—ಮಧ್ಯಾಹ್ನ ೨ರಿಂದ ೫ ಗಂಟೆ ವರೆಗೆ ಶಿಕ್ಷಣವಿಚಾರದಲ್ಲಿ ಪಾಠಗಳನ್ನು ಏರ್ಪಡಿಸಿಯಾಗಿದೆ.

ಪಾಠಗಳ ಅನುಕ್ರಮಣಿಕೆ.

೧೪—೧—೫೭ ೨—೨-೧೦ ಮಧ್ಯಾಹ್ನ—ಪೀಠಿಕೆ—ಮ. ರಾ. ಯು. ಕಣ್ಣಪ್ಪ ಅವರ್ಗಳ್, ಎಮ್. ಎ., ಎಲ್. ಟಿ., ದಕ್ಷಿಣ ಕನ್ನಡ ಜಿಲ್ಲೆಯ ಎಡ್ಯುಕೇಶನಲ್ ಆಫೀಸರರು. ೨-೧೦—೨-೫೫ ಪ್ರಾಥಮಿಕ ಶಾಲೆಗಳಲ್ಲಿ ವೃತ್ತಿಕೈಗಾರಿಕೆಗಳು—ಆರ್. ದೊರೆಸ್ವಾಮಿ ಎಸ್ಸ್ವಾಯರ್, ಗವರ್ನಮೆಂಟ್ ಟ್ರೇಡ್ಸ್ ಸ್ಕೂಲ್ ಸೂಪರಿಂಟೆಂಡೆಂಟರು. ೩—೩-೪೫ ಗಣಿತವಿಚಾರ—ಮ. ರಾ. ರಾ. ಎಮ್. ರಾಮಚಂಪ್ರಯ್ಯ, ಅವರ್ಗಳ್, ಬಿ. ಎ., ಎಲ್. ಟಿ., ಗವರ್ನಮೆಂಟ್ ಕೊಲೆಜಿನ ಹೈಸ್ಕೂಲ್ ಹೆಡ್ ಮಾಸ್ತರರು. ೪—೪-೪೫ ಶಿಶುಗೀತೆಗಳು—ಮ. ರಾ. ಜಿ. ಪಿ. ರಾಜರತ್ನಂ ಅವರ್ಗಳ್.

೧೪—೧—೫೭ ೨—೨-೪೫ ಭೂಗೋಲ ಪಾಠ—ಮ. ರಾ. ಎಮ್. ಎನ್. ಕಾವಟತರಿಂದ, ಕೆನರಾ ಹೈಸ್ಕೂಲು, ಮಂಗಳೂರು. ೩—೩-೪೫ ಸ್ಕೌ ಎ ಕ್ಸಾಮಿನರ್—ಮ. ರಾ. ರಾ. ಎಸ್. ಮುಕುಂದ ರಾವ್, ಬಿ. ಎ., ಎಲ್. ಟಿ., ಕೆನರಾ ಹೈಸ್ಕೂಲು; ೪—೪-೪೫ ಶಾಲಾ ನಾಟಕಗಳು—ಮ. ರಾ. ರಾ. ಪಿ. ರಮಾನಂದ ರಾವ್, ಎಮ್. ಎ., ಎಲ್. ಟಿ., ಗವರ್ನಮೆಂಟ್ ಕೊಲೆಜಿನ ಲೆಕ್ಚರರು.

೧೫—೧—೫೭ ೨—೨-೪೫ ಪ್ರಾಥಮಿಕ ಶಾಲೆಗಳಲ್ಲಿ ಪಾಠಪ್ರವಚನಗಳಿಗೆ ಹೊರಪಟ್ಟ ಚಟುವಟಿಕೆಗಳು—ಮ. ರಾ. ರಾ. ಬಿ. ವೆಂಕಟ್ರಮಣ, ಬಿ. ಎ., ಎಲ್. ಟಿ.,—ಪುತ್ತೂರ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರು. ೩—೩-೪೫ ಪ್ರಾಥಮಿಕ ವಿಜ್ಞಾನ—ಮ. ರಾ. ರಾ. ಯು. ದೇಜು, ಬಿ. ಎ., ಎಲ್. ಟಿ., ಗವರ್ನಮೆಂಟ್ ಕೊಲೆಜಿನ ಉಪಾಧ್ಯಾಯರು. ೪—೪-೪೫ ವಿಮಾನಸಂಚಾರ—ಮ. ರಾ. ರಾ. ಪಿ. ಬಾಲಕೃಷ್ಣ ಮೆನನ್, ಬಿ. ಎ., (ಒನರ್ಸ್) ಎಲ್. ಟಿ., ಗವರ್ನಮೆಂಟ್ ಕೊಲೆಜು, ಮಂಗಳೂರು.

೧೬—೧—೫೭ ೨—೨-೪೫ ಹಳ್ಳಿಗಳ ಜೀರ್ಣೋದ್ಧಾರಕ ವಿಜ್ಞಾನ—ಮ. ರಾ. ರಾ. ಎಮ್. ಎನ್. ಕಾಮತ್, ಕೆನರಾ ಹೈಸ್ಕೂಲು, ಮಂಗಳೂರು. ೩—೩-೪೫ ಕನ್ನಡಭಾಷಾಶಿಕ್ಷಣ—ಮ. ರಾ. ರಾ. ಉಗ್ರಾಣ ಕೃಷ್ಣ ರಾವ್, ಬಿ. ಎ., ಎಲ್. ಟಿ., ಪುತ್ತೂರು ಶಾಲೆಗಳ ಜ



ನಿಮಗೆ ಕಟ್ಟೋಣನಿರ್ಮಾಣದ ಪ್ರಾಮುಖ್ಯ ವಿಷಯಗಳಲ್ಲಿ ಉತ್ಸುಕತೆಯಿದೆಯೆ? ಹಾಗಾದರೆ, ಈ ಆಕೃತಿಯಲ್ಲಿರುವ ಅಂಕೆಗಳು ಏನನ್ನು ಸೂಚಿಸುತ್ತವೆ ಎಂದು ವಿವರಿಸಬಲ್ಲಿರಾ? ಇಲ್ಲವಾದರೆ, ಇವನ್ನು ಕತ್ತರಿಸಿ ಮತ್ತು ಹೆಚ್ಚಿನ ವಿವರಗಳನ್ನು ಅಪೇಕ್ಷಿಸಿ Post Box No. 312, Madras, ಇವರಿಗೆ ಕಳುಹಿಸಿಕೊಡಿರಿ.

ಹೆಸರು.....

ವಿಳಾಸ.....

ಉದ್ಯೋಗ (ವಿದ್ಯಾರ್ಥಿಯಾಗಿದ್ದಲ್ಲಿ, ಕಲಿಯುವದೆಲ್ಲಿಂದು ನಮೂದಿಸಿರಿ).....

.....

K. M. 2.

ಉಚಿತ ಕಾಣಿಕೆ

ಈ ಕೆಳಗಣ ಯಾವುದಾದರೂ ಪುಸ್ತಕಗಳಲ್ಲಿ ನಿಮಗೆ ಅಭಿರುಚಿಯಿದ್ದರೆ, ನಿಮಗೆ ಬೇಕಾದವುಗಳ ಎದುರಿಗೆ ಗುಣಾಕಾರ ಗುರುತನ್ನು ಹಾಕಿ ಈ ವಿಭಾಗವನ್ನು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿಕೊಡುವರೆ ವಿಳಾಸ:—

P. O. Box No. 312, MADRAS.

ಹೆಸರು .....

ವಿಳಾಸ .....

ಉದ್ಯೋಗ (ವಿದ್ಯಾರ್ಥಿಯಾಗಿದ್ದಲ್ಲಿ ಕಲಿಯುವದೆಲ್ಲಿಂದು ನಮೂದಿಸಿರಿ)

.....

.....

K. M. 2.

* 1. ಇಂಡಿಯದ ಕೊಂಕ್ರೀಟ್ ಅಸೋಸಿಯೇಶನ್, ಅದು ಏನು, ಎಂಬುವುದು ವಗೈರೆ.

* 2. ಕೊಂಕ್ರೀಟ್ ಅಸೋಸಿಯೇಶನ್ ಒಫ್ ಇಂಡಿಯಾ—ರೊಸಿಯೊ ಡೈರಿ ಪುಸ್ತಕ ವಹಿ.

19. ಬೇಗನೆ ಘಟ್ಟಿಯಾಗುವ ಸಿಮೆಂಟುಗಳು.
20 ಇಂಡಿಯದಲ್ಲಿ ಸಿಮೆಂಟ್ ರಸ್ತೆಗಳು.
21. ಪೋರ್ಟ್‌ಲ್ಯಾಂಡ್ ಸಿಮೆಂಟಿನ ಕೊಂಕ್ರೀಟ್ ರಸ್ತೆಗಳು ಮತ್ತು ನಗರ ಬೀದಿಗಳ ಸಾಮಾನ್ಯ ವಿವರಣೆ.
22. ಸಿಮೆಂಟ್ ಮೆಕಡಾಮ್ ರೋಡಿನ ವಿವರಣೆ.
23. ಕೊಂಕ್ರೀಟ್ ರಸ್ತೆಯ ನಿರ್ಮಾಣದ ಕುರಿತಾದ ಓವರಸಿಯರರ ಮ್ಯಾನುವೇಲ್.
24. ಕೊಂಕ್ರೀಟ್ ರಸ್ತೆಯ ದುರಸ್ತಿ.
25 ಕೊಂಕ್ರೀಟ್ ರಸ್ತೆಗಳನ್ನು ಕಾಪಾಡುವುದು.
26. ಕೊಂಕ್ರೀಟ್ ವ್ಹೀಲ್ ಟ್ರಾಕುಗಳ ಕ್ವೀಟ್ ದಾರಿಗಳು.
27. ಜತೆಗೂಡಿಸಿದ ಕೊಂಕ್ರೀಟ್ ರಸ್ತೆಗಳು.
28. ರಸ್ತೆಯ ಮೇಲ್ಭಾಗದ ವೆಚ್ಚದ ಹೋಲಿಕೆ.
29 ಬಂಗಲೆಗಳಿಗೆ ಕೊಂಕ್ರೀಟಿನ ವಾಹನದ ದಾರಿಗಳು.
30 ಕಾರುಗಳಿಗೆ ರಿಕ್ಕೆಗಳಿದ್ದಲ್ಲ ರಸ್ತೆಗಳು ಗಮನಿಸುತ್ತಿರಲಿಲ್ಲ.
31. ಭೂಕಂಪಗಳು—ಕಂಪನದ ಶಕ್ತಿಯನ್ನು ತಡೆಯುವ ಒಂದೇ ಕಲ್ಲಿನ ಸ್ತಂಭದ ಚಿಕ್ಕ ಕೊಂಕ್ರೀಟ್ ಕಟ್ಟೋಣಗಳ ವಿಚ್ಛೇದನ.
32. ಪುಷ್ಟೀಕರಿಸಲ್ಪಟ್ಟ ಕೊಂಕ್ರೀಟುಗಳ —ಸುಲಭ ಮಾದರಿಗಳ ಕೋಷ್ಟಕ.
33. ಕೊಂಕ್ರೀಟ್ ಟೆನ್ನಿಸ್ ಕೋರ್ಟಿನ ಮಾದರಿ.
34. ಕೊಂಕ್ರೀಟ್ ಕಲ್ಲುಕೆಲಸದ ರಚನೆ.
35 ಕೊಂಕ್ರೀಟಿನ ಸಂಕಗಳು.
36. ಮುಂಚಿತವಾಗಿ ಪ್ಲಾನ್ ಮಾಡುವುದು.

ಮಲಯಾಳ ಮತ್ತು ಉರ್ದು ಭಾಷೆಗಳಲ್ಲಿ ಸಿಗುವುವು.

ವಿಜ್ಞಾನ ವಿಷಯ

(ವಿಜ್ಞಾನಿ)

ಕಸದಿಂದ ರಸ

ಸುಮಾರು ೬೦ ಸಾವಿರ ಜನಸಂಖ್ಯೆಯುಳ್ಳ ನಮ್ಮ ಮಂಗಳೂರು ಪಟ್ಟಣದಲ್ಲಿ ಕೂಡ ದಿನಕ್ಕೆ ನೂರಾರು ಗಾಡಿ ಕಸಕಡ್ಡಿ ರಾಸಿಬೀಳುತ್ತದೆ. ಮುನ್ಸಿಪಾಲಿಟಿಯವರು ಕಸ ಸಾಗಿಸಲಿಕ್ಕಾಗಿ ಪ್ರತ್ಯೇಕ ಕೂಲಿಗಳನ್ನಿರಿಸಿದರೂ ಸಾಕಾಗುವುದಿಲ್ಲ. ಆದರೆ ನಮ್ಮಲ್ಲಿಯ ಕಸವನ್ನು ದೂರಕ್ಕೆ ಸಾಗಿಸಿಬಿಡುವುದು ಮಾತ್ರ. ಆ ಕಸದಿಂದ ವಿಶೇಷ ಪ್ರಯೋಜನವಿಲ್ಲ. ಸೂರ್ಯನು ಉದಿಸುವ ದೇಶವಾದ ಜಪಾನಿನಲ್ಲಿ ಮಾತ್ರ ಕಸವೆಂದು ಚೂರನ್ನೂ ಹಾಳುಮಾಡುವುದಿಲ್ಲ. ಜಪಾನಿನ ಟೋಕಿಯೋ ಮಹಾನಗರವು ೫೦ ಲಕ್ಷ ಜನಸಂಖ್ಯೆಯುಳ್ಳದ್ದಾಗಿ ಲೋಕದ ಮಹಾನಗರಗಳಲ್ಲಿ ಮೂರನೇದು. ಅಲ್ಲಿ ದಿನಕ್ಕೆ ಸುಮಾರು ಗಾಡಿ ಕಸಕಡ್ಡಿಗಳು ಬೀಳುತ್ತವೆ. ಇದಲು ಈ ಕಸವನ್ನು ಜಪಾನಿನವರು ಸಮುದ್ರಕ್ಕೆ ಚೆಲ್ಲಿಬಿಡುತ್ತಿದ್ದರು. ಈಗ ಮಾತ್ರ ಹಾಗೆ ಮಾಡದೆ ಅದರಿಂದಲೂ ಪ್ರಯೋಜನ ಹೊಂದುತ್ತಿದ್ದಾರೆ. ನಗರದ ಕಸವನ್ನೆಲ್ಲಾ ಒಟ್ಟುಗೂಡಿಸಿ ದೊಡ್ಡ ಒಲೆಗಳಲ್ಲಿ ಸುಟ್ಟು, ಅದರ ಮೂಲಕ ಉಷ್ಣವಾಯುವನ್ನುಂಟುಮಾಡಿ ಅದರಿಂದ ವಿದ್ಯುದ್ಯಂತ್ರಗಳನ್ನು ನಡೆಯಿಸಿ, ಆ ಶಕ್ತಿಯನ್ನು ಟೋಕಿಯೋ ನಗರದ ಟ್ರಾಮು ಗಾಡಿಗಳ ಚಲನೆಗಾಗಿ ಉಪಯೋಗಿಸುವರು. ಇದೀಗ ಹಳದಿ ಜಪಾನೀ ವೈಜ್ಞಾನಿಕರ ಮೆದುಳಿನ ಪ್ರಭಾವ!

× × × × ×

ಲಭೇತ ಸಿಕತಾಸು ತೈಲಮಪಿ ಯತ್ನತಃ

ಮೇಲಿನ ಮಾತನ್ನು ಭರ್ತೃಹರಿ ಕವಿಯು ಹೊಯಿಗೆಯಿಂದ ಎಣ್ಣೆಯನ್ನಾದರೂ ಹಿಂಡಬಹುದು, ಮೂರ್ಖರ ಸೇವೆ ಸಲ್ಲದು ಎಂದು ಅಲಂಕಾರಕ್ಕಾಗಿ ಹೇಳಿದ್ದನ್ನು ಅಮೇರಿಕದ ಡೆನ್ ಶ್ರೀ. ಮೆಕ್ಸ್‌ಬೋಲ್ ಎಂಬಾತನು ಸಾಧಿಸಿದಂತೆ ಕಾಣುತ್ತದೆ. ನೋರ್ತ್ ಆಫ್ರಿಕಾಖಂಡದ ಹೊಯಿಗೆಯಲ್ಲಿ ಮೋಟಾರುಗಾಡಿಗಳಿಗೆ ಬೇಕಾಗುವ ಟಾರಿನ ಕಣಗಳಿವೆಯಂತೆ. ಈತನು ಒಂದು ಗುಟ್ಟಾದ ಯಂತ್ರವನ್ನು ತಯಾರಿಸಿ ಅದರಲ್ಲಿ ಮರಳಿನಿಂದ ತೈಲಕಣಗಳನ್ನೂ ಬೇರ್ಪಡಿಸುವ ಪ್ರಯೋಗವನ್ನು ಹಲವರ ಮುಂದೆ ತೋರಿಸಿದರೂ ಆ ವಿಧಾನವನ್ನು ಮಾತ್ರ ಗುಟ್ಟಾಗಿರಿಸಿರುವನು.

× × × × ×

ಚರ್ಮಮಾರ್ಗ

ಚರ್ಮಮಾರ್ಗವೆಂದ ಕೂಡಲೇ ರೋಮು ಕೂಪವೆಂದು ತಿಳಿಯಬೇಡಿ. ಇದು ಮಾರ್ಗಗಳಿಗೆ ಕಲ್ಲಿನ ಬದಲಾಗಿ ಚರ್ಮದ ಚೂರುಗಳನ್ನು ಹಾಕುವ ವಿಷಯ. ಇಂಗ್ಲೆಂಡಿನ ನೇಂಟ್‌ವಿಚ್ ಎಂಬ ಊರಿನಲ್ಲಿ ಚರ್ಮದ ಕೈಗಾರಿಕೆಯು ವಿಪರೀತ. ಅಲ್ಲಿ ನೂರಾರು ಗಾಡಿ ಚರ್ಮದ ಚೂರು ರಾಸಿ ಬೀಳುತ್ತದೆ. ಇದನ್ನು ಕೆಲವು ಕೆಮಿಕಲ್‌ಗಳ ವಿಶ್ರಣದಿಂದ ಆ ಊರಿನ ರಸ್ತೆಗೆ ಹಾಸುತ್ತಾರೆ. ಆ ಊರಿನ ರಸ್ತೆಯ ಮೇಲೆ ನಡೆವಾಗ ಮೆತ್ತನೆಯ ಹತ್ತಿಗೆಯ ಮೇಲೆ ನಡೆದಂತೆ. ಗಾಡಿಗಳೋಡುವಾಗ ನಿಶ್ಶಬ್ದ.

× × × × ×

ಕೆನೋಪಸ್

ಆಫ್ರಿಕ ಮತ್ತು ಯುರೋಪುಗಳ ಮಧ್ಯೇ ಹಾರಾಡಲಿಕ್ಕಾಗಿ ಬ್ರಿಟಿಷರು ತಯಾರಿಸುವ 'ಕೆನೋಪಸ್' ಎಂಬ ವಿಮಾನವು ಹಾರಾಡುವಾಗ ಯಾವ ಶಬ್ದವೂ ಇಲ್ಲದೆ ಹಾರಾಡಬಲ್ಲುದಂತೆ. ಇಷ್ಟರ ವರೆಗೆ ನಿರ್ಮಿತವಾದ ವಿಮಾನಗಳಲ್ಲಿ ಈ ವಿಮಾನದ ವೇಗವೇ ಪ್ರಬಲವಾಗಬಹುದು. ಈ ವಿಮಾನದಲ್ಲಿ ಎಲ್ಲಾ ಬಗೆಯ ಸೌಕರ್ಯಗಳೂ ಇವೆ.

× × × × ×

ಇಂಗ್ಲೆಂಡಿಗೆ ಬೇಕಾದ ಎಣ್ಣೆ ಇಂಗ್ಲೆಂಡಿನಲ್ಲೇ ದೊರಕಬಹುದು.

ಇಂಗ್ಲೆಂಡಿನ ಸಸ್ಸೆಕ್ಸ್ ಕೌಂಟಿಯ ಭೂಭಾಗದೊಳಗೆ ಒಂದು ದೊಡ್ಡ ಎಣ್ಣೆಯ ಕೆರೆಯಿದೆಯೆಂದು ಲಂಡನಿನ ಭೂಗರ್ಭಸಂಶೋಧಕರೊಬ್ಬರು ಕಂಡುಹಿಡಿದಿದ್ದಾರೆ. ಅಮೇರಿಕದ ಎಣ್ಣೆಕೆರೆಗಳ ಸುತ್ತುಮುತ್ತಲಿನ ಭೂರಚನೆಯಂತೆಯೇ ಇಲ್ಲಿಯ ರಚನೆಯಿದೆಯೆಂದೂ ಆದುದರಿಂದ ಇಲ್ಲಿಯೂ ಎಣ್ಣೆಕೆರೆಗಳಿರಬೇಕೆಂದೂ ಈ ಮಹನೀಯರು ಸಾಧಿಸುತ್ತಾರೆ. ಈ ರೀತಿಯ ಎಣ್ಣೆಕೆರೆಗಳು ಇಂಗ್ಲೆಂಡಿನಲ್ಲಿ ತುಂಬಾ ಇವೆಯೆಂದೂ ಇವುಗಳಿಂದ ದೊರಕುವ ಎಣ್ಣೆಯು ಇಂಗ್ಲೆಂಡಿನ ಜನರಿಗೆ ೨೦೦ ವರ್ಷಗಳ ವರೆಗಿನ ಉಪಯೋಗಕ್ಕೆ ಸಾಕಾದೀತೆಂದೂ ಈ ಸಂಶೋಧಕರು ಅಭಿಪ್ರಾಯಪಡುತ್ತಾರೆ.

× × × × ×

ಭೂಕಂಪಗಳನ್ನು ತಡೆಯಲು ಸಾಧ್ಯವಿಲ್ಲ.

ನಾವು ವಾಸಿಸುವ ಈ ಭೂಮಿಗೆ ೧,೦೦೦,೯೦೦,೦೦೦ ವರ್ಷಗಳಾದುವೆಂದು ಶಾಸ್ತ್ರಜ್ಞರ ಅಭಿಪ್ರಾಯ. ನಮ್ಮ ಭೂಮಿಯು ದಿನೇ ದಿನೇ ಬಿಸಿಯೇರುವುದಂತೆ. ಹೀಗೆ ಬಿಸಿಯೇರುವ ವಿಷಯವನ್ನು ೧೦-೧೫ ವರ್ಷಗಳ ಮೊದಲು ಯಾರೂ ತಿಳಿದಿರಲಿಲ್ಲ. ಇದನ್ನು ಫ್ರಾನ್ಸಿನ ವೈಜ್ಞಾನಿಕಳಾದ ಮೇಡಂ ಕ್ಯೂರಿಯು ರೇಡಿಯಮನ್ನು ಕಂಡುಹಿಡಿದ ಮೇಲೆ ವೈಜ್ಞಾನಿಕರು ಕಂಡುಕೊಂಡರು. ರೇಡಿಯಂ ಲೋಹವು ಲಕ್ಷಾಂತರ ರೂಪ್ಯಾ ಬೆಲೆ ಬಾಳುವ ಲೋಹ. ಇದಕ್ಕೆ ಛಿದ್ರವಿಚ್ಛಿದ್ರವಾಗುವ ಶಕ್ತಿಯಿದೆ. ಹಾಗೆ ಛಿದ್ರವಿಚ್ಛಿದ್ರವಾಗುವಾಗ ಕಾವು ಉಂಟಾಗುವುದು. ಭೂಮಿಯಲ್ಲಿರುವ ಎರಡು ಕೋಟಿ ಟನ್ ಕಲ್ಲಿನಲ್ಲಿ ಒಂದು ಔನ್ಸು ರೇಡಿಯಂ ದೊರಕುವುದು. ಹೀಗೆ ರೇಡಿಯಮ್ಮಿನ ಶಕ್ತಿಯಿಂದ ಭೂಮಿಯು ಶಾಖವಾಗಿ ಕರಗಿ ಕುಸಿಯುವುದೇ ಭೂಕಂಪ. ಹೀಗೆ ಭೂಕಂಪವಾಗಿ ಒಮ್ಮೆ ತಣಿದ ಭೂಮಿಯು ಪುನಃ ಶಾಖಗೊಂಡು ಕಂಪಿಸುವುದು. ಆದುದರಿಂದ ಭೂಕಂಪವು ಎಂದೆಂದಿಗೂ ಇದ್ದೇ ಇರುವುದು.

× × × × ×

ಸಾಬೂನುಗಳಿಗೆ

ಗಂಧಕ, ಝಿಂಕ್‌ಗಳನ್ನೂ ರಬ್ಬರನ್ನೂ ಮಿಶ್ರಮಾಡಿ ಒಂದು ಹೊಸ ತರದ ಕವಚವನ್ನು ಕಂಡುಹಿಡಿದಿರುವರು. ಈ ಕವಚವು ಸಾಬೂನಿಗೆ ಯಾವ ದೋಷವೂ ಬಾರದಂತೆ ತಡೆಯುವುದು. ಹವೆಯ ಬಾಧೆಯು ಈ ಕವಚದಿಂದ ತಡೆಯಲ್ಪಡುವುದು. ಇದರಿಂದ ಇನ್ನು ಮುಂದೆ ಸಾಬೂನುಗಳನ್ನು ಎರಡು ಮೂರು ಕಾಗದಗಳಲ್ಲಿ ಸುತ್ತುವ ಅವಶ್ಯವಿಲ್ಲ.

× × × × ×

ರಶ್ಯದಲ್ಲಿ ಹೆಂಗಸರ ಹೊಸ ಶೋಧ!

ರಷ್ಯದ ಹೆಂಗಸರು ತಮ್ಮ ತುಟಿಗಳಿಗೆ ಹಚ್ಚುವ ಬಣ್ಣದಲ್ಲಿ ವಿಶೇಷ ಮಾದಕವಿರುವ ಮದ್ಯವನ್ನು ಹಚ್ಚಿಕೊಂಡು ಪುರುಷರನ್ನು ಮುತ್ತಿಕ್ಕುವರಂತೆ. ಇದರಿಂದ ಪುರುಷರಿಗೆ ಮದ್ಯಪಾನ ಮಾಡಿದ ಆನಂದವಾಗಿ ಸ್ತ್ರೀಯರ ಆನಂದದಲ್ಲಿ ಅವರೂ ಮಗ್ನರಾಗುವರು.

STAMPS!!!

Rev. Father J. ROMANI, S. J. will send stamps for approval to Bona Fide collectors on stamps under reference. Apply to R. C. Chaplain, Ahmedabad, Camp.

8, 18—12

ಕೃತಕ ಮಾದರಿಯ ಸಾಬೂನುಗಳಿಂದ ಮೋಸಹೋಗದೇ ಇರಿ.

ಇಂಡಿಯಾದೇಶದ ಅತ್ಯುತ್ತಮ ಶಾಖತೈಲಗಳಿಂದ ತಯಾರು ಮಾಡಲ್ಪಟ್ಟಿದೆ.

ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ

HAMÄM

TOMCO ಟೊಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್, 1, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು.

ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿ., ತಾತಾಪುರಂ ಮತ್ತು ಬೊಂಬಯಿ.

ತಿಳಿದಿರಲಿ!

ಪ್ರಭಾತ ಕಂಪೆನಿಯವರ ಚಿತ್ರರತ್ನವಿದು

ರಘುಪತ್ ರಾಘವ.

ಅಮೃತಮಂಥನ—ಮಹಾತ್ಮ—ಮುಂತಾದ ಚಿತ್ರಗಳನ್ನಿತ್ತ ತಿವರ—ಅವೆಲ್ಲವುಗಳನ್ನೂ ಮಿಗಿಸುವ ಚಿತ್ರ.

ಶಾಂತಾ ಆಪ್ಟೆ—ನಲಿನಿ ತರ್ಖಡ್—ಮುಂತಾದವರು.

ಶ್ರೀ ಚಿತ್ರಾ ಟಾಕೀಸ್, ಮಂಗಳೂರು

ತಾರೀಕು 14ನೇ ಜನವರಿ 1937ರಿಂದ.

ಆರೋಗ್ಯ ವಿಜ್ಞಾನ

ಗ್ರಾಮ ವೈದ್ಯಕ ಸಹಾಯ.

ಹಳ್ಳಿಗಳಲ್ಲಿರುವ ಜನರಿಗೆ ಆ ದಷ್ಟು ಅವರ ಹತ್ತಿರದಲ್ಲಿಯೇ ಯೋಗ್ಯ ತರದ ವೈದ್ಯಕ ಸಹಾಯವು ಸಿಕ್ಕಬೇಕೆಂದು ಸರಕಾರದವರು ೧೯೨೪ನೇ ಇಸವಿಯಲ್ಲಿ ಗ್ರಾಮ ವೈದ್ಯಕ ಸಹಾಯದ ಯೋಜನೆಯೊಂದನ್ನು ಕೈಕೊಂಡರು. ಹೆಚ್ಚು ಖರ್ಚಿಲ್ಲದೆ ಒಳ್ಳೇ ತರದ ವೈದ್ಯಕ ಸಹಾಯವು ಸಿಕ್ಕುವುದಕ್ಕೆ ಇದಷ್ಟು ಒಳ್ಳೇ ಉಪಾಯಗಳು ಬೇರೆ ಇರುವುದಿಲ್ಲ. ಈ ಯೋಜನೆಯ ಮೇರೆಗೆ ಒಳ್ಳೇ ಯೋಗ್ಯತೆ ಪಡದ ವೈದ್ಯರಿಗೆ, ಅವರು ಜನರ ವಿಶ್ವಾಸವನ್ನು ಘಳಿಸಿ ತಮ್ಮ ಜೀವನವನ್ನು ನಡಿಸ ಸಮರ್ಥರಾಗುವ ತನಕ ಆರಂಭದ ಕೆಲವು ವರ್ಷ ಸರಕಾರದವರು ದ್ರವ್ಯಸಹಾಯವನ್ನು ಮಾಡಿ, ಎಲ್ಲೆಲ್ಲಿ ವೈದ್ಯಕ ಸಹಾಯವು ಅಗತ್ಯವಿರಬಹುದೋ ಅಂಥಾ ಹಳ್ಳಿಗಳಲ್ಲಿ ಅವರು ಸ್ಥಿರವಾಗಿ ಉಳಕೊಳ್ಳಲಿಕ್ಕೆ ಅವರನ್ನು ಪ್ರೋತ್ಸಾಹಿಸುತ್ತಾರೆ. ಸರಕಾರಕ್ಕೆ ಇದರಿಂದ ಖರ್ಚು ಕಡಿಮೆಯಾಗುವುದಲ್ಲದೆ ಕೆಲಸವಿಲ್ಲದ ಅನೇಕ ವೈದ್ಯ ಶಾಸ್ತ್ರಜ್ಞರಿಗೆ ಜೀವನೋಪಾಯವನ್ನು ಕಲ್ಪಿಸಿ ಕೊಟ್ಟಂತೆಯೂ ಖಾಸಗಿ ವೈದ್ಯ ಉದ್ಯೋಗವು ವೃದ್ಧಿಯಾಗುವಂತೆಯೂ ಆಗುತ್ತದೆ. ಹಳ್ಳಿಗಳಲ್ಲಿರುವ ಸ್ತ್ರೀಯರಿಗೆ ಪ್ರಸವಕಾಲದಲ್ಲಿ ಸಹಾಯ ಮಾಡಲಿಕ್ಕೆ ಸೂಲಗಿತ್ತಿಯರನ್ನು ನೇಮಕ ಮಾಡಲಿಕ್ಕೂ ಏರ್ಪಾಡು ಮಾಡಿರುತ್ತಾರೆ.

೨. ಹೀಗಿನ ಹಳ್ಳಿ ಔಷಧಾಲಯಗಳನ್ನು ಎಲ್ಲೆಲ್ಲಿ ಸ್ಥಾಪಿಸಬೇಕೆಂಬದನ್ನು ಜಿಲ್ಲಾ ಮೆಡಿಕಲ್ ಆಫೀಸರರೊಡನೆಯೂ 'ಸರ್ಜನ್ ಜನರಲ'ರೊಡನೆಯೂ ಆಲೋಚನೆ ಮಾಡಿ ಆಯಾಯ ಸ್ಥಳೀಯ ಬೋರ್ಡಿನವರೇ ನಿಶ್ಚಿಸುವುದಾಗಿರುತ್ತದೆ. ಹಾಗೆಯೇ ಆ ಔಷಧಾಲಯಗಳಿಗೆ ವೈದ್ಯರನ್ನು ಜಿಲ್ಲಾ ಮೆಡಿಕಲ್ ಆಫೀಸರರ ಮತ್ತು ಸರ್ಜನ್ ಜನರಲರ ಒಪ್ಪಿಗೆಯನ್ನು ಪಡದು ಸ್ಥಳೀಯ ಬೋರ್ಡಿನವರೇ ನೇಮಕ ಮಾಡುತ್ತಾರೆ. ಈ ಔಷಧಾಲಯಗಳಿಗೆ ಖಾಸಗಿ ವೈದ್ಯರನ್ನೇ ನೇಮಕ ಮಾಡುವುದಾಗಿರುತ್ತದೆ. ಅವರು ಮೇಲೆ ಹೇಳಿದಂತೆ ಸ್ಥಳೀಯ ಬೋರ್ಡಿನವರು ನಿಶ್ಚಯಿಸಿದ ಹಳ್ಳಿಗಳಲ್ಲಿ ಸ್ಥಿರವಾಗಿ ಉಳಕೊಂಡು ತಮಗೆ ಸರಕಾರದವರು ಕೊಡುವ ದ್ರವ್ಯಸಹಾಯದ ಬದಲಾಗಿ ಬಡ ಜನರಿಗೆ ತಮ್ಮ ಔಷಧಾಲಯದಲ್ಲಿ ನಿಶ್ಚಿತ ಸಮಯಕ್ಕೆಲ್ಲಾ ಧರ್ಮಾರ್ಥವಾಗಿ ಚಿಕಿತ್ಸೆ ಮಾಡುವುದಾಗಿ ಸರಕಾರದವರೊಡನೆಯೂ ಸ್ಥಳೀಯ ಬೋರ್ಡಿನವರೊಡನೆಯೂ ಕರಾರು ಮೂಲಕ ಒಪ್ಪಿಕೊಳ್ಳಬೇಕಾಗಿರುತ್ತದೆ. ಇದಕ್ಕೆ ವಿರುದ್ಧವಾಗದ್ದಲ್ಲಿ ಅವರು ಅನುಕೂಲಸ್ಥರಿಂದ ಚಿಕಿತ್ಸೆ ಬಗ್ಗೆ ಫೀಸನ್ನೂ ಔಷಧಗಳ ಕ್ರಯವನ್ನೂ ಪಡೆಯಬಹುದು. ಈ ಔಷಧಾಲಯಗಳ ವಿಷಯದಲ್ಲಿ ವೈದ್ಯರಿಗೂ ಸೂಲಗಿತ್ತಿಗೂ ವರ್ಷಾವಧಿ ನಿಶ್ಚಿತ ದ್ರವ್ಯಸಹಾಯವನ್ನು ಮಾಡುವುದೊಂದನ್ನು ಮಾತ್ರ ಸರಕಾರದವರು ನೋಡಿಕೊಳ್ಳುತ್ತಾರೆ. ದಿನವೊಂದಕ್ಕೆ ೫೦ ರೋಗಿಗಳಿಗೆ ಕೊಡಲಿಕ್ಕೆ ಸಾಕಾಗುವ ಅಂದಾಜಿನ, ವರ್ಷಾವಧಿ ರೂಪಾಯಿ ೬೦ ಬೆಲೆ ಬಾಳುವ ಔಷಧ ವಗೈರೆಯನ್ನು ಸ್ಥಳೀಯ ಅಧಿಕಾರಿಗಳು ಆ ವೈದ್ಯರಿಗೆ ಒದಗಿಸಬೇಕಾಗಿರುತ್ತದೆ. ಜಿಲ್ಲಾ ಮೆಡಿಕಲ್ ಆಫೀಸರೊಡನೆ ಆಲೋಚಿಸಿ,—ವೈದ್ಯರಿಗೂ ಸೂಲಗಿತ್ತಿಗೂ ಕೊಡಬೇಕಾದ ವರ್ಷಾವಧಿಯ ದ್ರವ್ಯಸಹಾಯವನ್ನೂ ಇತರ ಖರ್ಚನ್ನೂ ತಾವೇ ತಾಳಿಕೊಂಡು,—ಇನ್ನೂ ಹೆಚ್ಚಿನ ಹಳ್ಳಿ ಔಷಧಾಲಯಗಳನ್ನು ಬೇಕಾದ್ದಲ್ಲೆಲ್ಲಾ ಸ್ಥಳೀಯ ಅಧಿಕಾರಿಗಳೇ ಇಡಬಹುದು.

ದಕ್ಷಿಣ ಕನ್ನಡದಲ್ಲಿ ಈಗ ೨೧ ಗ್ರಾಮ ಔಷಧಾಲಯಗಳಿವೆ. ಇವುಗಳಲ್ಲಿ ೧೯ಕ್ಕೆ ಸರಕಾರದವರೂ ೨ಕ್ಕೆ ಜಿಲ್ಲಾ ಬೋರ್ಡಿನವರೂ ದ್ರವ್ಯಸಹಾಯ ಮಾಡುತ್ತಾರೆ. ಇವುಗಳಲ್ಲದೆ ಸಾಕು - ಕಚೇರಿಗಳಿರುವ ಪಟ್ಟಣಗಳಲ್ಲಿ ಹೆ ಬಂಟ್ವಾಳ, ಮೂಲ್ಕಿ, ಬೆಳ್ತಂಗಡಿ, ದೂರು, ಮೂಡಬಿದ್ರೆ, ಹೊಸದುರ್ಗ, ೀಶ್ವರ, ಸುಳ್ಯ ವ ಕಡಬಾ ವಗೈರೆ ಮುಖ್ಯ ಸ್ಥಳಗಳಲ್ಲಿಯೂ ಬೇರೆ ಆಸ್ಪತ್ರೆಗಳೂ ಲಯಗಳೂ ಇರುವವು.

ಈ ಹಳ್ಳಿ ಔಷಧಾಲಯಗಳಲ್ಲಿರುವ ಸೂಲಗಿತ್ತಿಯರಿಗೂ ಕೆಳಗೆ ಕಾಣಿಸಿದಂತೆ ಹಣ ಸಹಾಯ ಮಾಡುತ್ತಾರೆ.

	ಏಜೆನ್ಸಿ ಪ್ರದೇಶಗಳಲ್ಲಿ	ಸಾಮಾನ್ಯ ಜಿಲ್ಲಾ ಪ್ರದೇಶಗಳಲ್ಲಿ
	ವರ್ಷಾವಧಿ ರೂಪಾಯಿ	
೧. ಎಲ್. ಎಮ್. ಪಿ.ಯವರಿಗೆ	೫೦೦	೬೦೦
೨. ವಿಶ್ವವಿದ್ಯಾಲಯದ ವೈದ್ಯ ಪದವೀಧರರಿಗೆ	೬೦೦	೭೦೦
೩. ಸೂಲಗಿತ್ತಿಯರಿಗೆ:		
೧ನೇ ತರಗತಿ	೩೦೦ ,,	
೨ನೇ ತರಗತಿ	೨೦೦ ,,	

೪. ಹಳ್ಳಿಗಳು ಬಹಳ ಒಳ ಪ್ರಾಂತ್ಯದಲ್ಲಿದ್ದುದರಿಂದಾಗಲಿ, ಅಲ್ಲಿಯ ಹವಾಗುಣವು ಅನಾರೋಗ್ಯಕರವಾಗಿರುವುದರಿಂದಾಗಲಿ, ಯಾ ಇತರ ವಿಶೇಷ ಕಾರಣದಿಂದಾಗಲಿ, ಅಲ್ಲಿಗೆ ಯೋಗ್ಯ ವೈದ್ಯರು ಸಿಕ್ಕುವದು ಕಷ್ಟವಾದರೆ ಸ್ಥಳೀಯ ಬೋರ್ಡಿನವರು ಸರಕಾರದವರು ಸಹಾಯವಾಗಿ ಕೊಡುವ ಹಣಕ್ಕೆ ಸೇಕಡಾ ೫೦ ಮಿಂರದ ಹಣವನ್ನು ಕೂಡಿಸಿ ತಮ್ಮ ಫಂಡಿನಿಂದಲೇ ವೈದ್ಯರಿಗೆ ಕೊಡುತ್ತಾರೆ.

೫. ಸ್ಥಳೀಯ ಬೋರ್ಡಿನ ಅಧ್ಯಕ್ಷರಾಗಲಿ ಸಾರ್ವಜನಿಕ ಆರೋಗ್ಯಶಾಖೆಯ ಅಧಿಕಾರಿಗಳಾಗಲಿ ಈ ಹಳ್ಳಿ ವೈದ್ಯರಿಗೆ ಡಾಕು ಹಾಕುವ ಅಥವಾ ಸಂತೆ ಜಾತ್ರೆಗಳ ಸಮ್ಮಂಧವಾದ ಇತರ ಕೆಲಸಗಳನ್ನು ನೇಮಿಸಿದರೆ ಅವರಿಗೆ ಜಿಲ್ಲಾ ಬೋರ್ಡಿನವರು ಅದಕ್ಕಾಗಿ ಯೋಗ್ಯ ಪ್ರತಿಫಲವನ್ನು ಕೊಡುತ್ತಾರೆ. ಹಳ್ಳಿ ವೈದ್ಯರು ತಮಗೆ ನಿತ್ಯದ ಕೆಲಸವಿಲ್ಲದ ಸಮಯದಲ್ಲೆಲ್ಲಾ ಸಾರ್ವಜನಿಕ ಆರೋಗ್ಯ ಸಮ್ಮಂಧದ ಕೆಲಸಗಳನ್ನು ಮಾಡುವದು ಸರಿಯಾದ್ದರಿಂದ,—ಪ್ರತಿ ಜಿಲ್ಲೆಯಲ್ಲಿ ಯಾವದಾದರೆರಡು ಗ್ರಾಮ ಔಷಧಾಲಯಗಳ ವೈದ್ಯರನ್ನು ಸಾರ್ವಜನಿಕ ಆರೋಗ್ಯ ಸಮ್ಮಂಧದ ಕೆಲಸಕ್ಕೆ ನೇಮಿಸುವ ಅಧಿಕಾರವನ್ನು ಸರಕಾರದವರು ಜಿಲ್ಲಾ ಬೋರ್ಡಿನವರಿಗೆ ಕೊಟ್ಟಿರುತ್ತಾರೆ. ಸ್ಥಳೀಯ ಬೋರ್ಡಿನ ಫಂಡಿನಿಂದ ಈ ಕೆಲಸದ ಬಗ್ಗೆ ವೈದ್ಯರಿಗೆ ಒಟ್ಟಾರೆ ತಿಂಗಳಿಗೆ ೧೫ ರೂಪಾಯಿಯ ವೇತನವನ್ನು ಕೊಡುತ್ತಾರೆ. ಈ ಯೋಜನೆಯು ಈಗ ಪರೀಕ್ಷಾವಸ್ಥೆಯಲ್ಲಿದೆ. ಈ ಜಿಲ್ಲೆಯಲ್ಲಿ, ಕಾಪು ಗ್ರಾಮದ ವೈದ್ಯರನ್ನು ಸಾರ್ವಜನಿಕ ಕೆಲಸಕ್ಕೆ ನೇಮಕ ಮಾಡಿದ್ದಾರೆ.

೬. ಗ್ರಾಮ ಔಷಧಾಲಯಗಳಲ್ಲಿರುವ ವೈದ್ಯರನ್ನು ಪ್ರೋತ್ಸಾಹಿಸುವ ಉದ್ದಿಶ್ಯ, ಲೋಕಲ್ ಫಂಡ್ ಔಷಧಾಲಯಗಳಲ್ಲಿ ಸಬ್ ಅಸಿಸ್ಟಾಂಟ ಸರ್ಜನರ ಕೆಲಸವು ಖಾಲಿ ಬಿದ್ದಾಗ ಅದಕ್ಕೆ ಅವರನ್ನು ಮೊಕ್ತಾರಿ ಮಾಡುವ ಕುರಿತು ಸ್ಥಳೀಯ ಬೋರ್ಡಿನವರು ಮನಸ್ಸು ಕೊಡಬೇಕಾಗಿ ಸರಕಾರದವರು ಅವರಿಗೆ ಸೂಚಿಸಿದ್ದಾರೆ.

೭. ಈಗ ಒಟ್ಟಾರೆ ಸರಕಾರದವರು ದ್ರವ್ಯಸಹಾಯ ಮಾಡುವ ೪೦೭ ಔಷಧಾಲಯಗಳೂ ಆಯಾಯ ಜಿಲ್ಲಾ ಬೋರ್ಡಿನವರು ಸಹಾಯ ಮಾಡುವ ೬೫ ಔಷಧಾಲಯಗಳೂ ಇರುತ್ತವೆ. ೧೯೫೦-೫೧ ಆಗಾಗಲಾಯ್ತು ಐದು ವರ್ಷಗಳಲ್ಲಿ ಗ್ರಾಮ ವೈದ್ಯರಿಗೂ ಸೂಲಗಿತ್ತಿಯರಿಗೂ ದ್ರವ್ಯಸಹಾಯ ಮಾಡುವ ಬಗ್ಗೆ ಸರಕಾರದವರು ತಮ್ಮ ವರ್ಷಾವಧಿ ಆಯವ್ಯಯ ಲೆಕ್ಕಗಳಲ್ಲಿ ಕಾಣಿಸಿದ ಖರ್ಚು ಸಾಧಾರಣ ಈ ಕೆಳಗೆ ಕೊಟ್ಟಂತಿರುತ್ತದೆ:—

	ರೂಪಾಯಿ
೧೯೪೦—೪೧	೨,೪೬,೫೦೦
೧೯೪೧—೪೨	೨,೪೨,೨೦೦
೧೯೪೨—೪೩	೨,೯೪,೬೦೦
೧೯೪೩—೪೪	೨,೮೯,೦೦೦
೧೯೪೪—೪೫	೨,೮೯,೦೦೦

ಹೀಗೆ ಸ್ಥಾಪಿಸಿದ ಗ್ರಾಮ ಔಷಧಾಲಯಗಳ ಪೈಕಿ ಅನೇಕ ಔಷಧಾಲಯಗಳಲ್ಲಿ ಚೆನ್ನಾಗಿ ಕೆಲಸ ನಡಿಯುತ್ತಿದೆ. ಔಷಧಕ್ಕಾಗಿ ಬರುವ ಜನರ ಸಂಖ್ಯೆಯು ಹೆಚ್ಚಿರುವ ಔಷಧಾಲಯಗಳಲ್ಲೆಲ್ಲಾ ಅಗತ್ಯವಿರುವ ನೌಕರರನ್ನೂ ಕಂಪೌಂಡರರನ್ನೂ (ಔಷಧ ವಿ-ಶ್ರ ಮಾಡುವವರು) ಸ್ಥಳೀಯ ಬೋರ್ಡಿನವರು ಮೊಕ್ತಾರಿ ಮಾಡಿರುತ್ತಾರೆ. ಕ್ರಮ - ಪ್ರಕಾರ ನಡೆದು ಜನರು ಔಷಧಕ್ಕಾಗಿ ದಿನೇ ದಿನೇ ಹೆಚ್ಚು ಹೆಚ್ಚಾಗಿ ಬರುತ್ತಿರುವ ಕಡೆಗಳಲ್ಲಿ ಗ್ರಾಮ ಔಷಧಾಲಯಗಳ ಬದಲಾಗಿ ಸರಿಯಾದ ಚಿಕಿತ್ಸಾಕ್ರಮದ ಔಷಧಾಲಯಗಳನ್ನ ಇಟ್ಟಿರುತ್ತಾರೆ.

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು.)



ಸುಂದರವಾದ ವಾಚುಗಳು ಮತ್ತು ಸಂಪೂರ್ಣ ವಿಶ್ವಾಸಾರ್ಹವಾದುವು

ವೆಸ್ಟ್ ಎಂಡ್ ವಾಚುಗಳು ಸುಂದರವಾದ ನೂರಾರು ಮಾದರಿಗಳಲ್ಲಿ ತೇಖರಿಸಲ್ಪಟ್ಟಿದ್ದು, ಎಲ್ಲವೂ ಉತ್ತಮ ಸಂಪೂರ್ಣ ನಿಖರಕಾಲ ಸೂಚಿಗಳಾಗಿವೆ. ಇವು ಅತ್ಯಂತ ಉತ್ಕೃಷ್ಟ ಸಾಧನಗಳಿಂದ ಬಹು ಬಲವಾಗಿ ನಿರ್ಮಿಸಲ್ಪಟ್ಟಿದ್ದು ಅನೇಕ ವರ್ಷಗಳ ಸರ್ವೋತ್ತಮವಾದ ಸೇವೆಯನ್ನು ಕೊಡುವುವು. ಪ್ರಾಮಾಣಿಕ ಬೆಲೆಗಾಗಿ ನೀವು **ವೆಸ್ಟ್ ಎಂಡ್** ವಾಚಿಗಿಂತಲೂ ಉತ್ತಮವಾದುದನ್ನು ಪಡೆಯಲಾರಿರಿ. ನೆನಪಿನಲ್ಲಿಡಿರಿ, ವಾಚೆಂಬುದು ವೈಜ್ಞಾನಿಕ ಉಪಕರಣವೆಂದು ಮತ್ತು ನಿಮಗೆ ನೋಡಲು ಮಾತ್ರವಲ್ಲ ನಿಜವಾಗಿಯೂ ಉತ್ತಮವಾದ ಸಾಹಿತ್ಯ ಬೇಕಾದರೆ, ನೀವು ನಮ್ಮಂತಹ ಪ್ರಾಶಸ್ತ್ಯವನ್ನು ಪಡೆದಿರುವ ಸಂಸ್ಥೆಯಿಂದಲೇ ಕೊಂಡುಕೊಳ್ಳಬೇಕೆಂದು.

ಮಿನಿಯೇಚರ್ "ಎ-2" (ಮೇಲ್ಭಾಗ)

18-ಕ್ಯಾರಟ್ ಸೊಲಿಡ್ ಬಂಗಾರದ್ದು ರೂ. 70

ಮಿನಿಯೇಚರ್ "ಯು-3" (ಕೆಳಭಾಗ)

18-ಕ್ಯಾರಟ್ ಸೊಲಿಡ್ ಬಂಗಾರದ್ದು ರೂ.85

ನಮ್ಮ ದೊಡ್ಡ **ಉಚಿತ** ಕ್ಯಾಟಲಾಗಿಗೆ ಬರೆಯಿರಿ

ವೆಸ್ಟ್ ಎಂಡ್ ವಾಚ್ ಕೊ., ಬೊಂಬಯಿ & ಕಲ್ಕತ್ತಾ.

WEST END WATCH Co

BOMBAY 86 CALCUTTA

ನಕಲಿ ಪದಾರ್ಥಗಳ ಕುರಿತು ಎಚ್ಚರಿಕೆ!

ಕೀ ಬ್ರಾಂಡ್ ಪನ್ನೀರು

ಕೊಳ್ಳುವಾಗ ಹೀಗೆಯೇ ಆ ಚೀಟು ಬಾಟಲಿಯ ಮೇಲೆ ಅಖಂಡವಾಗಿರುವುದೋ, ಕೀ ಬ್ರಾಂಡಿನ ವ್ಯಾಪಾರದ ಗುರುತು ಇರುವುದೋ ಎಂದು ನೋಡಿ.
ಕೀ ಬ್ರಾಂಡಿನ ಟ್ರೇಡೂ ಲೇಬಲೂ ರಿಜಿಸ್ಟ್ರಿಯಾಗಿದೆ.

ನಕಲಿ ಸಾಮುಗ್ರಿಗಳ ವಿಷಯದಲ್ಲಿ ಕಠಿನವಾಗಿ ವ್ಯವಹರಿಸಲಾದೀತು

ಉತ್ಸವಾದಿ ಸಂತೋಷಸಂಭ್ರಮಗಳ ಕಾಲದಲ್ಲಿ ಕೀ ಬ್ರಾಂಡಿನ ಪನ್ನೀರು ಉಪಯೋಗಿಸಲಾಗುತ್ತಿದೆ. ಹಾಗೂ ಮಿಠಾಯಿಗಳಿಗಾಗಿಯೂ ನೇತ್ರಬಿಂದುಗಳಾಗಿಯೂ, ಪುಡಿಯೊಡನೆ ಮುಕ್ಕಳ ಮುಖದ ಮೊಡವೆಗಳ ಮೇಲಿನ ಲೇಪಕ್ಕಾಗಿಯೂ, ಕುಡಿಯುವ ನೀರಿನೊಂದಿಗೆ ಬೆರೆಸಲಿಕ್ಕಾಗಿಯೂ, ಇನ್ನೂ ಹಲವು ಸಂದರ್ಭಗಳಲ್ಲಿಯೂ ಅದನ್ನು ಬಳಸಲಾಗುತ್ತಿವೆ. ಕಾರಣವೇನೆಂದರೆ, ಅದು ಅತ್ಯಂತ ಉತ್ಕೃಷ್ಟ ಸಾಧನಗಳುಳ್ಳ ಗುಲಾಬೀ ಹೂವುಗಳಿಂದ ಸಿದ್ಧವಾಗಿ, ಕೈಗಳು ಮುಟ್ಟದೆ ಬಾಟಲಿಗಳಲ್ಲಿ ತುಂಬಿಸಲ್ಪಡುವದೇ, ಆದುದರಿಂದ ಎಲ್ಲ ಮತದ ಜನರೂ ಅದನ್ನು ಉಪಯೋಗಿಸಬಹುದು. ಇದರ ಉತ್ಕೃಷ್ಟ ಗುಣಗಳಿಗಾಗಿ, ಬಡೋದೆಯ ಮತ್ತೂ ಸೂರತ್ತಿನ ವಸ್ತುಪ್ರದರ್ಶನಗಳಲ್ಲಿ ಬಂಗಾರದ ಮೆಡಲುಗಳೂ ಸರ್ಟಿಫಿಕೇಟುಗಳೂ ಸಿಕ್ಕಿವೆ.

ಇಲ್ಲಿನ ಎಲ್ಲ ಪ್ರಮುಖ್ಯ ಸಾಹುಕಾರರಲ್ಲಿಯೂ ದೊರಕುವುದು.

Manufacturers:—

A. S. Attarwalla & Sons,

160, Abdul Rehman Street,

BOMBAY, 3.

'ಕೀ ಬ್ರಾಂಡ್' ಪನ್ನೀರನ್ನೇ ಕೊಳ್ಳುವಂತೆ ಒತ್ತಾಯಮಾಡಿರಿ.

ಮಿನ್ನಾ ಲೋಯ್.

ಮಿನ್ನಾಳಿಗೆ ಬಾಲ್ಯದಿಂದ ತಾನೂ ಒಬ್ಬ ನಟಿಯಾಗಬೇಕೆಂಬ ಆಶೆ. ಆದರೆ ತನ್ನ ಇಚ್ಛಿತ ಆಶೆಯನ್ನು ಹೊಂದಬೇಕಾಗಿದ್ದರೆ ಆಕೆ ಅದೆಷ್ಟೋ ಕಷ್ಟತರ ದಾರಿಯನ್ನು ಸಾಗಬೇಕಾಯಿತು.

ಯಾವಾಗ ಪ್ರದೇಶದ ಹೆಲೆನಾದಲ್ಲಿ ಆಕೆಯು ಡೇವಿಡ್ ಮತ್ತು ಡೆಲ್ಲಾ ವಿಲಿಯಮ್ಸ್‌ರ ಒಬ್ಬಳೇ ಒಬ್ಬ ಮುದ್ದಿನ ಮಗಳಾಗಿ ೧೯೦೪ರಲ್ಲಿ ಜನಿಸಿದಳು. ಆಕೆಯ ತಂದೆಯು ಹೇರಳ ಆಸ್ತಿಯ ಒಡೆಯನಾಗಿದ್ದುದರಿಂದ ಆತನು ತನ್ನ ಭೂವಿಯ ಅಡಳಿತೆ ನೋಡುವುದಕ್ಕಾಗಿ ಸದಾ ಕುದುರೆಸವಾರಿ ಮಾಡುತಿದ್ದುದರಿಂದ ಈಕೆಯ ಹೆಚ್ಚಿನ ಕಾಲವು ಕುದುರೆ ಸವಾರಿಯಲ್ಲಿ, ಅದೂ ತನ್ನ ತಂದೆಯ ಬಳಿಯಲ್ಲಿ, ಕಳೆಯಿತು.

ಯಾವಾಗ ಪ್ರದೇಶದ ಏರುತಗ್ಗುಗಳಲ್ಲಿ ಸವಾರಿ ಮಾಡಿ ಆಕೆಯ ದೇಹವು ಬಲಿತು ಆರೋಗ್ಯಕರವಾದ ಸುಂದರ ಶರೀರವಾಗಿದ್ದಿತು. ಆಕೆಗೆ ಹೊರಗೆ ಆಡ್ಡಾಡುವುದೆಂದರೆ, ಆಟವಾಡುವುದೆಂದರೆ, ವ್ಯಾಯಾಮವೆಂದರೆ ಬಹಳ ಪ್ರೀತಿ. ಅಂತೂ ತನ್ನ ದೇಹವನ್ನು ಸುಂದರವಾಗಿ ಮಾಡಲು ಸದಾ ಯತ್ನಿಸುತಿದ್ದಳು. ಅದೇ ಆ ಉತ್ತಮವಾದ—ಬೆಳೆದ—ಮೈಕಟ್ಟು ಆಕೆಯ ಜೀವನದಲ್ಲಿನ ಕೀರ್ತಿಯ ಹೋರಾಟಕ್ಕೆ ಸಹಕಾರಿಯಾಯಿತು.

ದಕ್ಷಿಣ ಕೆಲಿಫೋರ್ನಿಯಾ ಪ್ರದೇಶವನ್ನು ಮೊದಲನೇ ಬಾರಿ ಕಂಡುದು ಆಕೆಯ ಏಳನೇ ವರ್ಷ ಪ್ರಾಯದಲ್ಲಿ,-ಆಕೆಯ ತಂದೆತಾಯಂದಿರು ಆ ಪ್ರದೇಶವನ್ನು ನೋಡಿಬರಲೆಂದು ಹೋದಾಗ. ಹಾಗೆಯೇ ಅವರು ಲಾಸ್ ಏಂಜಲೆಸ್ ಎಂಬ ಸುಂದರ ಪ್ರದೇಶವನ್ನು ಕಂಡರು. ಅನಂತರದಲ್ಲಿ ಪ್ರತಿವರ್ಷವೂ ಅವರು ತಮ್ಮ ಚಳಿಗಾಲವನ್ನು ಅಲ್ಲೇ ಕಳೆಯತೊಡಗಿದರು.

ಕೆಲಿಫೋರ್ನಿಯಾ ಪ್ರದೇಶದಲ್ಲೇ ಇದ್ದು ಆಕೆಯು (ಮಿನ್ನಾ) 'ಸಂತಾ ಮೊನಿಕಾ ಗ್ರಾಮರ್ ಸ್ಕೂಲ'ನ್ನು ಸೇರಿಕೊಂಡಳು. ಆ ಬಳಿಕ 'ವೆಸ್ಟ್ಲೇಕ್' ಹುಡುಗಿಯರ ಶಾಲೆಯನ್ನು ಸೇರಿದಳು. ಚಿಕ್ಕದಾಗಿರುವಾಗಲೇ ಆಕೆಗೆ ತಾನೊಬ್ಬ ನರ್ತಕಿ ಅಥವಾ ನಟಿ ಆಗಬೇಕೆಂಬ ಆಶೆ ಬಲವತ್ತರವಾಗಿತ್ತು. ಆದರಿಂದ ಆಕೆಯ ಪ್ರತಿಯೊಂದು ಕಲಿಯುವಿಕೆಯೂ ಇರುವಿಕೆಯೂ ಮುಂದಿನ ಅವಳ ಆ ಉಚ್ಚ ಆಶೆಯನ್ನು ಸೂಚಿಸುವಂತಿದ್ದಿತು. ತನ್ನ ಮುಂದಿನ ಜೀವನದಲ್ಲಿ ಸಹಕಾರಿಯಾಗಬಲ್ಲ ವಿಷಯಗಳನ್ನು ಆಕೆ ಸಾಹಿತ್ಯದಿಂದಲೋ, ಚರಿತ್ರೆಯಿಂದಲೋ ಹೆಕ್ಕಿ ಓದಿ ಮಂದಟ್ಟುಮಾಡಿಕೊಂಡಳು.

ಆಕೆಗೆ ಹದಿನಾರು ವರ್ಷ ಪ್ರಾಯವಾದಾಗ ಆದೊಂದು ಚಿಕ್ಕ ಶಾಲೆಯಲ್ಲಿ ನರ್ತನ ಅಧ್ಯಾಪಿಕೆಯಾಗಿ ಕೆಲಸ ದೊರೆಯಿತು. ಅದು ಮೆಟ್ರೋ-ಗೋಲ್ಡ್ವಿನ್-ಮೇಯರ್ ಚಲನಚಿತ್ರ ಸಂಸ್ಥೆಯಿಂದ ಸುಮಾರು ನಾಲ್ಕೂರು ಅಡಿಗಳಂತರದಲ್ಲಿ ಆಕೆ ಕಲಿಸುತ್ತಿದ್ದ ಆ ಈಯತ್ತೆಯಲ್ಲಿ ಸುಮಾರು ೫೦ ಮಕ್ಕಳು ಇದ್ದರು. ಆಗ ಆಕೆಗೆ ತಿಂಗಳೊಂದರ ಸುಮಾರು ೨೫ ಡಾಲರುಗಳ ಸಂಬಳ ಬರುತಿದ್ದಿತು.

ಈಗ ಆಕೆಯು ಇಂದಿನಂತೆ ಆರ ಗಣನೆಗೂ ಬಿದ್ದಿರಲಿಲ್ಲ. ನರ್ತನ ಅಧ್ಯಾಪಿಕೆಯಾಗಿ ತನ್ನ ಜೀವನವನ್ನು ಸುಗಮವಾಗಿ ಸಾಗಿಸುವುದೇ ಧ್ಯೇಯವಾಗಿದ್ದರೂ ತಾನೊಮ್ಮೆ ಚಲನಚಿತ್ರಪ್ರಪಂಚದಲ್ಲಿ ಕಾಲಿಡಬೇಕೆಂಬ ಆಶೆ ಅವಳಿಗೆ ಇದ್ದುದರಿಂದ ಆಗಾಗ ಬಳಿಯಲ್ಲಿದ್ದ ಚಲನಚಿತ್ರಸಂಸ್ಥೆಗೆ ಹೋಗಿ ಯಾರಿಗೂ ತಿಳಿಯದಂತೆ ಅಲ್ಲಿನ ವಿಷಯವಿಶೇಷತೆಗಳನ್ನು ನೋಡಿಕೊಂಡು ಬರುತಿದ್ದಳು.

ಅದೊಮ್ಮೆ ಆಕೆಗೆ ಆ ಸುಯೋಗದ ಸಂಭವನವೊದಗಿತು. ಆಕೆಯನ್ನು ಸಂಸ್ಥೆಯವರು ಆದರಿಸಿದರಾದರೂ ಅದು ಚಿತ್ರದಲ್ಲಿ ಅಭಿನಯಿಸುವುದಕ್ಕಾಗಿರಲಿಲ್ಲ. ಬದಲು ಉಡಿಗೆಯೊಂದನ್ನುಟ್ಟು ಅದು ಹೇಗೆ ಕಾಣಿಸುವುದೋ ನೋಡುವುದಕ್ಕಾಗಿ ಈಕೆ ಆ ತಯಾರಿತವಾದ ಉಡಿಗೆಯನ್ನುಟ್ಟು 'ಕೆಮೆರಾ'ದ ಮುಂದೆ ನಿಲ್ಲಬೇಕಾಯಿತು. ಅದಕ್ಕೆ ಬಣ್ಣಗಳನ್ನೇನೂ ಹಾಕಿಕೊಳ್ಳಬೇಕಾಗಿರಲಿಲ್ಲ. ಬದಲು ಬರೀ ಉಡಿಗೆಯುಟ್ಟುಕೊಂಡರೆ ತೀರಿತು. ಆ ಉಡಿಗೆಯನ್ನು 'ಬೆನ್ ಹೂರ್' ಎಂಬ ಚಿತ್ರದಲ್ಲಿ

ಸಿನೆಮಾ ಪುಟ

'ಕೆಥ್ಲೀನ್ ಬರ್ಕ್' ಎಂಬ ನಟಿಯು ಧರಿಸಬೇಕಾಗಿತ್ತು. ಅದು ಧರಿಸಲ್ಪಟ್ಟಾಗ ಹೇಗೆ ತೋರುವುದೋ ನೋಡಲು ಈಕೆ ಧರಿಸಿಕೊಂಡು 'ಕೆಮೆರಾ'ವನ್ನು ನೋಡಬೇಕಾಯಿತು.

ಅನಂತರ ಅದೇ 'ಬೆನ್ ಹೂರ್' ಚಿತ್ರದ ನಿರ್ದೇಶಕರಾದ 'ಕಿಸ್ಟೀ ಕೆಬೇನಿ'ಯವರು ಈಕೆಯನ್ನು ಸಂಧಿಸಿ ಎಲ್ಲಾದರೂ ಚಲನಚಿತ್ರ ಸಂಸ್ಥೆಯನ್ನು ಸೇರಿರುವಳೋ ಎಂದು ವಿಚಾರಿಸಿದರು. ಮಿನ್ನಾ ಲೋಯಳು 'ಇಲ್ಲ' ಎಂಬ ಉತ್ತರವನ್ನಿತ್ತಳು. ನಿರ್ದೇಶಕರು ಆ ಚಿತ್ರದಲ್ಲಿ 'ಮೆಡೋನಾ' ಪಾತ್ರವನ್ನು ವಹಿಸಿಕೊಳ್ಳಬೇಕೆಂದು ಆ ಪಾತ್ರವನ್ನು ಆಕೆಗೆ ಇತ್ತರಾದರೂ ಹಾಗೆ ಇತ್ತ ಮೂರು ತಾಸುಗಳಲ್ಲೇ ಆ ಪಾತ್ರವನ್ನು ಆಕೆಯಿಂದ ತಪ್ಪಿಸಿ 'ಬೆಟ್ಟೀ ಬ್ರೋನ್ಸನ್'ಳಿಗೆ ಇತ್ತರು.

ಬೇಸರದಿಂದ 'ಮಿನ್ನಾ ಲೋಯ್'ಳು ತಾನೊಬ್ಬ ಪ್ರಖ್ಯಾತ ನಟಿಯಾಗಿಯೇ ಈ ಸಂಸ್ಥೆಯನ್ನು ಪ್ರವೇಶಿಸುವೆನೆಂದುಕೊಂಡು ಮೆಟ್ರೋ-ಗೋಲ್ಡ್ವಿನ್-ಮೇಯರ್ ಸಂಸ್ಥೆಯನ್ನು ಬಿಟ್ಟು ಹೊರಟುಬಿಟ್ಟಳು.

ಹಾಗೆಯೇ ಆಕೆಯನ್ನು ಆಗಿನ ಸುಪ್ರಖ್ಯಾತ ನಟನಾದ 'ರುಡಾಲ್ಫೊ ವಲೆಂಟಿನೋ'ನ ಹೆಂಡತಿಯಾದ, ಆಗ ಚಿತ್ರತಯಾರಕಳೂ ಆಗಿದ್ದ 'ನಟಾಜಾ ರಂಬೋನಾ' ಎಂಬವಳು ತನ್ನ 'ವೋಟ್ ಪ್ರೈಸ್ ಬ್ಯೂಟಿ' ಎಂಬ ಚಿತ್ರದಲ್ಲಿ ಒಂದು ಸಣ್ಣ ಪಾತ್ರವನ್ನಭಿನಯಿಸುವುದಕ್ಕೆ ಕರೆದಳು. ಅನಂತರ ಆಕೆ ಚೈನೀಸ್, ಮಲಯನ್, ಹಿಂದು, ಜಪಾನೀಸ್, ಪೋಲಿನೇಸಿಯನ್ ಮತ್ತು ಇಂಡಿಯನ್ (ರೆಡ್ ಇಂಡಿಯನ್) ಪಾತ್ರಗಳನ್ನು ಅಭಿನಯಿಸಿ ಪ್ರಖ್ಯಾತಳಾದಳು. ಪಾತ್ರವು ಸಣ್ಣದಿರಲಿ ದೊಡ್ಡದಿರಲಿ ಅದನ್ನು ಚೆನ್ನಾಗಿ ಅಭಿನಯಿಸಿ ತನ್ನ ಅಭಿನಯ ಕಲೆಯನ್ನು ಬೆಳೆಸಿ ಬೆಳಗಿಸಿಕೊಂಡಳು.

ಆಕೆಯು ಆಯಾಯೆ ದೇಶಗಳ ಕಟ್ಟು ಕಟ್ಟಳೆಗಳ ಕಥಾವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರೂ ಕೊನೆಗೆ ಅಂತಹ ದೇಶೀಯ ಚಿತ್ರಗಳಲ್ಲಿ ಅಭಿನಯಿಸುವುದು ಆಕೆಗೇ ರುಚಿಸಲಿಲ್ಲ. ಆದರೆ ಪುನಹ ಆಕೆಯು 'ಟ್ರಾನ್ಸಲ್ಲಾಂಟಿಕ್' ಚಿತ್ರದಲ್ಲಿ ಅಭಿನಯಿಸಬೇಕೆಂದು ನಿರ್ದೇಶಕರಾದ ವಿಲ್ಲಿಯಮ್ ಕೆ. ಹೊವಾರ್ಡರು ಕೇಳಿದ್ದರಿಂದ ಅದರಲ್ಲಿ ತನ್ನ ಅಭಿನಯಕಲಾಕೌಶಲವನ್ನು ತೋರಿದಳು.

ಅನಂತರ ಕೆಲಕಾಲ ಚಿತ್ರಪ್ರಪಂಚದಿಂದ-ಆ ಬಣ್ಣದ ಹೊಲಸಿಂದ-ಬೇರೆಯಾಗಿರಬೇಕೆಂದು ಮನಸ್ಸು ಮಾಡಿದಳು. ಆದರೆ ನಿರ್ದೇಶಕರು ಅವಳನ್ನು ಅಂತಾಗಗೊಡಲಿಲ್ಲ. ಪುನಹ ಇನ್ನೊಂದು ದೇಶೀಯ ಪಾತ್ರ ಅಭಿನಯಿಸಲು ಕೇಳಿಕೊಂಡರು. ಮಿನ್ನಾ ಲೋಯಳು ಬೇಸರದಿಂದ ಒಪ್ಪಿಕೊಂಡಳು.

ಅನಂತರ ಅವಳ ಜೀವನದ ಬೆಳಕು ಹೊರ ಹೊಮ್ಮಿತು. ಮೆಟ್ರೋ ಕಂಪೆನಿಯನ್ನು ಪ್ರಖ್ಯಾತ ನಟಿಯಾಗಿಯೇ ಸೇರಿಕೊಂಡಳು. ಅಂತೆಯೇ 'ಎಮ್ಮಾ' 'ದಿ ವೆಟ್ ಪೆರಡೆ' ಮತ್ತು 'ಸಿವ್ ಮೋರಲ್ಸ್ ಫೊರ್ ಓಲ್ಡ್' ಚಿತ್ರಗಳಲ್ಲಿ ಅಭಿನಯಿಸಿದಳು.

ಅನಂತರದಲ್ಲಿ 'ಮಾಸ್ಕ್ ಒಫ್ ಫ್ಲು ಮಂಚೂ' ಚಿತ್ರದಲ್ಲಿ ಪ್ರಖ್ಯಾತ ಭೀಕರ ನಟನಾದ ಬೋರಿಸ್ ಕಾರ್ಲೋಫ್‌ನೊಡನೆ ಅಭಿನಯಿಸಿದಳು. ಇತ್ತೀತ್ತಣ ಅವಳು ಅಭಿನಯಿಸಿದ ಚಿತ್ರಗಳೆಂದರೆ 'ಪೆಂಟ್ ಹೌಸ್', 'ಪ್ರೈಸ್ ಫೈಟರ್ ಎಂಡ್ ದಿ ಲೇಡಿ', 'ಮೆನ್ ಇನ್ ವೈಟ್', 'ಮನ್ ಹತ್ತನ್ ಮೆಲೋಡ್ರಮಾ', 'ದಿ ತಿನ್ ಮೇನ್' ಚಿತ್ರಗಳು. ಅವಳ ಇತ್ತೀಚಿನ ಪ್ರಖ್ಯಾತ ಚಿತ್ರವು 'ಸ್ಟೇಂಬೂಲ್ ಕ್ವೆಸ್ಟ್' ಎಂಬುದು.

ಅವಳ ನಿತ್ಯಜೀವನದ ಸನ್ನಿತ್ರರೆಲ್ಲಾ ಚಿತ್ರಪ್ರಪಂಚಕ್ಕೆ ಸಂಬಂಧಿಸದಿರುವವರೇ; ಅವಳ ನೈಜಜೀವನವೇ ಬೇರೆ, ಚಿತ್ರದಲ್ಲಿನ ಜೀವನವೇ ಬೇರೆ. ಎರಡಕ್ಕೂ ಏನೊಂದೂ ಸಂಬಂಧವಿಲ್ಲ.

(All rights reserved)

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ
ಮಕ್ಕಳನ್ನು ಕಾಪಾಡಿರಿ
ಬಾಲಸಂಜೀವಿನಿಯನ್ನು ಉಪಯೋಗಿಸಿರಿ
(ರಿಜಿಸ್ಟರ್ಡ್)
ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ
ವಿಜಯನಗರಂ ಔಷಧ.
ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವಾಗದೆ ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.
ಪಿಳ್ಳಾ ಪಾಪಯ್ಯ ಪಾತ್ರುಡು ಮತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಬ್ರೋಡೀಸ್ ರೋಡ್, ಮೈಲಾಪುರ್, :: ಮದ್ರಾಸ
(ರಾಮಕೃಷ್ಣ ಮಠದ ಎದುರು).

॥ ಶ್ರೀ ರಾಜರಾಜೇಶ್ವರೀ ಪ್ರಸೀದ ॥
ಸಾಂಘಿತ್ಯ ಸಾಮ್ರಾಜ್ಯ ನಾಟಕ ಮಂಡಲಿ, ಮೈಸೂರು
ಮಂಗಳೂರು ಮೈದಾನದಲ್ಲಿ ನೂತನವಾಗಿ ಕಟ್ಟಿರುವ
ರಾಜರಾಜೇಶ್ವರೀ ಥಿಯೇಟರಿನಲ್ಲಿ
ತಾ. 12-1-37 ಮಂಗಳವಾರ ರಾತ್ರಿ 9-30 ಗಂಟೆಗೆ
"ಭೂಕೈಲಾಸ"
ತಾ. 14-1-37 ಗುರುವಾರ ರಾತ್ರಿ 9-30 ಗಂಟೆಗೆ
"ವಿರಾಟಪರ್ವ"
ಎಂಬ ನಾಟಕಗಳನ್ನು ಪ್ರದರ್ಶಿಸುವರು.
ಮಹಾಜನರು ಪ್ರೋತ್ಸಾಹಿಸಬೇಕಾಗಿ ಸವಿನಯ ಪ್ರಾರ್ಥನೆ.
ಯಂ. ವಿ. ಸುಬ್ಬಯ್ಯ ನಾಯಡು,
ಆರ್. ನಾಗೇಂದ್ರ ರಾವ್, } ಪ್ರೊಪ್ರೈಟರ್ಸ್

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ!
ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳ್ತೆಯೊಳಗಿರುವ
'ಇಡ್ಯ ವಿದ್ಯಾದಾಯಿನೀ ಶಾಲೆ'
ಮತ್ತು ಹೊಸದಾಗಿ ಸ್ಥಾಪಿಸಲಿರುವ
'ಅನಾಥಾಲಯ'
ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ
'ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ'
ತೆಗೆಯುವ ತಾರೀಕು: 17—1—1937. ಸೋಡ್ತಿಯು ಮೊಬಲಗು ರೂ. 50,000
1ನೇ ಇನಾಂ ರೂ. 8000. 2ನೇ ಇನಾಂ ರೂ. 2000.
ಜುಮ್ಲಾ ಇನಾಂಗಳು 1000. ಇನಾಂಗಳ ಜುಮ್ಲಾ ಮೌಲ್ಯ ರೂ. 20,125.
— ಟಿಕೇಟು 1ರ ನಾಲ್ಕಾಣೆ ಮಾತ್ರ —
20 ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ. 4-0-0, 2 ಪುಸ್ತಕಗಳ ಬೆಲೆ ರೂ. 7-8-0.
ಸ್ಪೆಶಲ್ ಬಹುಮಾನಗಳೂ ಇವೆ.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—
ಮೆನೇಜರ್, ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

ಉಡುಪಿ ಶ್ರೀ ಕೃಷ್ಣ ಭವನ, ಮಂಗಳೂರು.
ಹೆಡ್ ಆಫೀಸು:—ಮೌಂಟ್ ರೋಡ್, ಮದ್ರಾಸ್
ಬ್ರಾಂಚ್:—ಗಣಪತಿ ಹೈಸ್ಕೂಲಿನ ಸವಿೂಪ
ಅನುಭವಸ್ಥ ಬ್ರಾಹ್ಮಣರಿಂದ ವಿಧಿಯುಕ್ತವಾಗಿ ಸಿದ್ಧಗೊಳಿಸಲ್ಪಡುವ ಉತ್ತಮವಾದ
ತಿಂಡಿತಿನಸು ಮತ್ತು ಭೋಜನ!
ವಿದ್ಯುದ್ದೀಪಗಳುಳ್ಳ ಚೊಕ್ಕಟ ಕೊಠಡಿಗಳು. ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು
ಯಾತ್ರಿಕರಿಗೂ ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸಗೃಹ!
ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ಪೂರ್ಣ ತೃಪ್ತಿಗೊಳಿಸುವಂಥವುಗಳೇ
ಪ್ರೊಪ್ರೈಟರ್:—ಕೆ. ಕೃಷ್ಣ

ರುಶ್ಯದಲ್ಲಿಯ ಸ್ತ್ರೀಯರ ಸ್ವಾತಂತ್ರ್ಯ.

ಹೆಂಗಸರಿಗಾಗಿ

ಗಂಡಸರಿಗೂ ಹೆಂಗಸರಿಗೂ ಯಾವ ತರದ ಭೇದಗಳೂ ಇಲ್ಲದೆ ಅಧಿಕಾರವಿರುವುದು ಈಗ ರುಶ್ಯದಲ್ಲಿ ಮಾತ್ರ. ಹೆಂಗಸರು ಸಾಮಾಜಿಕ ಯಾ ರಾಜಕೀಯ ನಿರ್ಬಂಧನೆಗಳಿಲ್ಲದೆ ತಮ್ಮ ಸ್ವಂತ ವಿಚಾರದಿಂದ ನಡಕೊಳ್ಳಲಿಕ್ಕೆ ಅಲ್ಲಿ ಎಲ್ಲಾ ಅನುಕೂಲತೆಗಳೂ ಇವೆ. ಕೇಂದ್ರ ಸರಕಾರದ ಸೈನ್ಯ, ವಿಮಾನ, ನೌಕಾಪಡೆಗಳಲ್ಲಿಯೂ ಸ್ತ್ರೀಯರು ದೊಡ್ಡ ದೊಡ್ಡ ಅಧಿಕಾರ ಸ್ಥಾನಗಳಲ್ಲಿರುವುದನ್ನು ನಾವು ಅಲ್ಲಿ ನೋಡಬಹುದು. ಪ್ರಾಂತಿಕ ಸರಕಾರವಿನ್ನು ನಡೆಸುವ ಸೋವಿಯಟುಗಳೆಂಬ ಕೆಲಸಗಾರರ ಸಂಘಗಳಲ್ಲಿಯೂ ಸ್ತ್ರೀಯರು ಜವಾಬ್ದಾರಿಯ ಅನೇಕ ಕೆಲಸಗಳನ್ನು ವಹಿಸಿಕೊಂಡು ಚಾತುರ್ಯದಿಂದ ನಡೆಸುತ್ತಾರೆ. ಈ ತರದ ಸ್ವಾತಂತ್ರ್ಯವು ಸ್ತ್ರೀಯರಿಗೆ ಇತರ ಯಾವ ರಾಷ್ಟ್ರದಲ್ಲಿಯೂ ಇರುವುದಿಲ್ಲ.

ರಾಜಕೀಯ ವಿಷಯಗಳಲ್ಲಿ ಗಂಡಸರಂತೆಯೇ ಹೆಂಗಸರಿಗೆ ಮತವೀಯುವ, ಯಾ ಪ್ರಜಾ ಪ್ರತಿನಿಧಿಗಳಾಗುವ ಸಂದರ್ಭವಿರುವ ರಾಷ್ಟ್ರಗಳು ಅನೇಕವಿದ್ದರೂ, ಅಲ್ಲಿ ಸ್ತ್ರೀಯರಿಗೆ ಸಾಮಾಜಿಕ ವ ಇತರ ನಿರ್ಬಂಧನೆಗಳು ತಪ್ಪುವುದಿಲ್ಲ. ಮಹುವೆ, ಮನೆವಾರ್ತೆ ಕೆಲಸಗಳಲ್ಲಿ ಪುರುಷರಿಗಿರುವ ಸ್ವಾತಂತ್ರ್ಯವು ಸ್ತ್ರೀಯರಿಗೆ ಇಲ್ಲದ್ದರಿಂದಲೂ, ಪುರುಷನ ಅನುಚರಳಾಗಿರುವುದೇ ಸ್ತ್ರೀಯರ ಧರ್ಮವೆಂದು ಸಮಾಜನಿಯಮಗಳಿರುವುದರಿಂದಲೂ, ಸ್ತ್ರೀಯರಿಗೆ ಖಿಜವಾದ ಸಂಪೂರ್ಣ ಸ್ವಾತಂತ್ರ್ಯವು ಇತರ ರಾಷ್ಟ್ರಗಳಲ್ಲಿ ಈ ತನಕ ಲಭಿಸಿದ್ದಿಲ್ಲ. ಮಕ್ಕಳನ್ನು ಹಡೆಯುವ ಕೆಲಸವನ್ನು ಪ್ರಕೃತಿಯು ಸ್ತ್ರೀಜಾತಿಗೆ ಮಾತ್ರ ನಿಯಮಿಸಿರುವುದರಿಂದ, ಮಕ್ಕಳ ಆರೈಕೆ, ಪೋಷಣೆಗಳೂ ಸ್ತ್ರೀಯರ ಭಾಗಕ್ಕೇ ಬಿದ್ದು, ಅವರನ್ನು ಸ್ವತಂತ್ರರಾಗಿರಬಿಡದೆ, ಸೂಕ್ಷ್ಮರೀತಿಯ ಬಂಧನದಿಂದ ಬಂಧಿಸುತ್ತಿವೆ. ರುಶ್ಯದಲ್ಲಿ ಈ ತರದ ಅಭ್ಯಂತರಗಳಿಂದ ಸ್ತ್ರೀಯರನ್ನು ರಕ್ಷಿಸಲಿಕ್ಕೆ ಅನೇಕ ಏರ್ಪಾಡುಗಳಿವೆ.

ಮದುವೆಯ ಕುರಿತು ಅಲ್ಲಿ ಸ್ತ್ರೀಯರಿಗೆ ಯಾವ ನಿಬಂಧನೆಗಳೂ ಇಲ್ಲ. ಅವರು ಸಂತೋಷವಿದ್ದಿರೆ ಅವರಿಗೆ ಯುಕ್ತಕಂಡ ಪುರುಷರೊಡನೆ ವಿವಾಹವಿಲ್ಲದೆ ಬೆರ್ಕು, ಹಾಗೆಯೇ ಇದ್ದುಕೊಂಡಿರಲೂ ಬಹುದು. ಯಾವ ಪ್ರಕಾರ ಅವರು ವರ್ತಿಸಿದರೂ ಅವಳನ್ನು ಸಮಾಜವು ತುಚ್ಛೀಕರಿಸುವುದಾಗಲೀ, ಅವಳ ವರ್ತನೆಯಿಂದ ಅವಳಿಗೆ ಯಾವ ತರದ ತೊಂದರೆಗಳುಂಟಾಗುವುದಾಗಲಿ ಇಲ್ಲ. ರುಶ್ಯದಲ್ಲಿ ಖಾಸಗಿ ಮಾತ್ರ ಇಲ್ಲದ್ದರಿಂದಲೂ, ಮಕ್ಕಳ ಸಂರಕ್ಷಣೆಯ ಚಿಂತೆಯು ಸರಕಾರದ ಮೇಲೇ ಇರುವುದರಿಂದಲೂ, ಪುರುಷಸಂಪರ್ಕದಿಂದ ಸ್ತ್ರೀಯರಿಗೆ ಅಲ್ಲಿ ಯಾವ ಲಾಭವೂ ಇಲ್ಲ. ಹೀಗಾದ್ದರಿಂದ ಅಲ್ಲಿ ಸ್ತ್ರೀಯರಿಗೆ ಪುರುಷರ ಆಧೀನತೆಯಲ್ಲಿರುವ ಅವಶ್ಯವೂ ಇಲ್ಲ, ಕಳ್ಳಾಟಿಕೆಯಿಂದ ದೇಹವಿಕ್ರಯ ಮಾಡಿ ಜೀವಿಸುವ ಅವಶ್ಯವೂ ಇಲ್ಲ. ಪರಸ್ಪರ ಮೋಹವೇ ವಿವಾಹಕ್ಕೆ ಕಾರಣವಾಗಿರುವುದರಿಂದಲೂ, ಪರಸ್ಪರ ಮೋಹ ತಪ್ಪಿದೊಡನೆ ವಿವಾಹವಿಚ್ಛೇದವನ್ನು ಸುಲಭದಿಂದ ಮಾಡಿಕೊಳ್ಳಬಹುದಾದ್ದರಿಂದಲೂ, ಅಲ್ಲಿ ಇಷ್ಟು ಸ್ವಾತಂತ್ರ್ಯವಿದ್ದರೂ ವ್ಯಭಿಚಾರದ ಮಾತೇ ಇರುವುದಿಲ್ಲ. ದುಡ್ಡಿನ ಯಾ ಕೂಳಿನ ಆಶೆಗಾಗಿ ಅಸಹ್ಯ ಮುದುಕನೊಡನೆ ಸುಂದರ ತರುಣಿಯು ವಿವಾಹವಾಗುವ ಸಂದರ್ಭಗಳೂ ಇಲ್ಲ.

ರುಶ್ಯದಲ್ಲಿ ಕೈಗಾರಿಕೆಗಳಾಗಲಿ ಕೃಷಿಯಾಗಲಿ ವೈಯಕ್ತಿಕ ರೀತಿಯಿಂದ ನಡೆಯುವುದಿಲ್ಲ. ಅಲ್ಲಿ ಮ್ಯಾನೇಜರರು, ಒಕ್ಕಲು, ಸಾಹುಕಾರ, ಕೂಲಿಗಳೆಂಬ ಭೇದಗಳೂ ಇಲ್ಲ. ಕೈಗಾರಿಕೆಯ ಕಾರಖಾನೆಗಳೂ, ಜಮೀನೂ, ಮನೆಗಳೂ ಎಲ್ಲವೂ ಜನರ ಸಾಮುದಾಯಿಕ ಹಕ್ಕಿನ ಸೊತ್ತುಗಳು. ಸಾಮುದಾಯಿಕ ಸಂಸ್ಥೆಗಳೇ ಕೈಗಾರಿಕೆಗಳನ್ನೂ ಕೃಷಿಯನ್ನೂ ನಡೆಸುವದಲ್ಲದೆ ಅಲ್ಲಿಯ ಪ್ರಾಂತಿಕ, ಕೇಂದ್ರ ಸರಕಾರಗಳನ್ನು ಕೂಡ ಇಂಥಾ ಸಂಸ್ಥೆಗಳ ಪ್ರತಿನಿಧಿಗಳೇ ನಡೆಸುತ್ತಾರೆ. ಸೈನಿಕ, ಕೈಗಾರಿಕೆಗಳ ಯಾ ಕೃಷಿಯ ಸಂಸ್ಥೆಗಳಿಗೆ ಸೇರದಿರುವವರಿಗೆ ಅಲ್ಲಿ ಯಾವ ತರದ ಜೀವನೋಪಾಯವಾಗಲಿ, ಅಧಿಕಾರವಾಗಲಿ ಇರುವುದಿಲ್ಲ. ಕೃಷಿ, ಕೈಗಾರಿಕೆಗಳ ಉತ್ಪತ್ತಿಯಿಂದ, ಆಯಾ ಸಂಸ್ಥೆಗಳಿಗೆ ಸೇರಿದ ಎಲ್ಲರಿಗೂ ಅನ್ನಬಟ್ಟೆಗಳಿಗೂ, ನಿಯಮಿತ ಸುಖಸಾಧನಗಳಿಗೂ ಬೇಕಾದ ಹಣವನ್ನು ಕೊಟ್ಟು,— ಮಕ್ಕಳ, ವೃದ್ಧರ ವ ರೋಗಿಗಳ ಪೋಷಣೆಗೂ ಬೇಕಾದಷ್ಟು ತೆಗೆದಿಟ್ಟು,— ಸಾಮುದಾಯಿಕ ಉಪಯೋಗದ ಶಾಲೆ, ವಿಹಾರಗೃಹ, ಆಸ್ಪತ್ರೆ ಇತ್ಯಾದಿಗಳಿಗೆ ಉಳಿದ ಹಣವನ್ನು ಹಂಚುತ್ತಾರೆ. ಪ್ರತಿಯೊಂದು ಕಡೆಯಲ್ಲಿಯೂ ಸಾರ್ವಜನಿಕ ಉಪಯೋಗದ ಶಾಲೆಗಳು, ಮಕ್ಕಳ ಸಂರಕ್ಷಣಾ ಸಂಸ್ಥೆಗಳು, ಆಸ್ಪತ್ರೆಗಳು, ಪುಸ್ತಕಭಂಡಾರಗಳು, ವ್ಯಾಯಾಮ-ವಿಹಾರಗೃಹಗಳು, ಸರಕಾರದಿಂದಲೇ ಸ್ಥಾಪಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಯಾವ ತರದ ಫೀಸನ್ನೂ ಕೊಡುವ ರೂಢಿಯಿಲ್ಲ. ಗರ್ಭಿಣಿಯಾದ ಹೆಂಗಸಿಗೆ ಹೆರಲಿಕ್ಕೆ ಕೆಲವು ಕಾಲ ಮುಂಚಿತವಾಗಿಯೇ ಸಂಪೂರ್ಣ ಸಂಬಳದ ರಜೆ ಸಿಕ್ಕುವುದು. ಹೆತ್ತು ಕೆಲವು ಕಾಲದ ತನಕ ಇದೇ ರಜೆ ಇರುವದು. ಸ್ತ್ರೀಯರು ಗರ್ಭವನ್ನು ಪಾಲಿಸಿ ಮಕ್ಕಳನ್ನು ಪಡೆಯಬಹುದು; ಮಕ್ಕಳು ಬೇಡವಾದರೆ ಗರ್ಭನಾಶವನ್ನು ಮಾಡಿಕೊಳ್ಳಬಹುದು. ಅವರು ಕೆಲಸಕ್ಕೆ ಹೋಗುವಾಗ ಮಕ್ಕಳ ಜಾಗ್ರತೆಯನ್ನು ತೆಕ್ಕೊಳ್ಳಲಿಕ್ಕೆ ಪ್ರತಿಯೊಂದು ಕಡೆಯಲ್ಲಿಯೂ ಪ್ರತ್ಯೇಕ ಸಂಸ್ಥೆಗಳಿವೆ. ವಿವಾಹವಾಗಲಿ, ಆಗದಿರಲಿ ಎಲ್ಲಾ ಬಾಣಂತಿಯರ ಶುಶ್ರೂಷೆಯನ್ನೂ, ಮಕ್ಕಳ ಪೋಷಣೆ-ವಿದ್ಯಾಭ್ಯಾಸಗಳನ್ನೂ ಸರಕಾರದವರೇ ಕೈಕೊಳ್ಳುವುದರಿಂದ ಸ್ತ್ರೀಯರಿಗೆ ಯಾವ ತರದ ಆಧೀನತೆಗೂ ಒಳಗಾಗಬೇಕೆಂದೂ ಇಲ್ಲ.

ದೇಶದ ಪ್ರತಿಯೊಬ್ಬರಿಗೂ ಸುಖಸಾಧನಗಳಲ್ಲಿ ಸಮಾನಾಧಿಕಾರವಿರುವುದರಿಂದ ದೊಡ್ಡ ದೊಡ್ಡ ಭವನಗಳು ಅಲ್ಲಿ ಯಾರೊಬ್ಬನಿಗೂ ಇರುವುದಿಲ್ಲ. ಅವರವರ ಅತ್ಯಾವಶ್ಯದ ಉಪಯೋಗಕ್ಕೆ ಬೇಕಾದಷ್ಟು ಸ್ಥಳವು ಮಾತ್ರ ಪ್ರತಿಯೊಬ್ಬನಿಗೆ ಇರುವುದು. ಎಲ್ಲಾ ತರದ ವಿದ್ಯೆ, ವಿಲಾಸಗಳನ್ನು ಹೊಂದಬೇಕಾದರೆ ಸ್ತ್ರೀಯರಾಗಲಿ ಪುರುಷರಾಗಲಿ ಮನೆಯಿಂದ ಹೊರಗೆ ಹೋಗಬೇಕಾಗಿರುವುದರಿಂದ ಯಾರೊಬ್ಬರೂ ವಿಶ್ರಾಂತಿ, ನಿದ್ರೆಗಳಿಲ್ಲದೆ ಮನೆಯೊಳಗೆ ಇರುವ ರೂಢಿಯು ಅಲ್ಲಿಲ್ಲ.

ಈ ಅದ್ಭುತ ತರದ ರುಶ್ಯದಲ್ಲಿರುವ ಸ್ತ್ರೀಯರು ವಿದ್ಯೆ, ವಿಜ್ಞಾನ, ಕಲಾ, ಕೌಶಲ್ಯಗಳಲ್ಲಿ ತುಂಬಾ ಆಸಕ್ತಿಯುಳ್ಳವರಾಗಿರುತ್ತಾರಲ್ಲದೆ, ರಾಜಕೀಯ ಸಂಗತಿಗಳಲ್ಲಿಯೂ ಅನೇಕ ಕಡೆ ಪ್ರಮುಖರಾಗಿರುತ್ತಾರೆ. ರಣಪ್ರಾಂಡಿತ್ಯದಲ್ಲಿಯೂ ಅನೇಕ ಮಹಿಳೆಯರು ಅಲ್ಲಿ ಪುರುಷರನ್ನು ಹಿಂದೆ ಹಾಕಿ ಸೇನಾಧೀಶ ಕೆಲಸಗಳನ್ನು ಕೂಡಾ ವಹಿಸಿಕೊಂಡಿರುವರು. ರುಶ್ಯದ ಕೇಂದ್ರ ಸರಕಾರದ ಕಾರ್ಯಕಾರಿ ಸಮಿತಿಯಲ್ಲಿ ಮಾತ್ರ ಅವರು ಈ ತನಕ ಪ್ರವೇಶವಾಗಿಲ್ಲ.

ಪ್ರಾಚೀನ ನಾಗರೀಕತೆಯ ನಮ್ಮ ಹಿಂದೂ ಮಹಿಳೆಯರ ಸ್ಥಿತಿಗೂ ರುಶ್ಯದ ನವೀನ ನಾಗರೀಕತೆಯ ಈ ಮಹಿಳೆಯರ ಸ್ಥಿತಿಗೂ ಯಾವ ತರದ ಹೋಲಿಕೆಯನ್ನು ಮಾಡಲಿಕ್ಕೂ ಸಾಧ್ಯವಿಲ್ಲ. ಪತಿಸೇವೆ, ಪತಿಭಕ್ತಿ, ಪಾತಿವ್ರತ್ಯವೆಂಬ ಮಾತುಗಳನ್ನು ರುಶ್ಯದ ತರುಣಿಯರು ಕೇಳಿದರೆ ನಗದಿರಲಾರರು. ಅವರು ಪುರುಷನ ಮನಸ್ಸನ್ನು ಸೆಳೆಯುವ ಆಶೆಯಿಂದ ದೇಹವನ್ನೇ ಪೂಜಿಸಿಕೊಂಡಿರುವ ಲಲನೆಯರಲ್ಲ. ಸಮಾಜ ಸೇವೆ, ದೇಶಸೇವೆಯಲ್ಲದೆ ಅವರಿಗೆ ಇತರ ಧ್ಯೇಯ, ಧರ್ಮ, ಭಕ್ತಿಗಳಿಲ್ಲ. ನಮ್ಮ ಪ್ರಾಚೀನ ನಾಗರೀಕತೆಯಲ್ಲಿ ಸ್ತ್ರೀಯರಿಗೆ ನಿಜವಾದ ಸುಖವಿರಬಹುದೋ, ಈ ತರದ ನಾಗರೀಕತೆಯೇ ಸುಖಪ್ರದವಾದದ್ದೋ ಎಂದು ವಿದ್ಯಾವಂತೆಯರಾದ ನಮ್ಮ ಭಗಿನಿಯರೇ ಹೇಳಬೇಕಲ್ಲದೆ ಗಂಡಸರಾದ ನಮಗೆ ಅದು ಸಮಂಜಸವಾಗಿ ಎಂದೂ ತಿಳಿಯಲಾರದು.

ದಮ್ಮಿನ ಪ್ರಕಾರ ಬಹಳ ಗುಣವೆ

ಅದ್ದರಿಂದಲೇ ಒಂದೇ ಔಷಧವು ಎಲ್ಲ ದಮ್ಮಿನವರಿಗೆ ಸಮಾನಾಗಿ ಗುಣಕಾರಿಯಾಗದು. ಇದನ್ನು ತಿಳಿದ ನಾನು ನನ್ನ ಕಡೆಗೆ ಬಂದ ನೂರಾರು ದಮ್ಮಿನವರಿಗೆ **ಪುರೋಹಿತ ಶ್ವಾಸಹಾರಿ** ಯನ್ನೇ ತೆಗೆದುಕೊಳ್ಳುವ ಶಿಫಾರಸು ಮಾಡುವೆನಾದ್ದರಿಂದ ಈ ಸರ್ವ ತರಹದಿಂದ ಗುಣಕಾರೀ ಔಷಧ ಯೋಜನೆಯ ಮೇಲಿನ ನನ್ನ ದೃಢನಿಶ್ವಾಸವನ್ನು ವ್ಯಕ್ತ ಪಡಿಸುತ್ತಿರುವೆನು.

ಎಫಿಡ್ರೀಮಿನ ಗುಳಿಗೆ ಹೊಗೆಯ ಔಷಧ ಇಂಜಕ್ಶನ್‌ಗಳಂಥ **ದಮ್ಮು ತಾತ್ಪರ್ತಿಕ ನಿಲ್ಲಿಸುವ** ಪಾಪ್ಯುಳ ಔಷಧಗಳು ನನಗೆ ಗೊತ್ತಿದ್ದು, ಅವುಗಳ ಉಪಯೋಗ ಮಾಡಿ ನಿರಾಶೆಹೊಂದಿ ಕಡೆಗೆ ಶ್ವಾಸನಿಕಾರವನ್ನು ಹೆಚ್ಚಿಗೆ ಮಾಡಿಕೊಂಡ ನೂರಾರು ರೋಗಿಗಳು ನನ್ನ ಕಡೆಗೆ ಬರುವರು. ಅವರಿಲ್ಲರಿಗೆ **ದಮ್ಮನ್ನು ನಿದಾನ ಆದರೂ ಪೂರ್ಣ ಗುಣಮಾಡುವಂಥ** ಪುರೋಹಿತ ಶ್ವಾಸಹಾರಿಯ ಯೋಜನೆಯನ್ನೇ ಮಾಡುವೆನು. ದಮ್ಮು ಕಂತಡಾಹ ಮಾಡುವ ಹಳೇ ಕೆಮ್ಮು ಕೋಡಗೆಮ್ಮು ಮೇಲಿಂದ ಮೇಲೆ ಬಂದು ಬಹಳ ದಿವಸ ಇರುವ ನೆಗಡಿ ಮುಂತಾದ್ದರ ಮೇಲೆ **ಪುರೋಹಿತ ಶ್ವಾಸಹಾರೀ ಫ್ಲೇನ್** ಈ ಉತ್ಕೃಷ್ಟ ಔಷಧದ ಯೋಜನೆ ಮಾಡುವೆನು. ಅಲ್ಲದೆ ಅಮ್ಲ ಮತ್ತು ಮಲಬದ್ಧತೆ ಹೆಚ್ಚಾಗಿರುವ ದಮ್ಮಿನವರಿಗೆ ಪುರೋಹಿತ ಶ್ವಾಸಹಾರೀ ಕಾಂಪಾಂಡ್ (ಕೆಂಪು ಬಣ್ಣದ) ನ ಶಿಫಾರಸು ಮಾಡುವೆನು.

ಕೆಮಿಸ್ಟ, ಸ್ಟೋರ್ಸ್ ಎಲ್ಲ ಕಡೆಗೆ ರೂ. ೨, ರೂ. ೩-೮, ಮತ್ತು ರೂ. ೬ ಬೆಲೆಯ ಸಣ್ಣ ಮಧ್ಯಮ ಮತ್ತು ದೊಡ್ಡ ಆಕಾರದ ಸೀಸೆಗಳಲ್ಲಿ ದೊರೆಯುವದು.

ಮುಂಬಯಿ ಏಜಂಟ:—

ಓರಿಯಂಟೆಲ್ ಮೆಡಿಕಲ್ ಸ್ಟೋರ್ಸ್,

ಪಿನ್ಸೆಸ್ ಸ್ಟ್ರೀಟ; ಮುಂಬಯಿ ೨.

ಮುಂಬಯಿ ಸ್ಟಾಕಿಸ್ಟ:—

ವನಮಾಲೀ ಭಿಕಾ ಕಂ.,

ಪಿನ್ಸೆಸ್ ಸ್ಟ್ರೀಟ.

ಕಾಂತಿಲಾಲ ಛೋಟಾಲಾಲ ಕಂ.,

ಪಿನ್ಸೆಸ್ ಸ್ಟ್ರೀಟ.

'V' ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ.

ಪ್ರಕೃತಿಯೊಂದಿಗೆ ನಮ್ಮ ಕೂದಲಿನ ಸೌಂದರ್ಯವನ್ನು ಪುನರುಜ್ಜೀವನಗೊಳಿಸಿರಿ.

ಅತ್ಯುತ್ಕೃಷ್ಟವಾದ ಕೇಶವರ್ಧಕ 'ಟಾನಿಕ್'

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)

ನಿಮ್ಮ ಕೂದಲಿನ ಸೌಂದರ್ಯ ಮತ್ತೂ ಳವಣಿಗೆಗಳಿಗೆ ಇದು ಅತ್ಯಮೂಲ್ಯವಾಗಿದೆ. ಇದು ಪ್ರತ್ಯೇಕ್ಷವಾದ ಕಾಂತಿಯನ್ನು ಉಂಟುಮಾಡುವುದು; ಕೂದಲನ್ನು ಸೊಗಸಾಗಿ, ಉದ್ದವಾಗಿ, ರೇಶ್ಮೆಯಂತೆ ಮಾಡಿಬಿಡುವುದು; ಇನ್ನು ಉಪಯೋಗಿಸುವವರೆಲ್ಲರಿಗೂ ಇದು ಬಹು ಮೋಹಕವಾಗಿದೆ. ಇದರ ಮಧುರ ಪರಿಮಳವು, ಇದರ ಗುಣವಿಶೇಷಗಳಂತೆಯೇ ನಿಮ್ಮನ್ನು ಸಂತೋಷಗೊಳಿಸುವುವು. ಇಂದೇ ಒಂದು ಬಾಟಲಿಯನ್ನು ಪರೀಕ್ಷಿಸಿರಿ. ಬಾಟಲಿಯೊಂದಕ್ಕೆ ರೂ. 1—0—0. ಅಥವಾ ಬಾಟಲಿ 3ಕ್ಕೆ ರೂ. 2—10—0. ವಿ. ಪಿ. ಚಾರ್ಜು ಪ್ರತ್ಯೇಕ. ಪೋಸ್ಟೇಜಿಗಾಗಿ 2½ ಆಣೆಯ ಸ್ಟ್ಯಾಂಪ್ ಕಳುಹಿಸಿ ಇದರ ಮಾದರಿಯನ್ನು ಕೇಳಿ. ಅದು ನಿಮಗೆ ಉಚಿತ.

ಒಟೋದಿಲ್ ಬಹಾರ್ (ರಿಜಿಸ್ಟರ್ಡ್)

ಈಗಿನ ದಿನಗಳಲ್ಲಿ ಜನಪ್ರೀತಿಯನ್ನು ಸಂಪಾದಿಸಿರುವ ಸುಗಂಧ ದ್ರವ್ಯವಿದು. ಇದರ ಮಧುರವಾದ, ಮರುಳುಗೊಳಿಸುವ, ಬಹು ಕಾಲ ಉಳಿಯುವ ಈ ಗುಣಗಳಿಗಾಗಿ ಇದು ಬಹಳ ಪ್ರಸಿದ್ಧಿಪಡೆದಿದೆ. ಒಂದು ಕೈಯ ಮೇಲೆ ಚುಮುಕಿಸಿದ ಕೆಲವೇ ಬಿಂದುಗಳಿಂದ ಸುತ್ತಲೂ ಎತ್ತೆತ್ತಲೂ ವೈಭವಸೂಚಕವಾದ ಪರಿಮಳ ಗಂಧವು ಪಸರಿಸುತ್ತದೆ. ½ ಔನ್ಸಿನ ಬಾಟಲಿಗೆ ರೂ. 2—0—0; ¼ ಔನ್ಸಿನ ಬಾಟಲಿಗೆ ರೂ. 1—4—0; ವಿ. ಪಿ. ಚಾರ್ಜು ಪ್ರತ್ಯೇಕ; ಪೋಸ್ಟೇಜಿಗಾಗಿ 2 ಆಣೆ ಸ್ಟ್ಯಾಂಪು ಕಳುಹಿಸಿ ಇದರ ಮಾದರಿಯನ್ನು ಕೇಳಿ; ಅದು ನಿಮಗೆ ಉಚಿತ.

ಕಾಮಿನಿಯಾ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕಿದು ಅತ್ಯಂತ ಶಾಸ್ತ್ರೀಯವಾಗಿ ಸಿದ್ಧವಾದ ಸಾಮುಗ್ರಿ. ಮುಖದ ಮೇಲಿನ ಮಡವೆಗಳು, ನೆರಿಗೆಗಳು, ಕಲೆಗಳು ಇವನ್ನು ಹೋಗಲಾಡಿಸಿ, ಚರ್ಮವನ್ನು ಸುಂದರವಾಗಿ, ಹೊಸದಾಗಿ, ಯೌವನದಿಂದ ತುಂಬಿಸಿ ಇಡುತ್ತದೆ. ಇದು ಚರ್ಮವನ್ನು ಮೃದುವಾಗಿ, ಮುಖಮಲ್ಲಿನ ಹಾಗೆ ಮಾರ್ದವಿಸುವುದೂ ಅಲ್ಲದೆ, ನೋಟಕ್ಕೆ ಶುಭ್ರವಾಗಿಯೂ ಹಿತವಂತೆ ಬೆಳ್ಳಗಾಗಿಯೂ ಇರಿಸುತ್ತದೆ. ಇದು ಮನೋಹರವಾದ ಸುವಾಸಿತವಾಗಿದೆ. ಬುಡ್ಡಿಯೊಂದಕ್ಕೆ ಆಣೆ 0—12—0. ವಿ. ಪಿ. ಚಾರ್ಜು ಪ್ರತ್ಯೇಕ.

ಉಷ್ಣ ಹವಾಮಾನಕ್ಕೆ ಅತ್ಯಂತ ಶ್ರೇಷ್ಠವಾದ ಅಲಂಕಾರದ ಸಾಬೂನುಗಳು.

ಕಾಮಿನಿಯಾ ಟ್ಯಾಲೆಟ್ ಸೋಪುಗಳು (ರಿಜಿಸ್ಟರ್ಡ್)

ಸಂಪೂರ್ಣವಾದ ಆರೋಗ್ಯದಾಯಕ ಶಕ್ತಿಯಲ್ಲಿಯೂ, ಅಪ್ಪಿತೀಯವಾದ ಸುಗಂಧದಲ್ಲಿಯಲ್ಲಿಯೂ ಇದರ ಸರಿಸಮಾನವಿಲ್ಲವೆಂದು ನಿದೇಶನಕ್ಕೆ ಬಂದಿರುವ ಅತ್ಯಂತ ಸೊಗಸಾದ ಸಾಬೂನುಗಳಿವು. ಅತ್ಯುತ್ಕೃಷ್ಟವಾದ ಹಲವು ಬಗೆಯ ಪರಿಮಳಗಳಿಂದ ಕೂಡಿ ಮಾರಾಟಕ್ಕೆ ದೊರೆಯುತ್ತವೆ. ಅವುಗಳಲ್ಲಿ ಕೆಲವು ಇವು—ವೈಟ್‌ರೋಸ್, ಸ್ಯಾಂಡಲ್, ಲೆವೆಂಡರ್, ಡಿಲ್‌ಬಹಾರ್, ಗ್ಲಿಸರಿನ್ (ಟ್ರಾನ್ಸ್‌ಪೇರೆಂಟ್) ಮೊದಲಾದುವು. ಮೋಹಕವಾದ ಇವುಗಳ ಸುಗಂಧವು ಸಾನಕಾಲದಲ್ಲಿ ಮಹದಾನಂದವನ್ನು ಉಂಟುಮಾಡುತ್ತದೆ. ಮೂರು ತುಂಡು ಸಾಬೂನುಗಳ ಒಂದು ಪೆಟ್ಟಿಗೆ ರೂ. 1—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಸೋಲ್ ಏಜಂಟ್ಸ:—**ಆಂಗ್ಲೊ-ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂ., 285, ಜುವ್ಮಾ ಮಸೀದಿ, ಬೊಂಬಯಿ ನಂ. 2.**

ಬಸವನಗುಡಿ ಗರ್ಲ್ಸ್ ಮಿಡ್ಲ್ ಸ್ಕೂಲಿನ ಶಾಲಾ ದಿನೋತ್ಸವದ ಸಮಯ ದಲ್ಲೇರ್ಪಡಿಸಿದ ಪ್ರದರ್ಶನವನ್ನು ತೆರೆಯುವಾಗ

ಮಿಸೆಸ್ ಇಂದಿರಮ್ಮ ಬಿ. ವಾಸುದೇವ ಮೂರ್ತಿಯವರು ಮಾಡಿದ ಭಾಷಣ.

ಪ್ರಿಯ ಸಹೋದರಿಯರೇ ಮತ್ತು ಬಾಲಕಿಯರೇ,

ಈ ಮಹೋತ್ಸವದ ಕಮಿಟೀ ಮತ್ತು ಸೆಕ್ರೆಟರಿಯವರು ಈ ದಿನದ ಉತ್ಸವಕ್ಕೆ ಅಧ್ಯಕ್ಷತೆಯನ್ನು ವಹಿಸಬೇಕೆಂದು ನನ್ನನ್ನು ಕೇಳಿದಾಗ ನನಗೆ ಒಪ್ಪಿಕೊಳ್ಳುವುದಕ್ಕೆ ಸಂಕೋಚವೂ ಭಯವೂ ಆಯಿತು. ಯಾಕೆಂದರೆ ಇಂತಹ ಕಾರ್ಯಗಳಿಗೆ ಹೆಚ್ಚು ಅನುಭವಸ್ಥರೂ ವಯೋವೃದ್ಧರೂ ಜ್ಞಾನವೃದ್ಧರೂ ಆದವರೇ ಅರ್ಹರೆಂತ ನನ್ನ ನಂಬಿಕೆ. ಇವುಗಳಲ್ಲಿ ಯಾವುದಕ್ಕೂ ನಾನು ಹೋಲಲಾರೆನು. ನನಗೆ ಹೆಚ್ಚು ಅನುಭವವೂ ಇಲ್ಲ. ಉಪದೇಶ ಮಾಡುವ ಶಕ್ತಿಸಾಮರ್ಥ್ಯವೂ ಇಲ್ಲ. ಆಹರಿ ಈ ಸಂತೋಷಕೂಟದಲ್ಲಿ ನಿಮ್ಮೆಲ್ಲರ ಜತೆಯಲ್ಲಿ ಬೆರೆತು ನಾನೂ ಇದಕ್ಕೆ ಭಾಗಿಯಾಗಬೇಕೆಂಬ ಅಭಿಲಾಷೆಯಿಂದಲೂ ಮತ್ತು ದೊಡ್ಡವರ ಮಾತನ್ನು ತೆಗೆದುಹಾಕಲಾರದೆ ಈ ದೊಡ್ಡ ಕೆಲಸಕ್ಕೆ ಒಪ್ಪಿಕೊಂಡೆ. ನನ್ನನ್ನು ಈ ಕೆಲಸದಲ್ಲಿ ಭಾಗಿಯನ್ನಾಗಿ ಮಾಡಿದುದಕ್ಕೆ ನಾನು ಈ ಉತ್ಸವದ ಕಮಿಟಿಯವರಿಗೂ ಮತ್ತು ಇಲ್ಲಿ ನೆರೆದಿರುವ ತಮ್ಮೆಲ್ಲರಿಗೂ ವಂದಿಸುತ್ತೇನೆ.

ನಾನು ದೊಡ್ಡ ಭಾಷಣವನ್ನೇನೂ ಮಾಡುವುದಿಲ್ಲ. ಮಾಡುವ ಶಕ್ತಿಯೂ ನನ್ನಲ್ಲಿಲ್ಲ. ಆದರೆ ನನ್ನ ಅಲ್ಪ ಮತಿಗೆ ತೋರಿದ ಒಂದೆರಡು ಮಾತನ್ನು ಹೇಳಬೇಕೆಂತಲುದ್ಯುಕ್ತಳಾಗಿದ್ದೇನೆ. ತಾವುಗಳೆಲ್ಲರೂ ಸಾವಧಾನದಿಂದ ಕೇಳುತ್ತೀರೆಂತ ನಂಬಿದ್ದೇನೆ.

ಈಗ ಹೆಡ್ ಮಿಸ್ಟೆಸ್ ಓದಿದ ಸ್ವಾರಸ್ಯವಾದ ಭಾಷಣದಿಂದ ಹೆಣ್ಣುಮಕ್ಕಳ ಮಿಡಲ್ ಸ್ಕೂಲುಗಳಲ್ಲಿ ಕೊಡುತ್ತಿರುವ ಶಿಕ್ಷಣಕ್ರಮದಿಂದ ಮಕ್ಕಳ ಅಂತಶ್ಶಕ್ತಿಯನ್ನು ವೃದ್ಧಿಗೊಳಿಸಿ ವಿಕಾಸಗೊಳ್ಳುವುದಕ್ಕೆ ಅವಕಾಶವಿಲ್ಲವೆಂಬ ನಿಷಯವು ವ್ಯಕ್ತವಾಯಿತು. ಹಾಗೆಯೇ ಇಂತಹ ಪ್ರದರ್ಶನಗಳು ಮಕ್ಕಳಲ್ಲಿನ ಬುದ್ಧಿಸಾಮರ್ಥ್ಯಗಳನ್ನು ಹೊರಗೆಡಹಬಲ್ಲವೆಂಬುದನ್ನೂ ಸೂಚಿಸುತ್ತಾರೆ. ಹೆಣ್ಣುಮಕ್ಕಳಿಗೆ ಈಗ ಕೊಡುತ್ತಿರುವ ವಿದ್ಯಾಭ್ಯಾಸಕ್ರಮವು ಅಷ್ಟು ಸಮರ್ಪಕವಾಗಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮಕ್ಕಳಿಗೆ ಪುಸ್ತಕ ಓದುವುದು, ಪರೀಕ್ಷೆಗೆ ಕುಳಿತುಕೊಳ್ಳುವುದು ಇವೆರಡೇ ಅವರ ಧ್ಯೇಯವಾಗಿರುತ್ತವೆ. ಇದಕ್ಕೆ ಬಹಳ ಮಟ್ಟಿಗೆ ತಾಯಿತಂದೆಯರೇ ಕಾರಣರು. ಮಕ್ಕಳ ಮನೋಭಾವನೆ ಕಡೆಗೂ ಅವರ ಬುದ್ಧಿಚಾತುರಿಕೆಯ ಕಡೆಗೂ ತಂದೆತಾಯಿಗಳ ಗಮನವಿರುವುದಿಲ್ಲ. ಅವರಿಗೆ ತಮ್ಮ ಮಕ್ಕಳು ಪುಸ್ತಕಭಂಡಾರವನ್ನು ಅರೆದು ಕುಡಿದು ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಸಾಕು. ತಂದೆತಾಯಿಗಳಿಗೆ ಅದೇ ದೊಡ್ಡ ಸಂತೋಷ. ಮಕ್ಕಳು ಶಕ್ತರೇ ಆಗಲಿ, ನಿಶ್ಶಕ್ತರೇ ಆಗಲಿ, ಪಾಸುಮಾಡುವುದೇ ಮುಖ್ಯ. ಈ ಪರೀಕ್ಷೆಗಳಿಂದ ಮಕ್ಕಳ ಆರೋಗ್ಯವೂ ಕೆಡುತ್ತದೆ. ಇದರಿಂದ ಮಕ್ಕಳಿಗೆ ತಮ್ಮ ಸುತ್ತುಮುತ್ತಲೂ ತಮ್ಮ ಸೀಮೆಯಲ್ಲೂ ಮತ್ತೂ ಇತರ ಕಡೆಯಲ್ಲೂ ಏನು ನಡೆಯುತ್ತಿದೆ, ತಮ್ಮಂತೆ ಇತರ ಮಕ್ಕಳು ಯಾವ ರೀತಿಯಲ್ಲಿ ತಮ್ಮ ಕಾಲಯಾಪನೆ ಮಾಡುತ್ತಾರೆ ಎಂಬುದರ ಅರಿವೇ ಇರುವುದಿಲ್ಲ.

ಕಾಲವು ಮುಂದುವರಿಯುತ್ತಿದೆಯೇ ವಿನಹಾ ಹಿಂದಕ್ಕೆ ಹೋಗುತ್ತಿಲ್ಲ. ಕಾಲಪರಿಸ್ಥಿತಿಗೆ ತಕ್ಕಂತೆ ನಾವೂ ನಡೆದುಕೊಳ್ಳಬೇಕು. ೧೫-೨೦ ವರುಷಗಳ ಹಿಂದೆ ಹೆಣ್ಣುಮಕ್ಕಳು ಪಾಠಶಾಲೆಗೆ ಹೋಗುತ್ತಿರುವಾಗ ಬಹಳ ಆಶ್ಚರ್ಯಕರವಾದುದಾಗಿತ್ತು. ಇಂದಿನ ದಿನವೋ ಹೆಣ್ಣುಮಕ್ಕಳು ಶಾಲೆಗೆ ಹೋಗದೇ ಮನೆಯಲ್ಲಿ ನಿಂತರೆ ಅದೇ ಮಹದಾಶ್ಚರ್ಯ. ಈಗಿನ ಈ ಮಕ್ಕಳೇ ಮುಂದೆ ದೇಶದ ಏಳಿಗೆಗೆ ಕಾರಣರು. ಈ ಮಕ್ಕಳ ಮನಶ್ಶಕ್ತಿಯನ್ನೂ ಭಾವನಾಶಕ್ತಿಯನ್ನೂ ಪುಸ್ತಕಗಳಲ್ಲಿಯೇ ಕುಗ್ಗಿಸಿ ಸಂಕುಚಿತವಾಗಿ ಮಾಡಿದರೆ ಇವರಿಗೆ ಪ್ರಪಂಚಜ್ಞಾನವೇ ಶೂನ್ಯವಾಗಿಹೋಗುತ್ತದೆ. ಇವರು ತಮ್ಮ ಮುಂದಿನ ಕಾಲವನ್ನು ವ್ಯರ್ಥವಾಗಿ ಕಳೆಯಬೇಕಾಗುತ್ತದೆ. ಮಕ್ಕಳ ಎಳೆಯ ಮನಸ್ಸನ್ನು ಎಲ್ಲಾ ಕಡೆಗೂ ಹೋಗುವಂತೆ ಸಡಿಲವಾಗಿ ಬಿಟ್ಟು ಅವರ ಭಾವನಾಶಕ್ತಿಯೂ ವೃದ್ಧಿಗೊಳಿಸುವಂತೆ ಮಾಡಬೇಕು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' ಎಂಬ ನಾಣ್ನುಡಿಯಂತೆ ಮಕ್ಕಳ ಎಳೆಯ ಮನಸ್ಸನ್ನು ಬಿಗಿಹಿಡಿದರೆ ಮುಂದೆ ಅವರು ವಿಶಾಲಹೃದಯರಾಗಲಾರರು. ಎಳೆಯ ಮನಸ್ಸಿನಲ್ಲಿ ನೆಟ್ಟ ಭಾವನೆಯು ಅವರು ದೊಡ್ಡವರಾದ ಮೇಲೂ ಅಳಿಸಿಹೋಗುವುದಿಲ್ಲ. ಮಕ್ಕಳ ಮನಸ್ಸನ್ನು ಆಕರ್ಷಿಸಿ ಅವರ ಪ್ರಾಪಂಚಿಕ ಜ್ಞಾನವನ್ನು ವಿಸ್ತೀರ್ಣಗೊಳಿಸಿ ಅವರ ಸಂಸಾರವನ್ನು ಸುಖಪ್ರದವಾಗಿ ಮಾಡುವುವು ವಸ್ತುಪ್ರದರ್ಶನಗಳೇ. ಪ್ರದರ್ಶನವೆಂದರೆ ಬಹಳ ದೊಡ್ಡ Exhibition ಅಲ್ಲ. ಮಕ್ಕಳ ಮಾಧ್ಯಮಿಕ ಪಾಠಶಾಲೆಯಲ್ಲಿ ಅವರಿಂದಲೂ ಮತ್ತು ಉಪಾಧ್ಯಾಯಿನಿಯರಿಂದಲೂ ತಯಾರಿಸಲ್ಪಟ್ಟ ವಸ್ತುಗಳನ್ನು ಪ್ರದರ್ಶಿಸಿ ಮಕ್ಕಳ ಮನಸ್ಸನ್ನು ವಿಕಾಸಗೊಳಿಸಬೇಕು. ಮಕ್ಕಳಿಗೆ ಅವರು ಮಾಡುವ ಕೈಗಾರಿಕೆ ಕೆಲಸದಲ್ಲಿ ಹೆಚ್ಚು ಉತ್ತೇಜನ ಕೊಟ್ಟು ಪ್ರೋತ್ಸಾಹಿಸಬೇಕು.

ನಮ್ಮ ಹಿಂದೂಸ್ಥಾನದಲ್ಲಿ ನಾನಾ ಜಾತಿಯ, ನಾನಾ ಮತದ ಜನರಿದ್ದಾರೆ. ಈಗಿನ ಕಾಲಪರಿಸ್ಥಿತಿಗನುಗುಣವಾಗಿ ನಾವು ನಮ್ಮ ಮತಭೇದವನ್ನು ಮರೆತು ಅವರ ಆಚಾರವ್ಯವಹಾರಗಳನ್ನು ತಿಳಿಯುವುದು ಅನಶ್ಯಕ. ಇದಕ್ಕೆ ಶಾಲೆಗಳಲ್ಲಿ Blue Birds ಮತ್ತು Girl-guides classಗಳು ಬಹಳ ಅನುಕೂಲ ಮಾಡುತ್ತವೆ. ಮತ್ತು ವಸ್ತುಪ್ರದರ್ಶನ ಮುಂತಾದುವು ಸಹಕಾರಮಾಡುತ್ತವೆ. ಚಿತ್ರಪಟಗಳ ಮತ್ತು ಪತ್ರಿಕೆಗಳ ಮೂಲಕ ಇದನ್ನು ತಿಳಿಯ ಹೇಳಬಹುದು. ನಮ್ಮ ದೇಶದಲ್ಲಿ ಕಲಿಸಬಹುದಾದ ಕುಶಲವಿದ್ಯೆಗಳನ್ನು ಕಲಿಸಿಕೊಡುವುದಲ್ಲದೆ ಇತರ ಜನಾಂಗದ ಕುಶಲವಿದ್ಯೆಗಳನ್ನು ಕಲಿಯುವುದಕ್ಕೂ ತಮ್ಮ ತಮ್ಮ ಮನೆಗಳನ್ನೂ ಸುತ್ತುಮುತ್ತಲಿನ ಪ್ರದೇಶವನ್ನೂ ಅಲಂಕಾರವಾಗಿಯೂ, ನಿರ್ಮಲವಾಗಿಯೂ ಇಟ್ಟುಕೊಳ್ಳುವುದಕ್ಕೂ ಈ ವಸ್ತುಪ್ರದರ್ಶನಗಳೇ ಮಕ್ಕಳಿಗೆ ಬಹಳ ಮಟ್ಟಿಗೆ ಶಿಕ್ಷಣ ಕೊಡುತ್ತವೆ.

ಶಾಲೆಯ ವಸ್ತುಪ್ರದರ್ಶನವೆಂದರೆ ಬರೇ ಕಸೂತಿ ಹೊಲಿಗೆ ಕೆಲಸವಲ್ಲ. ಅಂತಹ ಪ್ರದರ್ಶನದಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಶಾಲೆಯ ವಸ್ತುಪ್ರದರ್ಶನವೆಂದರೆ ಮಕ್ಕಳ ಕೈಯಲ್ಲಿ ರಟ್ಟಿನಿಂದ ಮನೆಗಳನ್ನು ತಯಾರಿಸುವುದು, ಮತ್ತು ಮನೆಗಳನ್ನು ಹ್ಯಾಗೆ ಅಲಂಕಾರ ಮಾಡಿ ಇಟ್ಟುಕೊಳ್ಳುವುದು, ಯಾವ ಯಾವ ಸಾಮಾನನ್ನು ಎಲ್ಲೆಲ್ಲಿ ಇಡಬೇಕು ಮುಂತಾದ್ದನ್ನು ಪ್ರದರ್ಶನಗಳಲ್ಲಿ ಇಡಿಸಿ ಇದರಿಂದ ಅವರಿಗೆ ಶಿಕ್ಷಣ ಕೊಡಬೇಕು. ಮಕ್ಕಳಿಗೆ ಯಾವಾಗಲೂ ಅಂದವುಳ್ಳ ಪದಾರ್ಥಗಳ ಮೇಲೆ ಆಶೆ ಹೆಚ್ಚು. ಈ ಪ್ರದರ್ಶನಗಳಿಂದ ಮಕ್ಕಳಲ್ಲಿ ಸ್ಪರ್ಧೆಯುಂಟಾಗಿ ಕೈಚಳಕವೂ ಮನೋವಿಕಾಸವೂ ಅಭಿವೃದ್ಧಿಹೊಂದುವದಲ್ಲದೆ ಮಕ್ಕಳು ಬೆಳೆಯುತ್ತ ಅವರಲ್ಲಿ ಬುದ್ಧಿಶಕ್ತಿಯೂ ಸೌಂದರ್ಯವೂ ಸೌಹಾರ್ದತೆಯೂ ಉಂಟಾಗಿ ಜನೋಪಕಾರಿ ಕಾರ್ಯಗಳಲ್ಲಿ ನಿರತರಾಗುತ್ತಾರೆ. ಮಕ್ಕಳಲ್ಲಿನ ಒಳ್ಳೆಯ ಗುಣಗಳನ್ನು ಮುಂದಕ್ಕೆ ತರಬೇಕಾದರೆ ಈ ವಿದ್ಯಾವಸ್ತುಪ್ರದರ್ಶನಗಳೇ ಮುಖ್ಯವಾದುವು. ಮಕ್ಕಳಿಗೆ ತಾವು ಮಾಡಿದ ಕೈಗಾರಿಕೆಯಲ್ಲಿ ಹೆಚ್ಚು ಅಭಿಮಾನವೂ ಹೆಮ್ಮೆಯೂ ಇರುತ್ತದೆ. ಹೀಗೆಯೇ ಇವರು ದೊಡ್ಡವರಾದ ಮೇಲೂ ಒಳ್ಳೆ ಮನಸ್ಸಿನಲ್ಲಿ ನಟ್ಟ ಬೀಜವು ಮೊಳಿಕೆಯಾಗಿ ಗಿಡವಾಗುವುದು. ತಾವು ತಮ್ಮ ಸ್ವಹಸ್ತದಿಂದ ತಯಾರು ಮಾಡುವ ಸಾಮಾನು ಮತ್ತು ಸ್ವದೇಶಿ ಸಾಮಾನು ಎಂಬ ಹೆಮ್ಮೆಯಿಂದ ಇವರಿಗೆ ದೇಶಾಭಿಮಾನವೂ ಹುಟ್ಟುತ್ತದೆ. ಈ ವಸ್ತುಪ್ರದರ್ಶನದಿಂದ ಈಗಿನ ಈ ಮಕ್ಕಳು ಮುಂದೆ ದೊಡ್ಡ ದೇಶಾಭಿಮಾನಿಗಳಾಗುವರೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ನಾನು ದೊಡ್ಡ ಭಾಷಣ ಅಥವಾ ಉಪದೇಶ ಮಾಡಲು ಇಲ್ಲಿ ನಿಂತಿಲ್ಲ. ಆದರೂ ಇನ್ನು ಒಂದೆರಡು ಮಾತನ್ನು ಹೇಳಿ ನಾನು ನನ್ನ ಭಾಷಣವನ್ನು ನಿಲ್ಲಿಸುತ್ತೇನೆ. ದೊಡ್ಡ ಭಾಷಣದಿಂದ ತಮ್ಮುಗಳ ಮನಸ್ಸಿನಲ್ಲಿ ಬೇಸರವನ್ನುಂಟುಮಾಡಲು ನನಗೆ ಇಷ್ಟವಿಲ್ಲ. ಅಂತಹ ದೊಡ್ಡ ಭಾಷಣಕ್ಕೆ ಇಲ್ಲಿ ಅವಶ್ಯಕತೆಯೂ ಇಲ್ಲ. ಇಲ್ಲಿ ನೆರೆದಿರುವ ತಾವುಗಳೆಲ್ಲರೂ ನನಗಿಂತಲೂ ಹೆಚ್ಚು ತಿಳುವಳಿಕೆಯುಳ್ಳವರೇ ಆಗಿರುವಿರೆಂತ ತಿಳಿಯುತ್ತೇನೆ.

ಈ ಪಾಠಶಾಲೆಯಲ್ಲಿ ಈಗ ೩ ವರ್ಷಗಳಿಂದಲೂ ಇಂಥಾ ವಿದ್ಯಾವಸ್ತುಪ್ರದರ್ಶನವನ್ನು ಇಲ್ಲಿನ ಹೆಡ್ ಮಿಸ್ಟ್ರೆಸ್‌ರವರು ಏರ್ಪಾಡು ಮಾಡಿ ತಮ್ಮ ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಪ್ರೋತ್ಸಾಹವನ್ನು ಕೊಡುತ್ತಿರುವುದು ಬಹಳ ಶ್ಲಾಘನೀಯವಾಗಿದೆ. ಇದರಿಂದ ಈ ಹೆಡ್ ಮಿಸ್ಟ್ರೆಸ್‌ರವರಿಗೆ ತಮ್ಮ ಶಾಲೆಯ ಮಕ್ಕಳ ಏಳಿಗೆಯಲ್ಲಿ ಎಷ್ಟು ವಂಟಿನ ಆಸಕ್ತಿ ಇದೆ ಎನ್ನುವುದನ್ನು ತೋರ್ಪಡಿಸುತ್ತದೆ. ಹೀಗೆಯೇ ಎಲ್ಲಾ ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯಲ್ಲಿಯೂ ವಸ್ತುಪ್ರದರ್ಶನಗಳನ್ನು ಮಾಡಿಸಿ ಹೆಡ್ ಮಿಸ್ಟ್ರೆಸ್ಸುಗಳು ಮಕ್ಕಳ ಏಳಿಗೆಯಲ್ಲಿ ಭಾಗಿಗಳಾಗುವರೆಂತ ಆಶಿಸುತ್ತೇನೆ. ಮಾಧ್ಯಮಿಕ ಪಾಠಶಾಲೆಯಾದರೂ ಇಲ್ಲಿನ ಚಿಕ್ಕ ಮಕ್ಕಳು ಇಷ್ಟು ಶ್ರದ್ಧೆವಹಿಸಿ ಉತ್ತಮವಾದ ಸಾಮಾನುಗಳನ್ನು ತಯಾರಿಸಿ ಇಲ್ಲಿ ಪ್ರದರ್ಶಿಸಿರುವುದು ಬಹಳ ಸಂತೋಷಕರವಾಗಿದೆ. ಹೀಗೆಯೇ ನಮ್ಮ ಮಹಿಳೆಯರು ಇಂಥಾ ಪಾಠಶಾಲೆಗಳಲ್ಲಿ ಅಭಿಮಾನವಿಟ್ಟು ತಮ್ಮ ಮಕ್ಕಳ ಕೈಲಿ ಉತ್ತಮವಾದ ಸಾಮಾನುಗಳನ್ನು ತಯಾರು ಮಾಡಿಸಿ ಅವರಿಗೆ ಕುಶಲವಿದ್ಯೆ, ಕೈಗಾರಿಕೆ ಮುಂತಾದ ಕಾರ್ಯಗಳಲ್ಲಿ ಹೆಚ್ಚು ಉತ್ಸಾಹ ಹುಟ್ಟುವಂತೆ ಮಾಡಿ ಮಾತೃಭೂಮಿಯ ಉನ್ನತಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡುವರೆಂತ ನಂಬಿದ್ದೇನೆ. ಮಕ್ಕಳ ಕೆಟ್ಟದ್ದು ಒಳ್ಳೆಯದಕ್ಕೆ ತಾಯಂದಿರೇ ಕಾರಣರು. 'ತಾಯಂತೆ ಮಗು, ನೂಲಿನಂತೆ ಶೇಲೆ' ಎಂಬ ಗಾದೆಯ ಹಾಗೆ ತಾಯಂದಿರಿಂದಲೇ ಮಕ್ಕಳು ಕಲಿಯುತ್ತಿವೆ. ಈಗಿನ ಮಕ್ಕಳೆ ಮುಂದಿನ ತಾಯಂದಿರು. ಮನೆಯು ಗಟ್ಟಿಯಾಗಿರುವುದಕ್ಕೆ ಹ್ಯಾಗೆ ಅಸ್ತಿವಾರವು ಚೆನ್ನಾಗಿರಬೇಕೋ ಹಾಗೆಯೇ ಮಕ್ಕಳ ಎಳೆ ಮನಸ್ಸಿನಲ್ಲಿ ನೆಡುವ ಬೀಜವು ಚೆನ್ನಾಗಿರಬೇಕು.

ಇನ್ನು ಒಂದೇ ಒಂದು ಮುಖ್ಯವಾದ ವಿಷಯವನ್ನು ತಿಳಿಸಬೇಕೆಂತ ಅಪೇಕ್ಷಿಸುತ್ತೇನೆ. ಎನೋ ಕಂತೆಪುರಾಣ ಹೇಳುತ್ತೇನೆಂತ ಜಿಗುಪ್ಸೆಪಟ್ಟುಕೊಳ್ಳದೆ ಸಾವಧಾನದಿಂದ ಕೇಳಬೇಕೆಂತ ಪ್ರಾರ್ಥಿಸುತ್ತೇನೆ. ಈ ಶಾಲೆಯನ್ನು ಪ್ರವೇಶಿಸುವಾಗ ನನಗೆ ಒಂದೆರಡು ಕೊರತೆಗಳು ಕಾಣಿಸಿದುವು. ಪಾಠಶಾಲೆಯ ಕಟ್ಟಡವು ಸಮರ್ಪಕವಾಗಿಲ್ಲ. ಮುಂದುಗಡೆ ಎರಡು ತರಗತಿಗಳು ಹೊರತು ಮಿಕ್ಕ ತರಗತಿಗಳು ಇರುವ ಕೊಠಡಿಗಳಿಗೆ ತಗಡು ಗೋಡೆಗಳೂ ಬಹಳ ತಗ್ಗಾದ ಛಾವಣಿಗಳೂ ಇವೆ. ಈ ತಗಡಿನ ಗೋಡೆಗಳಿಂದ ಈ ಪಾಠಶಾಲೆಗೆ Tin School ಎಂಬ ಹೆಸರೇ ಬಿದ್ದುಹೋಗಿದೆ. ಪುರಶೃಂಗಾರದಲ್ಲಿ ನಿರತರಾಗಿರುವ ನಮ್ಮ ದಿವಾನ್ ಸಾಹೇಬರ ದೃಷ್ಟಿಗೆ ಕೊರತೆ ಇದುವರೆಗೂ ಬಿದ್ದಿಲ್ಲವೋ?

ಈ ಪಾಠಶಾಲೆಯು ಸರಕಾರದ ಪಾಠಶಾಲೆಯಾದ್ದರಿಂದ ನಮ್ಮ ಘನ ಸರಕಾರದವರು ಈ ಅನಾರೋಗ್ಯಕರವಾದ ಕಟ್ಟಡವನ್ನು ಕೀಳಿಸಿ ಇಲ್ಲಿ ಓದುವಂಥಾ ನೂರಾರು ಬಾಲಕಿಯರ ಆರೋಗ್ಯವನ್ನು ಗಮನಿಸಿ ಉತ್ತಮವಾದ ಕಟ್ಟಡವನ್ನು ಶೀಘ್ರದಲ್ಲೇ ಕಟ್ಟಿಸುವುದಲ್ಲದೆ ಪಾಠಶಾಲೆಯ ಸುತ್ತಲೂ ಮಕ್ಕಳ ಆಟಪಾಟಗಳಿಗಾಗಿ ಸ್ಥಳವನ್ನು ಏರ್ಪಾಡುಮಾಡಿಕೊಡುವರೆಂತ ನಂಬಿದ್ದೇನೆ, ಮತ್ತು ವಿದ್ಯಾಭಿರುಚಿ ಹೆಚ್ಚಿ ಮಕ್ಕಳು ಶಾಲೆಗೆ ಬರುವುದು ಹೆಚ್ಚಾಗಿರುವುದರಿಂದ ಸುಶಿಕ್ಷಿತರಾದ ಇನ್ನೂ ಹೆಚ್ಚು ಮಂದಿ ಉಪಾಧ್ಯಾಯಿನಿಯರನ್ನೂ ಸರಕಾರದವರು ಒದಗಿಸಿಕೊಡಬೇಕಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ಪಾಠಹೇಳಲು ಸಾಕಷ್ಟು ಉಪಾಧ್ಯಾಯಿನಿಯರಿಲ್ಲದಿದ್ದರೆ ಅಂತಹ ಶಾಲೆಗಳಿಂದ ಮಕ್ಕಳಿಗೆ ಕೆಡುಕು ವಿನಹ ಒಳ್ಳೆಯದಾಗುವುದಿಲ್ಲ. ಈ ಕುಂದುಕೊರತೆಗಳಿಗೆ ನಮ್ಮ ಘನ ಸರಕಾರವು ಅತಿ ಶೀಘ್ರದಲ್ಲೇ ಗಮನ ಕೊಡಲೆಂದು ನಾನು ಭಗವಂತನನ್ನು ಪ್ರಾರ್ಥಿಸುತ್ತೇನೆ. ಮತ್ತೊಮ್ಮೆ ನಾನು ಈ ಕಮಿಟಿಯವರಿಗೂ, ಹೆಡ್ ಮಿಸ್ಟ್ರೆಸ್‌ರವರಿಗೂ, ಇಷ್ಟು ಹೊತ್ತು ಸಾವಧಾನದಿಂದ ನನ್ನ ಭಾಷಣವನ್ನು ಕೇಳಿದ ತಮ್ಮೆಲ್ಲರಿಗೂ ವಂದಿಸಿ ಈ ಪ್ರದರ್ಶನವನ್ನು ತೆರೆಯುತ್ತೇನೆ. ಈ ಪಾಠಶಾಲೆಯು ಎಲ್ಲಾ ವಿಷಯದಲ್ಲೂ ಅಭಿವೃದ್ಧಿಹೊಂದಲೆಂತ ನಾನು ದೇವರನ್ನು ಪ್ರಾರ್ಥಿಸುತ್ತೇನೆ.

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH
W/WATCHES ETD 2 YEARS. ROUND NICKEL 2/14/-, RADIUM DIAL 3/12/-: GOLDEN 3/14/- SQUARE NICKEL 4/6/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 5/8/-. P/POSTAGE -/7/-
POST FREE ON 3. G.T.CO. 185 MANICKTOLA ST. CALCUTTA

'ಮೂಲ್ಕಿ ಗ್ರೇಂಡ್ ರೇಫ್‌ಲ್'
(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)
ಮೂಲ್ಕಿ, ದ. ಕನ್ನಡ.

ಲೆಫ್ಟು ಆಫ್ಸೈರು ತಾರೀಕು	ಸೋಡ್ತಿ ತೆಗೆಯುವ ತಾರೀಕು
25-1-1937	31-1-1937

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.
20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5-0-0 ಮಾತ್ರ.
ಜಾಗ್ರತೆ ಮಾಡಿರಿ! ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ!!
ಸೋಡ್ತಿ ತೆಗೆಂಬ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸಿಡೋಣಾಗಲಿಕ್ಕಿಲ್ಲ.
ಹೆಚ್ಚಿನ ಮಾಹಿತಿಗೆ ಈ ಘನ ವಿಳಾಸಕ್ಕೆ ಕೂಡಲೇ ಬರೆಯಿರಿ:—
ಕಾರ್ಯದರ್ಶಿ,
"ದಿ ಮೂಲ್ಕಿ ಗ್ರೇಂಡ್ ರೇಫ್‌ಲ್"
ಮೂಲ್ಕಿ, ದ. ಕನ್ನಡ.

WANTED
In the South Kanara District young and ambitious m[illegible] on very liberal terms, to represent the BHARAT [illegible]SURANCE COMPANY, LTD., LAHORE. An excellent [illegible]pportunity to earn a decent living.
Apply to:—
DUTT & CO., *Chief Agents*, KARWAR.